Noopura Bhramari Dance Journal Publication.
Copyright protected article. Infringement of copyright is punishable offence. No part of this publication is allowed for copy or reproduction of material.

"ನೃತ್ಯಪ್ರಕಾರ — ಜಕ್ಕಡೀ"

(ಲೇಖನ - ಕಾಂಚನ ರೋಹಿಣಿ ಸುಬ್ಬರತ್ನಂ)

(ಈ ಲೇಖನವನ್ನು ಮಹಾನ್ ಸಂಶೋಧಕರೂ, ಪ್ರಕಾಂಡ ಪಂಡಿತರೂ ಆದ ಪದ್ಮಶ್ರೀ, ಮಹಾಮಹೋಪಾಧ್ಯಾಯ ಡಾ. ರಾ. ಸತ್ಯನಾರಾಯಣರವರಿಗೆ ಸಮರ್ಪಿಸುತ್ತಿದ್ದೇನೆ. �

ಪಂಡರೀಕ ವಿಠಲನ ಜಕ್ಕಡೀ —

16ನೆಯ ಶತಮಾನದಲ್ಲಿ ಕನ್ನಡಿಗನಾಗಿದ್ದ ಶ್ರೀಮದ್ ಪಂಡರೀಕ ವಿಠ್ಠಲನು ಇಂದು ಕರ್ಣಾಟಕ ಸಂಗೀತವೆಂದು ಪ್ರಸಿದ್ಧವಾದ ರಾಗಗಳಿಗಾಗಿ 'ಸದ್ರಾಗಚಂದ್ರೋದಯ'ವನ್ನೂ, ಇಂದು ಹಿಂದೂಸ್ಥಾನೀ ಸಂಗೀತವೆಂದು ಪ್ರಸಿದ್ಧವಾಗಿರುವ ರಾಗಗಳನ್ನು ವಿವರಿಸುವ ಗ್ರಂಥಗಳಾದ 'ರಾಗಮಂಜರೀ' - 'ರಾಗಮಾಲಾ'ಗಳನ್ನೂ, ನೃತ್ಯ ಪ್ರಪಂಚಕ್ಕಾಗಿ 'ನರ್ತನನಿರ್ಣಯ'ವನ್ನೂ ರಚಿಸಿದ್ದಾನೆ. ನರ್ತನನಿರ್ಣಯವನ್ನು ನರ್ತಕನಿರ್ಣಯವೆಂದೂ ಕರೆದಿದ್ದಾನೆ. ನರ್ತನನಿರ್ಣಯದಲ್ಲಿ ನಾಲ್ಕು ಪ್ರಕರಣಗಳಲ್ಲಿ ನರ್ತನದಲ್ಲಿ ಪ್ರಮುಖ ಪಾತ್ರವನ್ನು ವಹಿಸುವ ತಾಲಧಾರಿ (ನಟ್ಟುವಾಂಗ), ಮೃದಂಗೀ, ಗಾಯಕ ಮತ್ತು ನರ್ತಕರುಗಳಿಗೆ ಅವಶ್ಯಕವಾದ ವಿಷಯಗಳನ್ನು ಬೋಧಿಸಲಾಗಿದೆ. ಬಿಕಾನೀರಿನ ಮಹಾರಾಜ ಸಂಸ್ಕೃತ ಹಸ್ತಪ್ರತಿಗಳ ಭಂಡಾರದಲ್ಲಿ ಎರಡನೆಯ ಆಕರದಲ್ಲಿರುವ 65ನೆಯ ಸಂಖ್ಯೆಯ ಹಸ್ತಪ್ರತಿಯು ಸಮಗ್ರವಾಗಿದ್ದು ಮೇಲಿನ ನಾಲ್ಕು ಪ್ರಕರಣಗಳೇ ಅಲ್ಲದೆ "ನಾಟಕ ಪ್ರಕರಣ"ವೆಂಬ ಐದನೆಯ ಪ್ರಕರಣವನ್ನೂ ಒಳಗೊಂಡಿದ್ದು ತಮ್ಮ ಗ್ರಂಥ ಸಂಪಾದನೆಯಲ್ಲಿ ಬಳಸಿಕೊಳ್ಳಲೆಂದು— "ನರ್ತನನಿರ್ಣಯದ ಈ ಬಿಕಾನೀರ್ ಮಾತೃಕೆಯನ್ನು ಪ್ರತಿಮಾಡಿಸಿಕೊಳ್ಳಲು ಎಷ್ಟೋ ಪ್ರಯತ್ನಪಟ್ಟರೂ ನಾನು ವಿಫಲನಾಗಿದ್ದೇನೆ. ಇವು ದೊರೆತಿದ್ದರೆ ಐದನೆಯ ಪ್ರಕರಣವನ್ನು ಪ್ರಕಟಿಸುವುದಷ್ಟೋ ಅಲ್ಲದೆ ನರ್ತಕ ಪ್ರಕರಣದ ಕೊನೆಯ ಭಾಗದಲ್ಲಿರುವ ಒಂದೆರಡು ಲೋಪದೋಷಗಳನ್ನು ತುಂಬಲೂ, ಮಸುಕಾಗಿರುವ ಒಂದೆರಡು ಪಾಠಗಳನ್ನು ಶೋಧಿಸಲೂ ನೆರವಾಗುತ್ತಿತ್ತು", ಎಂದು ಪಂಡರೀಕ ವಿಠ್ಠಲನ ಮೇಲೆ ಹೇಳಿದ ನಾಲ್ಕೂ ಗ್ರಂಥಗಳನ್ನು ಒಂದೆಡೆಯೇ ಸಂಪಾದಿಸಿ ವಿಮರ್ಶೆ, ವ್ಯಾಖ್ಯಾನ, ಟಿಪ್ಪಣಿ ಇತ್ಯಾದಿಗಳನ್ನು ಸಮಗ್ರವಾಗಿ ಬರೆದಂತಹ ತಮ್ಮ 'ಪುಂಡರೀಕಮಾಲಾ' ಗ್ರಂಥದಲ್ಲಿ ಮಹಾಮಹೋಪಾಧ್ಯಾಯ ಡಾ. ರಾ. ಸತ್ಯನಾರಾಯಣರವರು ಬರೆದಿದ್ದಾರೆ. ಈ 'ನಾಟಕ ಪ್ರಕರಣ' ವು ದೊರೆತು ವಿದ್ವಾಂಸರಾದ ಯಾರಾದರೂ ಸಂಪಾದಿಸಿ ಪ್ರಕಟಿಸಿದಲ್ಲಿ ರಂಗಪ್ರಪಂಚಕ್ಕೊಂದು ಮಹತ್ವದ ಕೊಡುಗೆಯಾದೀತು.

ನರ್ತನನಿರ್ಣಯದ ಆರಂಭದಲ್ಲಿ ತನ್ನ ಅಥವಾ ಆಶ್ರಯದಾತನ ಏನೊಂದು ಸಂಗತಿಯನ್ನೂ ತಿಳಿಸದ ಪಂಡರೀವಿಠಲನು ವಿರಚಿತೇ.....' ಎಂಬ ಸಮಾಪ್ತಿವಾಕ್ಯವನ್ನು ಬರೆಯುತ್ತಾನೆ. ನರ್ತನನಿರ್ಣಯದ ಗ್ರಂಥಾಂತ್ಯದಲ್ಲಿ ನಾನಾ ದೇಶಗಳ, ನಾನಾ ಜನಗಳನ್ನು ಆಶ್ರಯಿಸಿ ಪ್ರಸಿದ್ಧವಾಗಿರುವ ದೇಶೀ ನೃತ್ಯಗಳು ಕೊನೆಯಿಲ್ಲದಷ್ಟಿವೆ, ಅವುಗಳನ್ನು ಹೇಗೆ ಮಾಡಿದರೆ ಸುಂದರವಾಗಿ ರುಚಿಸುತ್ತವೊ ಹಾಗೆಯೇ ನೃತ್ಯ ವಿಶಾರದರು ಮಾಡಬೇಕು ಎಂದು ಹೇಳಿ ಲಕ್ಷ್ಯ, ಲಕ್ಷಣಗಳಲ್ಲಿ ಸಂದಿಗ್ಧವಾದುದು, ಕುರುಡು ಪರಂಪರೆಯಿಂದ ಬಂದುದು ಇತ್ಯಾದಿ ನರ್ತನಗಳನ್ನು ಪಂಡರೀ ವಿಠ್ಠಲನು ನಿಃಸಂದಿಗ್ಧವನ್ನಾಗಿ ಮಾಡಿದನು ಎಂದು 906ನೇ ಶ್ಲೋಕದಲ್ಲಿ ಹೇಳಿದ್ದನ್ನು ಗಮನಿಸಬೇಕು. ಗ್ರಂಥಾಂತ್ಯದಲ್ಲಿ 'ಅಕಬರ ನೃಪ ರುಚ್ಯರ್ಥ'ವಾಗಿ ರಚಿಸಿರುವುದಾಗಿ - ಎಂದು ಹೇಳಿದರೂ 'ಭೂ ಲೋಕದಲ್ಲಿ ಸರಳಗೊಳಿಸಿದ ಈ ಬಹುವಾದ ಭೇದಗಳುಳ್ಳ ಸಂಗೀತಶಾಸ್ತ್ರಗ್ರಂಥವನ್ನು ರಚಿಸಿದ್ದೇನೆ, ಇದರಿಂದ ಸಜ್ಜನರ ಹೃದಯಕ್ಕೆ ಸುಖವಾಗಲಿ, ಪ್ರಪಂಚದಲ್ಲಿ ಪ್ರಸಿದ್ಧವಾಗಿರುವ ಕಲೆಯಲ್ಲಿ ಆಯಾ ಪ್ರಯೋಗಗಳು ಅಧಿಕವಾಗಿರುವ ನರ್ತನನಿರ್ಣಯವನ್ನು ನೋಡಿ ತಿಳಿದು, ಶ್ರೀಯುಕ್ತ ತಾಲ, -ಮೃದಂಗ, - ಗಾನಗಳಲ್ಲಿ ಚತುರರೂ ಶ್ರೀಯುಕ್ತ ಕೊಳಲು, - ನೃತ್ಯಗಳಲ್ಲಿ ಅಗ್ರಗಣ್ಯರೂ ಆಗಲಿ, ಯಾವಾಗಲೂ ಗುರುಗಳಾಗಿ ಸದಾ ಕಾಲದಲ್ಲಿಯೂ ಪಂಡಿತರಾಗಿ ಕಂಡುಬರಲಿ' ಎಂದು ಹೇಳಿ ನರ್ತನನಿರ್ಣಯ ಗ್ರಂಥವನ್ನು ಸಜ್ಜನ ಪಂಡಿತರಿಗೇ ಅರ್ಪಿಸಿರುವುದಾಗಿ ತಿಳಿದುಬರುತ್ತದೆ. ಪಂಡರೀಕ ವಿಠ್ಠಲನು ತನ್ನ 'ರಾಗಮಂಜರೀ' ಗ್ರಂಥದ 13ನೆಯ ಶ್ಲೋಕದಲ್ಲಿಯಾದರೂ 'ಪ್ರಭೂ, ಮೂರು ಲೋಕಗಳಲ್ಲಿಯೂ ಪ್ರಜಾಮಂಡಲವು ನಿನ್ನ ಆಜ್ಞೆಯನ್ನು ಪರಿಪಾಲಿಸುತ್ತದೆ. ಆದರೆ ನನ್ನ ಮೇಲಿನ ಪ್ರೇಮದಿಂದ ಸಜ್ಜನರು ನನ್ನೀ ಗ್ರಂಥವನ್ನು ಪುರಸ್ಕರಿಸಲಿ' ಎನ್ನುವ ಮಾತಿನಲ್ಲಿ 'ನಾನೇನೂ ನಿನ್ನ ಪ್ರಜೆಯಲ್ಲ, ನಿನ್ನಂತಹ ದೊರೆಗಳನ್ನು ಮೆಚ್ಚಿಸುವ ಉದ್ದೇಶ ಮಾತ್ರದಿಂದ ಈ ಗ್ರಂಥವನ್ನು ರಚಿಸುತ್ತಿಲ್ಲ, ಅದು ವಿದ್ವತ್ ಪಕ್ಷಪಾತಿಗಳಾದ ಪಂಡಿತರೇ ಪುರಸ್ಕರಿಸುವಂತಿರುತ್ತದೆ 'ಎಂದು ತನ್ನ ಹೃದಯವನ್ನೂ, ರಾಜನಿಗೇ ಹೇಳುವ ಗಟ್ಟಿಗತನವನ್ನೂ ತೋರಿದ್ದಾನೆ. ನರ್ತನನಿರ್ಣಯದ ಕಡೆಯ ಭಾಗದಲ್ಲಿ ಅನೇಕ ನಿಬಂಧ ಹಾಗೂ ಅನಿಬಂಧ ದೇಶೀ ನೃತ್ಯಗಳನ್ನು ಹೇಳಿದರೂ ' ಚಾರಿಗಳು ನೆಲೆಸಿರುವ, ಸೌಂದರ್ಯದ ಅಧಿಷ್ಠಾನವಿರುವ ನೃತ್ಯವೇ ನೃತ್ಯ ; ಉಳಿದಿದ್ದು ಅದರ ಅಣಕ' ಎನ್ನುವ ಗ್ರಂಥಕರ್ತನ ಮಾತುಗಳು ಗಮನೀಯ ಹಾಗೂ ಮನನೀಯ.

ನರ್ತನನಿರ್ಣಯಕರ್ತೃವು ಹೇಳಿದ ಅನೇಕ ಅನಿಬಂಧ ನೃತ್ಯಗಳಲ್ಲಿ ಈ ಲೇಖನದ ಪರಮ ಉದ್ದಿಶ್ಯವಾದ "ಜಕ್ಕಡೀ" ಎಂಬ ನೃತ್ಯ ಪ್ರಕಾರವೂ ಒಂದು. 892 ರಿಂದ 896 ರವರೆಗಿನ ಶ್ಲೋಕಗಳಲ್ಲಿ ಆತನು ಜಕ್ಕಡೀಯನ್ನು ವಿವರಿಸಿದ್ದಾನೆ. ಜಕ್ಕಡೀ ನೃತ್ಯವನ್ನು

Copyright protected article. Infringement of copyright is punishable offence. No part of this publication is allowed for copy or reproduction of material.

Copyright protected article. Infringement of copyright is punishable offence. No part of this publication is allowed for copy or reproduction of material.

ಆತನು ಯವನ ಭಾಷೆಯಿಂದ ಕೂಡಿ ಫಾರಸೀ ದೇಶದ ಪಂಡಿತರು ತಮ್ಮ ತಮ್ಮ ಭಾಷೆಯಲ್ಲಿ ಯಾವುದನ್ನು ಹಾಡುತ್ತಾರೋ ಅದು ಯವನರಿಗೆ ಅತಿಶಯವಾಗಿ ಪ್ರಿಯವ್ರೋ, ಅದು ಜಕ್ಕಡೀ ಎಂದು ಹೇಳಿದರೂ ಜಕ್ಕಡೀ ಎಂಬ ನಾಮವಿರುವ ಯಾವುದೇ ಪರ್ಶಿಯನ್ (ಪ್ರಾಚೀನ ಇರಾನ್) ಹಾಗೂ ಗ್ರೀಕ್ ನೃತ್ಯಗಳು ಕಂಡುಬರುವುದೇ ಇಲ್ಲವೆಂಬುದರ ಜೊತೆಗೆ ಜಕ್ಕಡೀಯೆಂಬ ಶಬ್ದವೇ ಅವರಲ್ಲಿ ಕಂಡುಬರುವುದಿಲ್ಲದಿರುವುದು ಆಶ್ಚರ್ಯವಾಗಿದೆ. ನರ್ತನನಿರ್ಣಯಕಾರನು, ಅಕಬರನ ಆಸ್ಥಾನದಲ್ಲಿದ್ದ ಕಾಲದಲ್ಲಿ ಬಹುವಾಗಿ ಗ್ರೀಕ್ ಭಾಷೆಯಲ್ಲಿ ಇದ್ದ ಗ್ರಂಥಗಳ ಅಧ್ಯಯನವೂ ಆತನ ಗ್ರಂಥಾಲಯದಲ್ಲಿ ಬೃಹತ್ ಸಂಕಲನವೂ ನಡೆಯುತ್ತಿದ್ದು, ಅಕಬರನ ಆಸ್ಥಾನದ ಕವಿಗಳೂ, ಗೀತರಚನಾಕಾರರೂ ತಮ್ಮ ಗೀತಗಳಲ್ಲಿ ಯವನ ಭಾಷೆಯ ಪದಗಳನ್ನೂ ಮಧ್ಯ ಮಧ್ಯದಲ್ಲಿ ಉಪಯೋಗಿಸಿ ರಚಿಸುತ್ತಿದ್ದರೇ ತಿಳಿಯದು. ಆದರೆ ಪರ್ಶಿಯನ್ ಸಂಗೀತವನ್ನೂ ಅದರ ಪರಿಭಾಷೆಗಳನ್ನೂ ಅರಿತು ಅದನ್ನು ತನ್ನ ಗ್ರಥಗಳಲ್ಲಿಯೂ ಪ್ರಯೋಗಿಸಿದ ಪುಂಡರೀಕ ವಿಠಲನು, ಇಲ್ಲಿ ಯವನರಿಗೆ ಪ್ರಿಯವಾದದ್ದು ಎಂದೂ, ಫಾರಸೀಗಳು ಅವರ ಭಾಷೆಯಲ್ಲಿ ಉದ್ಗ್ರಾಹವನ್ನು ಹಾಡಿದ್ದಾರೆ ಎಂಬುದಾಗಿ ಉಲ್ಲೇಖಿಸಿದ್ದಾನೆಯೇ ಹೊರತು ಜಕ್ಕಡೀ ನೃತ್ಯವು ಯವನರಿಂದಲೇ ಬಂದದ್ದು ಎಂದು ಎಲ್ಲಿಯೂ ಹೇಳಿಲ್ಲವೆಂಬುದನ್ನು ಅತ್ಯಗತ್ಯವಾಗಿ ಗಮನಿಸಬೇಕಾಗಿದೆ. ಅಲ್ಲದೆ ಜಕ್ಕಡೀ ಶಬ್ದವು ಭಾರತದ್ದೇ ಆಗಿದ್ದು ಪರ್ಶಿಯನ್ ಸಂಗೀತದ ಪರಿಭಾಷಾ ಶಬ್ದಗಳಾದ ತಬಲಾ, ಖ್ಯಾಲ್, ಠುಮ್ರಿ, ಮುಂತಾದ ಯಾವುದೇ ಪದಗಳನ್ನು ಹೋಲುವುದಿಲ್ಲವೆಂದೂ ಗಮನಿಸಬೇಕು. ಬಹುಶಃ ಯವನರಿಗೆ, ಅತಿ ಪ್ರಾಚೀನದಿಂದಲೇ ಯಕ್ಷಿಣಿ ಹಾಗೂ ಮಾತೃಆರಾಧನೆಗಳು ಭಾರತದಿಂದಲೇ ವಲಸೆ ಹೋಗಿದ್ದು ಬಹುಶಃ ಅಲ್ಲಿಂದಲೋ ಅಥವಾ ಭಾರತದಿಂದಲೇ ಪರ್ಶಿಯನ್ನರಿಗೂ ಸಹ ಕಾಲಾಂತರದಲ್ಲಿ ವಲಸೆ ಹೋಗಿ ಬಹುಪ್ರಿಯವಾಗಿ, ನರ್ತಿಸಲ್ಪಡುತ್ತಿದ್ದ ಈ ನೃತ್ಯಪ್ರಕಾರವನ್ನು ಅವರದೇ ಭಾಷೆಗೂ, ಶೈಲಿಗೂ, ವೇಷಭೂಷಣಗಳಿಗೂ ಹೊಂದಿಸಿಕೊಂಡಿರುವ ಸಾಧ್ಯತೆಗಳೇ ಹೆಚ್ಚಿದ್ದು ಯವನರಿಗೂ ಪಾರಸಿಗಳಿಗೂ(ಭಾರತಕ್ಕೆ ಹಿಂದೆಯೇ ಬಂದು ನೆಲೆಸಿದ ಪರ್ಶಿಯನ್ನರು) ಪ್ರಿಯವಾದದ್ದು ಎಂದು ಹೇಳುವ ಪಂಡರೀಕ ವಿಠ್ಠಲನು ಯಕ್ಷಿಣಿ ಶಬ್ದದ ಪ್ರಾಕೃತ ರೂಪವಾದ ಜಕ್ಕಡೀ ಎಂಬ ಹೆಸರನ್ನು ಹೇಳುವ ಈ ಸಂದರ್ಭದಲ್ಲಿ ಈ ನೃತ್ಯ ಪ್ರಕಾರವು ಭಾರತದ್ದೇ ಎಂಬ ಇತಿಹಾಸದ ಸೂಚನೆಯನ್ನು ನೀಡುವ ಸಲುವಾಗಿ ಪ್ರಾಚೀನ ಪರಂಪರೆಯಿಂದ ಬಂದಿದ್ದ, ಜನಪದರಲ್ಲಿಯೂ ಶಿಷ್ಟರಲ್ಲಿಯೂ ಧಾರ್ಮಿಕ ಸಂದರ್ಭಗಳಲ್ಲಿ ವಿವಿಧ ರೀತಿಗಳಲ್ಲಿ ಆಚರಣೆಯಲ್ಲಿದ್ದ ಈ ನೃತ್ಯಪ್ರಕಾರವನ್ನು ಹೇಳುತ್ತಿದ್ದಾನೆ. ಈ ಮೊದಲೇ ಧಾರ್ಮಿಕ ಆಚರಣೆಯಲ್ಲಿ ಇದ್ದುದನ್ನು ಜಕ್ಕಡೀ ನಾಮೋಲ್ಲೇಖವನ್ನು ಮಾಡದಿದ್ದರೂ, ತನ್ನ ಆಶ್ರಯದಾತರಾಗಿದ್ದ, ಅಕಬರನ ಎಡಬಲಭುಜಗಳಂತಿದ್ದ ಮಾನಸಿಂಹ - ಮಾಧವಸಿಂಹರ ಪೈಕಿ ಮಾಧವಸಿಂಹರಾಜನು ಪರಮ ವಿಷ್ಣುಭಕ್ತನಾಗಿದ್ದು, ವಿಷ್ಣುಭಕ್ತಿ ಸಮರ್ಪಣೆಗೆಂದು ಯಾವಾಗಲೂ ಉಪನಿಷತ್ತುಗಳನ್ನು ಪ್ರತಿಪಾದಿಸುವವನಾದ ಪರಮಾತ್ಮನಲ್ಲಿ ಭಕ್ತಿಯನ್ನು ಉಂಟುಮಾಡಲೂ, ಸಾಮಾನ್ಯ ಮಾನವನಲ್ಲಿ ಭಕ್ತಿಯನ್ನೂ, ಆಸ್ಥಾನದ ಸಾಮಾಜಿಕರ ಮನಸ್ಸಿನಲ್ಲಿ ಸಾಹಿತ್ಯ ಸಂಗೀತ ನರ್ತನಗಳಲ್ಲಿ ಚಮತ್ಕಾರವು ಉದಯಿಸುವಂತೆ ಮಾಡಲು ಆಗಾಗ್ಗೆ ನಾಟ್ಯವನ್ನು ಏರ್ಪಡಿಸುತ್ತಿದ್ದ (ರಾಗಮಾಲಾ - 7ನೆಯ ಶ್ಲೋಕ) ಕಾಲದಲ್ಲಿಯೋ ಅಥವಾ ಬೇರೆಡೆಯಲ್ಲಿಯೋ ಜಕ್ಕಡೀಯನ್ನೂ, ಬೇರೆ ದೇಶೀ ನೃತ್ಯಗಳನ್ನೂ ಆತ ನೋಡಿ, ಅರಿತು, ನುರಿತವನಾಗಿರಬೇಕು. ಹಾಗಲ್ಲವಾದಲ್ಲಿ, ಭಾರತೀಯರ ಹಾಗೂ ಪರ್ಶಿಯನ್ ಸಂಗೀತ ನೃತ್ಯಗಳ ಲಕ್ಷ್ಯ - ಲಕ್ಷಣಗಳನ್ನು ಅರಿತು ಅದೇ ಭಾಷೆಯ ಎಷ್ಟೋ ಪರಿಭಾಷೆಗಳನ್ನೂ ಹೇಳುವ, ಮಹಾವಿದ್ವಾಂಸನಾಗಿದ್ದ ಆತನು, ಯವನರಿಗೆ ಪ್ರಿಯವಾದ; ನಿಯಮಬದ್ಧ ಆಂಗಿಕ, ಸಾತ್ವಿಕಾಭಿನಯಗಳಿಲ್ಲದ ಈ ನರ್ತನವು ದೇಶೀ ಎಂದು ಹೇಳಿ, ಅವರ ಭಾಷೆಯಲ್ಲಿದ್ದ ನರ್ತನದ ಹೆಸರನ್ನು ಹೇಳದೆ, ಜಕ್ಕಡೀ ಎಂಬ ದೇಶೀಯ ನೃತ್ಯದ ಹೆಸರನ್ನೇ ಹೇಳುತ್ತಿರಲಿಲ್ಲ.

ಪ್ರಾಕೃತ ಭಾಷಾ ರೂಪದಲ್ಲಿರುವ ಜಕ್ಕಡೀ ಹೆಸರಿನ ಈ ನೃತ್ಯವು ಪ್ರಾಚೀನ ಭಾರತದ್ದೇ, ಎಂದು ಸಾಧಿಸಲು ಯಕ್ಷ - ಯಕ್ಷಿಣಿಯರ ಬಗ್ಗೆ ಅರಿಯಬೇಕಾದ ಅಗತ್ಯವಿದೆ. ಈ ಅರಿವು ಶ್ರೀ ಆನಂದ ಕೆಂಟಿಶ್ ಕುಮಾರಸ್ವಾಮಿಯವರ 'YAKSAS' ಪುಸ್ತಕವನ್ನು ಓದದೆ ಸಂಪೂರ್ಣವಾಗಲಾರದು ಎಂದು ನನ್ನ ಪ್ರಾಮಾಣಿಕ ಅನಿಸಿಕೆ. ಓದಿದರೆ ನಾನು ಸಾಧಿಸಲೆಳೆಸುವ ವಿಷಯಗಳೂ ಹೆಚ್ಚು ಸ್ಪಷ್ಟವಾದೀತು. ಈ ಲೇಖನಕ್ಕಾಗಿ ಬಹಳವಾಗಿ ಓದಿ, ಯೂ ಟ್ಯೂಬ್ ಲಿಂಕ್ ಗಳಲ್ಲಿ ನೃತ್ಯಗಳನ್ನೂ ನೋಡಿರುವ ನನಗೆ ಶ್ರೀ ಆನಂದ ಕೆ. ಕುಮಾರಸ್ವಾಮಿಯವರ YAKSAS ಪುಸ್ತಕವನ್ನು ಯಕ್ಷಗಾನ ಸಂಶೋಧಕರೂ ತಮ್ಮ ಸಂಶೋಧನೆಗೆ ಬಳಸಿಕೊಳ್ಳಬೇಕಾದ ಅಗತ್ಯವಿದೆ ಹಾಗೂ ಯಕ್ಷಗಾನದ ವೇಷಭೂಷಣಗಳ ಬಗ್ಗೆ ಅರಿಯಲು ಬೌದ್ಧರ ಯಕ್ಷ ನೃತ್ಯದ ಬಗ್ಗೆ ಗಮನ ಹರಿಸುವುದೂ ಅಗತ್ಯವಿದೆಯೆನ್ನಿಸಿತು. ಜಕ್ಕಡೀ ನೃತ್ಯವು ಭಾರತದ್ದೇ ಎಂದು ಪ್ರಮಾಣಿಸಿ ಅನುಮಿತಿಯನ್ನು ಹೊರಡಿಸಲು ಯಕ್ಷರ ಕುರಿತು ಪ್ರಕೃತೋಪಯೋಗಿಯಾಗಿ ಕೆಲವು ವಿವರಗಳನ್ನು ಹೇಳದಿದ್ದಲ್ಲಿ ಜಕ್ಕಡೀಯ ಬಗ್ಗೆಯೂ ಅರಿವಾಗುವ ಸಂಭವವೇ ಇಲ್ಲದ ಕಾರಣ, ಜಕ್ಕಡೀಯ ಅರ್ಥವು ಯಕ್ಷಿಣಿ ಎಂದಾಗಿದ್ದು, ಯಕ್ಷಿಣಿಯ ಮೂಲವು ಬಹಳ ಪ್ರಾಚೀನವೂ, ಗಾಢವೂ ಆಗಿರುವುದರಿಂದ, ಇದರ ಬಗ್ಗೆ ವಿಷಯ ಬಾಹುಳ್ಯವೂ ಅಷ್ಟೇ ಇದೆ.

Copyright protected article. Infringement of copyright is punishable offence. No part of this publication is allowed for copy or reproduction of material.

ಮೊದಲಿಗೆ ಡಾ. ಸತ್ಯನಾರಾಯಣರವರು ತಮ್ಮ 'ಪುಂಡರೀಕಮಾಲಾ' ದಲ್ಲಿ ನರ್ತನನಿರ್ಣಯದ 'ಜಕ್ಕಡೀ' ನೃತ್ಯದ ಲಕ್ಷಣದ ಕನ್ನಡಾನುವಾದವನ್ನು ಪರಿಭಾಷೆಗಳ ಅರ್ಥ ಸಮೇತವಾಗಿ ನೀಡಿ, ಹಾಗೂ ಅದೇ ಪುಸ್ತಕದಲ್ಲಿ ಉಲ್ಲೇಖವಿರುವ ಯಕ್ಷ, ಜಕ್ಕಾ,

ಜಕ್ಕಾಪ್ರಹಾರ ಪದಗಳ ಅರ್ಥಗಳನ್ನೂ ನೀಡಿ ನಂತರ ಭಾರತದಲ್ಲಿರುವ ಜಕ್ಕಡೀ ಪದಕ್ಕೆ ಸಮೀಪದ ಶಬ್ದಗಳ ನೃತ್ಯಗಳ ಬಗ್ಗೆ ಹೇಳಲಾಗುವುದು.

ಜಕ್ಕಡೀ — ಪಂಡರೀಕ ವಿಠ್ಠಲನು ತನ್ನ ನರ್ತನನಿರ್ಣಯದ ನಾಲ್ಕನೆಯ ಪ್ರಕರಣದಲ್ಲಿ ನರ್ತಕ ಹಾಗೂ ನೃತ್ತಗಳನ್ನು ಕುರಿತು ಹೇಳುವಾಗ ಜಕ್ಕಡೀ ಎಂಬ ಈ ನೃತ್ಯಪ್ರಕಾರವು ಯವನ (ಗ್ರೀಕ್? ಪರ್ಶಿಯನ್?) ಭಾಷೆಯಿಂದ ಕೂಡಿ (ಸೀರೆಯ? ಉತ್ತರೀಯದ?) ಅಂಚನ್ನು ಹಿಡಿದುಕೊಂಡು ಯಾವುದನ್ನು ಹಾಡಲಾಗುತ್ತದೆಯೋ ಹಾಗೆಯೇ ಕಲ್ಲಾ(? ಕೌಲು) ಗಜರ (! ಗಜ಼ಲ್) ಇತ್ಯಾದಿಗಳ ಸಹಿತವಾಗಿ ಆಹಂಗದಿಂದ ಅಲಂಕೃತವಾಗಿ ಮೂರು ಲಯಗಳಲ್ಲಿ ನಾನಾ ರೀತಿಯಲ್ಲಿ ವಿಚಿತ್ರ ರೀತಿಗಳಿಂದ ಸುಂದರಗೊಳಿಸಿ ನರ್ತನವನ್ನು ಮಾಡಬೇಕು. ಕೋಮಲವಾದ ಅಂಗಾಂಗಗಳಿಂದ ಭ್ರಮರೀ ಮುಂತಾದುವುಗಳಿಂದ ಶೋಭಿಸುವ ನೃತ್ಯವನ್ನು ಧ್ರುವಾ, ಶಂಪಾ ಮುಂತಾದ ಭೇದಗಳಿರುವ ಸಶಬ್ದ ಕ್ರಿಯೆಯೊಡನೆ ಚೇಷ್ಟಾ ಇತ್ಯಾದಿಗಳಿಲ್ಲದೆ ಎಲ್ಲಿ ನೃತ್ಯವಾಗುತ್ತದೋ ಅದು ಜಕ್ಕಡೀ ಎಂದು ಸಮ್ಮತಿಸಿದೆ. ಪಾರಸೀ ದೇಶದ ಪಂಡಿತರು ಉದ್ಗ್ರಾಹ ಇತ್ಯಾದಿ ಪ್ರಬಂಧ ಧಾತುಗಳನ್ನು ತಮ್ಮ ತಮ್ಮ ಭಾಷೆಯಲ್ಲಿ ಯಾವುದನ್ನು ಹಾಡುತ್ತಾರೋ ಅದು(ಆ ನೃತ್ಯವು) ಯವನರಿಗೆ ಅತಿಶಯವಾಗಿ ಪ್ರಿಯವಾದ ಜಕ್ಕಡೀ ಎಂಬ ಹೆಸರಿನದು ಎಂದಿದ್ದಾನೆ. ಜಕ್ಕಡೀಯನ್ನು ಅನಿಬಂಧ ನೃತ್ಯವಾಗಿಯೇ ಹೇಳಿದ್ದಾನೆ.

"ನರ್ತನನಿರ್ಣಯದಲ್ಲಿ ಜಕ್ಕಡೀ ನೃತ್ಯಕ್ಕೆ ಹೇಳಿರುವ ಪರಿಭಾಷೆಗಳ ಅರ್ಥ" :—

Copyright protected article. Infringement of copyright is punishable offence. No part of this publication is allowed for copy or reproduction of material.

1..ಯವನ - ಗ್ರೀಕರು, ಪರ್ಶಿಯನ್ನರು.

2..ಕಲ್ಲಾ ಅಥವಾ ಕೌಲ

ಮತ್ತು

3..ಗಜರು —ಭಂಡಾರು ಲಕ್ಷ್ಮೀನಾರಾಯಣನು ತನ್ನ ಸಂಗೀತ ಸೂರ್ಯೋದಯದಲ್ಲಿ 'ತೌರುಷ್ಕದೇಶೋತ್ಥ ಗರ್ಜರು (=ಗಜ಼ಲ್) ವನ್ನೂ ಪಾರ್ಶ್ವದೇಶೋತ್ಥ(=ಪರ್ಶಿಯಾ ದೇಶ) ಭವ ಕಾಲು (=ಕೌಲು) ವನ್ನೂ ವಿವರಿಸುತ್ತಾನೆ. 'ಕಲ್ಲಾ' ಎಂದರೆ ಲ್ಯಾಟಿನ್ ಗ್ರೀಕ್ ಭಾಷೆಯಲ್ಲಿ fairest, most beautiful, slim and fair girl, good ಇತ್ಯಾದಿ ಅರ್ಥಗಳೂ, ಹಳೆಯ ಗ್ರೀಕ್ ಭಾಷೆಯಲ್ಲಿ 'ಕಲ್ಲಾ' ಎಂದರೆ beauty ಎಂಬ ಅರ್ಥಗಳೂ ಇವೆ. 'ಕೌಲ' ಎಂದರೆ ಗ್ರೀಕ್ ಭಾಷೆಯಲ್ಲಿ ಕಾಮೋದ್ರೇಕಗೊಂಡ ಹುಡುಗ, ಹುಡುಗಿ ಅಥವಾ ಸನ್ನಿವೇಶ ಎಂದೂ ಅರ್ಥವಿದೆ. ಭಾರತೀಯರಲ್ಲಿ ಕೌಲವೆಂದರೆ ತಂತ್ರಶಾಸ್ತ್ರದಲ್ಲಿ ಶಕ್ತಿಯನ್ನು ಆರಾಧಿಸುವ ಶಿವ ಹಾಗೂ ಶಕ್ತಿಯರ ಸಂಯೋಗವನ್ನು ಹೇಳುವಂತಹ ತಾಂತ್ರಿಕರ ಪರಂಪರೆಯ ಕುಲದವರನ್ನು ಕೌಲರೆನ್ನುತ್ತಾರೆ.

'ಗಜರ' ಎಂದರೆ ಉರ್ದು ಹಾಗೂ ಹಿಂದಿ ಭಾಷೆಯಲ್ಲಿ ಹೂಮಾಲೆ, ಹೂ ದಂಡೆ ಎಂದೂ, ಹೂ ಮಾಲೆಯ ರೀತಿಯ ಮುಂಗೈ (wrist) ಹಾಗೂ ಸುಂದರವಾಗಿ ಹೆಣೆದ ತಲೆಗೂದಲ ಅಲಂಕಾರಿಕ ಆಭರಣವೆಂದೂ ಅರ್ಥವಿದೆ.

ಪ್ರಾಚೀನ ಸಂಗೀತ ಪರಿಭಾಷೆಯಲ್ಲಿ ಗಜರವೆನ್ನುವುದು ಮೃದುವಾದ, ಅಲ್ಪ ಅಕ್ಷರಗಳನ್ನುಳ್ಳ, ಕೋಮಲವಾದ ನಾದವುಳ್ಳ ವಾದ್ಯ ಪ್ರಬಂಧ. ಅತಿ ಹೃಸ್ವವೂ ಅಲ್ಲದ ಅತಿ ದೀರ್ಘವೂ ಅಲ್ಲದ ಉದ್ಗ್ರಾಹವನ್ನು ಒಮ್ಮೆ ನುಡಿಸಿ ತಾಳವಾದಕನು ಉಚ್ಚತರವಾದ ಧ್ವನಿಯಲ್ಲಿ ಘೋಷವನ್ನು ಮಾಡಬೇಕು. ಮೃದುವಾದ ಅಕ್ಷರಗಳಿರುವ ಅಲ್ಪವೂ ಕೋಮಲವೂ ಆದ ನಾದವಿರುವ, ಪುನಃ ಪುನಃ ಪ್ರಸ್ತುತವಾಗುವ, ಅನೇಕ ವಾದ್ಯಗಳು ಸೇರಿರುವಂತಹ ವಾದ್ಯಖಂಡವನ್ನುಳ್ಳ ಈ ಪ್ರಬಂಧವು ಕೂಟಪಾಟಗಳಿಂದ ರಚಿತವಾಗಿರುತ್ತದೆ. (ಏಕರೂಪವಾದ ಕೂಟಪಾಟಗಳು ತದ್, ಧಿ, ಥೋ, ಟೆಂ, ಹೇಂ, ನಂ, ದೇಂ ಎಂಬ ಏಳು ವರ್ಣಗಳು 'ಶುದ್ಧ ಪಾಟಗಳು' ; ಈ ಶುದ್ಧ ಪಾಟವರ್ಣಗಳು ಸ್ವರಸಹಿತವಾಗಿ ಅಥವಾ ಸ್ವರರಹಿತವಾಗಿ ಅಥವಾ ಅವುಗಳ ಒಟ್ಟಿನಲ್ಲಿ ಅಥವಾ ಖಂಡ ಖಂಡವಾಗಿ ಇದ್ದರೆ ಅವುಗಳು 'ವ್ಯಾಪಕಪಾಟಗಳು' ; ಇವು ಕ ಖ ಇತ್ಯಾದಿ ಇಪ್ಪತ್ತು ವರ್ಣಗಳೊಡನೆ ಮಿಶ್ರಿತವಾದರೆ ಅಂತಹವುಗಳು 'ಕೂಟಪಾಟಗಳು'. ಶುದ್ಧ ಹಾಗೂ ಕೂಟಪಾಠಗಳೆರಡೂ ಬೆರಕೆಯಾಗಿದ್ದರೆ ಅವಕ್ಕೆ 'ಖಂಡಪಾಠ'ಗಳೆಂದು ಹೆಸರು. ತಿಲ್ಲಾನದಂತೆ ಪಾಟ - ಜತಿಗಳನ್ನು ಸ್ವರಗಳಿಗೆ ಅಳವಡಿಸಿ ಹಾಡುವುದು ಸ - ಸ್ವರ ಪಾಟ ; ಹಾಗಿರದೆ ಕೊನೆಗೋಲು, ನಟ್ಟುವಾಂಗಗಳಲ್ಲಿರುವಂತೆ ಸ್ವರಗಳಿಗೆ ಅಳವಡಿಸದೆಯೆ ಉಚ್ಚರಿಸುವುದು ಅ-ಸ್ವರ ಪಾಟ.)

ಗಜರದ ಬಗ್ಗೆ ಶಾರ್ಙ್ಗದೇವನೂ ಹೇಳಿದ್ದಾನೆ. ಸಂಗೀತರತ್ನಾಕರದ ವ್ಯಾಖ್ಯಾನವನ್ನು ಮಾಡುವಾಗ ಕಲ್ಲಿನಾಥನು ಇದನ್ನು ವಿವರಿಸಿ ಗಜರ ಪ್ರಬಂಧದ ಎಲ್ಲ ಅವಯವಗಳಿಗೂ ಪ್ರಾಕೃತರು 'ಪಡಿಘ'ವೆಂಬ ಹೆಸರಿಟ್ಟಿದ್ದಾರೆಂಬುದನ್ನು ಹೇಳಿದ್ದಾನೆ. ಪಂಡರೀಕ ವಿಠಲನನ್ನು ತನ್ನ ಸಂಗೀತಗುರುವೆಂದು ಭಾವಿಸಿದ್ದ ಶ್ರೀಕಂಠನು ಇದನ್ನು ಆಲಾಪಾಚಾರಿ ಎಂದಿದ್ದಾನೆ. ಪಂಡರೀಕ ವಿಠ್ಠಲನ ಕಾಲಕ್ಕಾಗಲೇ ಗಜರ ಪ್ರಬಂಧವು ಕಾಮಚಾರದಲ್ಲಿ ತೊಡಗಿತ್ತೆಂದು ತೋರುತ್ತದೆ. ಗಜರಕ್ಕೆ 'ಪಾಟಚಾಲಿಕಾ' ಎಂಬ ಹೆಸರೂ ಇದೆ.

ಗಜ಼ಲ್ ಗಳು ಪರ್ಶಿಯಾದಲ್ಲಿ ಆರಂಭದಲ್ಲಿ ಸಂಪ್ರದಾಯ ರಚನೆಗಳಾಗಿದ್ದುದು ಕಾಲಾನುಕ್ರಮದಲ್ಲಿ ವಿಶಿಷ್ಟವಾದ ಪ್ರೇಮ ಗೀತೆಗಳಾಗಿ ಮಾರ್ಪಾಡುಗೊಂಡವು.

Copyright protected article. Infringement of copyright is punishable offence. No part of this publication is allowed for copy or reproduction of material.

4..ಆಹಂಗ್ - ಆಹಂಗ್ ಎಂದರೆ ಭಾರತೀಯ ಸಂಗೀತದ 'ರಾಗ'ಶಬ್ದಕ್ಕೆ ಪರಸ್ಪರವಾದ ಹೆಸರು. ಇಬ್ರಾಹಿಂ ಆದಿಲ್ ಶಾಹನು ತನ್ನ ಕಿತಾಬ್ -ಇ- ನೌರಸ್ ನಲ್ಲಿ ಆಹಂಗ್ ಎನ್ನುವುದನ್ನು ಮಕಾಂ ಎಂದರೆ ಮೇಳ ಎಂದೇ ಕೊಡುತ್ತಾನೆ. ಪರ್ಶಿಯನ್ ಆಧುನಿಕ ಸಂಗೀತದ ಪರಿಭಾಷೆಯಲ್ಲಿ ಆಹಂಗ್ ಎಂದರೆ ಸ್ವರಲಿಪಿ, ತಂತೀವಾದ್ಯಗಳನ್ನು ಶ್ರುತಿ ಮಾಡಿಕೊಳ್ಳುವ ವಿಧಾನ, ಇತ್ಯಾದಿ ಅರ್ಥಗಳಿವೆ. ಪಂಡರೀಕ ವಿಠ್ಠಲನು ತನ್ನ ಕಾಲದಲ್ಲಿ ಹಿಂದೂಸ್ತಾನೀ ಸಂಗೀತದಲ್ಲಿ ಪ್ರಸಿದ್ಧವಾಗಿದ್ದ, ಇಂದಿನ ಕಾಮವರ್ಧಿನೀಮೇಳಕ್ಕೆ ಸಮನಾದ, ದೇಶಿಕಾರಮೇಳದಲ್ಲಿ ಜನ್ಯವಾದ ದೇಶೀರಾಗಕ್ಕೆ ಪರಸ್ಪರವಾಗಿ ಹೇಳುತ್ತಾನೆ.

5..ಮೂರು ಲಯಗಳು - ದ್ರುತ, ಮಧ್ಯ, ವಿಲಂಬಿತ.

6..ಭ್ರಮರೀ - ಚಾರಿಗಳಲ್ಲಿ ಭೌಮೀ ಮತ್ತು ಆಕಾಶಿಕೀ ಎಂದು 2 ವಿಧ. ಭ್ರಮರೀಯು ಆಕಾಶಚಾರಿ. ಪಾದವನ್ನು ಅತಿಕ್ರಾಂತದಲ್ಲಿ(ಹಿಮ್ಮಡಿಯ ಮಧ್ಯವನ್ನೆತ್ತಿ ಬೆರಳುಗಳನ್ನು ಕೊಂಕಿಸಿ ಎತ್ತಿ ಮುಂದಕ್ಕೆ ಚಾಚಿ ಅವನ್ನು ಮೇಲಕ್ಕೆಸೆದು ನೆಲದ ಮೇಲಿಡುವುದು ಅತಿಕ್ರಾಂತಾ) ಚಲಿಸಿ ಸೊಂಟದ ಮೇಲ್ಭಾಗವನ್ನು ಪೂರ್ತಿಯಾಗಿ ತಿರುಗಿಸಬೇಕು ; ಎರಡನೆಯ ಅಂಗಾಲಿನಿಂದ ವರ್ತುಲಾಕಾರವಾಗಿ ತಿರುಗಿಸಬೇಕು. ಇದು ಭ್ರಮರೀ ಎಂದು ಪಂಡರೀಕ ವಿಠ್ಠಲನು ಹೇಳುತ್ತಾನೆ.

7..ಧ್ರುವಾ ಮತ್ತು ಶಂಪಾ - ತಾಲವು ಚಿಟಿಕೆಯ ಶಬ್ದ ಮಾಡುತ್ತ ಬಲಗೈ ಕೆಳಗೆ ಬೀಳುವುದು ಧ್ರುವಾ, ಎಡಗೈ ಬೀಳುವುದು ಶಂಪಾ.

8..ಚೇಷ್ಟಾ ಇಲ್ಲದಿರುವುದು —ಅಂಗಾಂಗಗಳು ಹೆಚ್ಚು ಚಲನೆಯಾಗದಿರುವುದು. ಎಂದರೆ ಅಡವುಗಳು ಕಡಿಮೆಯಿರುವುದು.

9..ಪಾರಸೀ - ಇತ್ತೀಚೆಗಷ್ಟೇ ಇರಾನ್ ಎಂದು ಕರೆಯಲ್ಪಡುವ ಈ ದೇಶವು ಪ್ರಾಚೀನದಲ್ಲಿ ಗ್ರೀಕರಿಂದ ಪರ್ಶಿಯಾ ಎಂದು ಕರೆಯಲ್ಪಡುತ್ತಿತ್ತು. ಭಾರತದಲ್ಲಿ ನೆಲೆಸಿದ ಪರ್ಶಿಯನ್ನರು ಫಾರಸೀಗಳು. ಕ್ವಿಸ್ಸಾ -ಇ- ಸಂಜನ್ ಗ್ರಂಥದ ಪ್ರಕಾರ ಪಾರ್ಸಿಗಳು ಅರಬ್ಬರ ದಾಳಿಯಿಂದಾಗಿ ಆದ ಕಿರುಕುಳಗಳನ್ನು ತಪ್ಪಿಸಿಕೊಳ್ಳಲು ಕ್ರಿ. ಶ. 8 ರಿಂದ 10ನೇ ಶತಮಾನದಲ್ಲಿ ಹಿರಿಯ ಇರಾನ್ ನಿಂದ ಗುಜರಾತ್ ಗೆ ವಲಸೆ ಬಂದು ಆಶ್ರಯವನ್ನು ಪಡೆದರು.

10..ಉದ್ಗ್ರಾಹ - ಹಾಡು ಅಥವಾ ವಾದ್ಯ ಪ್ರಬಂಧ(ರಚನೆ)ವನ್ನು ಮೊದಲು ಎಲ್ಲಿಂದ ಎತ್ತಿಕೊಳ್ಳಲಾಗುತ್ತದೋ ಅದು ಉದ್ಗ್ರಾಹ.

11..ಅನಿಬಂಧ —ಗತಿಯೇ ಮೊದಲಾದ ನಿಯಮಗಳಿಂದ ಕೂಡಿರುವುದು ನಿಬಂಧಕ ನೃತ್ಯ —ಇಂತಹ ನಿಯಮಗಳಿಲ್ಲದಿದ್ದರೆ ಅನಿಬಂಧ ನೃತ್ಯವಾಗುತ್ತದೆ.

ಜಕ್ಕಡೀ ಶಬ್ದದ ಪರ್ಯಾಯವಾಚಕಗಳು—

ಯಥಾವತ್ತಾಗಿ ಜಕ್ಕಡೀಯು ಜಕ್ಕರೀ,ಝಕ್ಕರೀ, ಝಂಕರೀ, ಜಕ್ಕಿಣಿ, ಝಕ್ಕಡೀ, ಝಕ್ಕಿಣೀ ಇತ್ಯಾದಿ ನಾಮಾಂತರಗಳಲ್ಲಿಯೂ ಇದ್ದು ಜನಪದ ಹಾಗೂ ಉಪಶಾಸ್ತ್ರೀಯ ನೃತ್ಯವಾಗಿ ಮುಘಲರ ಆಸ್ಥಾನದಲ್ಲಿಯೂ ಪ್ರಸಿದ್ಧವಾಗಿತ್ತು. ನಿಃಸಂದೇಹವಾಗಿ ಯಕ್ಷ ಶಬ್ದವನ್ನೇ ಹೇಳುವ ಈ ಪದವು ಸಂಸ್ಕೃತದಲ್ಲಿ ಯಕ್ಷ- ಯಕ್ಷಿ, ತಮಿಳಿನಲ್ಲಿ ಯಕನ್, ಇಯಕನ್,ಅನಂಗು ಒಡಿಯಾ (ಒರಿಸ್ಸಾ) ದಲ್ಲಿ ಜೋಕ್ಯೋ, ಪಾಲಿ ಭಾಷೆಯಲ್ಲಿ ಯಕ್ಕ,ಯಖ್ಖ - ಯಖ್ಖಿಣಿ ಯಖ್ಖ, ಯಖ್ಖಮ, ಥೈಲಾಂಡ್ ನಲ್ಲಿ ಯಕ್, ಯೋ ಯಕ್, ಶ್ರೀಲಂಕಾದಲ್ಲಿ ಯಕ,ಯಡ್ಸೇಯೋ ಆಂಧ್ರದಲ್ಲಿ, ಜಕ್ಕ, ಜಕ್ಕಿಣಿ, ಜಕ್ಕಿ, ಜಕ್ಕು, ಜಕ್ಕುಲು, ಮಲಯಾಳಂನಲ್ಲಿ ಯಕ್ಷ - ಯಕ್ಷಿ ಹಿಂದಿಯಲ್ಲಿ ಯಕ್ಷ್, ಜಕ್ಕ, ಬಂಗಾಲಿ ಭಾಷೆಯಲ್ಲಿ ಯಕ್ಷೊ ಪರ್ಶಿಯನ್ ನಲ್ಲಿ Fravashi (promoter of birth, birth spirit)ಇದು ಸ್ತ್ರೀ ಲಿಂಗವಾದರೆ ಪುಲ್ಲಿಂಗದಲ್ಲಿ Faravahar - ನೇಪಾಲದಲ್ಲಿ ಯಕ, ದೇವನ್, ಜಿಮಿದರ್, ಮಝಿಯಾ, ಇತ್ಯಾದಿ ಅನೇಕ ಹೆಸರುಗಳಿಂದ ಹೇಳಲ್ಪಡುತ್ತವೆ. ಯಕ್ಷ ಯಕ್ಷಿಣಿಯರೇ ಮಾಡುತ್ತಿದ್ದ ನೃತ್ಯವೆಂದೋ ಅಥವಾ ಈ ಅತಿಮಾನುಷರಾದ ಯಕ್ಷ - ಯಕ್ಷಿಯರ ಪ್ರೀತ್ಯರ್ಥವಾಗಿಯೋ, ಪೂಜೆ ಮಾಡಲೆಂದೋ ಹುಟ್ಟಿಕೊಂಡ ನೃತ್ಯ ಪ್ರಕಾರಗಳು ಅನೇಕವಾಗಿದ್ದಿರಬೇಕು. ಅದರ ಒಂದು ರೂಪವು ಜಕ್ಕಡೀ ಎಂದು ಹೇಳಬಹುದು.

"ಪುಂಡರೀಕಮಾಲಾ" ದಲ್ಲಿ ಯಕ್ಷ, ಜಕ್ಕಾ ಮತ್ತು ಜಕ್ಕಾ ಪ್ರಹಾರ"—

'ಯಕ್ಷ'—ಪಂಡರೀಕ ವಿಠ್ಠಲನು ನಾಲ್ಕನೆಯ ಪ್ರಕರಣದ ನರ್ತಕ (ನರ್ತನ) ದಲ್ಲಿ 'ಚಿತ್ರಾಭಿನಯ'ಗಳ (ಚಿತ್ರಾಭಿನಯವೆಂದರೆ ವಾಚಿಕವೇ ಮೊದಲಾದ ಅಭಿನಯದಲ್ಲಿ ವಿಶೇಷವಾಗಿರುವ ಕೆಲವು ಅಭಿನಯಗಳು. ಉದಾಹರಣೆಗೆ ದೃಷ್ಟಿಯನ್ನು ವಕ್ರವಾಗಿಸಿ, ಮೇಲೆ ಮಾಡಿ, ತಲೆಯನ್ನು ಪಕ್ಕಕ್ಕೆ ವಾಲಿಸಿ, ಹಾಗೆಯೇ ತೋರುಬೆರಳನ್ನು ಕಿವಿಯ ಬಳಿ ಇಟ್ಟು ಶಬ್ದವನ್ನು ಅಭಿನಯಿಸಬೇಕು. ವಾಚಿಕಾಭಿನಯವೆಂದರೆ ಯಾವುದೆಲ್ಲ ಗದ್ಯ, ಪದ್ಯ ಮೊದಲಾದುವು ಪ್ರಾಕೃತ ಹಾಗೂ ಸಂಸ್ಕೃತ ಭಾಷೆಗಳಲ್ಲಿ ಅರ್ಥಸಹಿತವಾಗಿ ರಚಿಸಲ್ಪಟ್ಟು ಗಟ್ಟಿಯಾಗಿ ಉಚ್ಚರಿಸಿಯೋ ಅಥವಾ ಹಾಡಲ್ಪಡುತ್ತದೋ ಅದು ವಾಚಿಕಾಭಿನಯ) ಲಕ್ಷಣಗಳನ್ನು ಕುರಿತು ಹೇಳುವಲ್ಲಿ ಭೂತಗಳೂ, ಪಿಶಾಚಗಳೂ ಯಕ್ಷರೂ, ದಾನವರೂ ಹಾಗೆಯೇ ರಾಕ್ಷಸರೂ ಇತ್ಯಾದಿಗಳ ಅಭಿನಯವನ್ನು (ಶ್ಲೋ. 219, 220) ಭಯ -

Copyright protected article. Infringement of copyright is punishable offence. No part of this publication is allowed for copy or reproduction of material.

Copyright protected article. Infringement of copyright is punishable offence. No part of this publication is allowed for copy or reproduction of material.

ಉದ್ವೇಗಗಳಿಂದಲೂ, ವಿಸ್ಮಯದಿಂದಲೂ ನಿರ್ದೇಶಿಸಬೇಕು, ಎಂದು ಹೇಳುವುದು ಗಮನೀಯ. ಪ್ರಾಚೀನದಿಂದಲೂ ಈ ಅತಿಮಾನುಷ ಶಕ್ತಿಗಳನ್ನು ಒಂದೇ ವರ್ಗದಲ್ಲಿ ಹೇಳುವುದಕ್ಕೊಂದು ನೃತ್ಯಶಾಸ್ತ್ರದಲ್ಲಿಯೂ ಉದಾಹರಣೆಯಾಗಿದೆ.

'ಜಕ್ಕಾ' — ಏಕರೂಪವಾದ ಕೂಟಪಾಟಗಳಿಂದ ರಚಿತವಾಗಿ ಅತ್ಯಂತ ಕೋಮಲ ಶಬ್ದಗಳನ್ನು ಹೊಂದಿ, ಅನೇಕ ವಿರಾಮಗಳಿದ್ದು, ತಾಲಛಂದಸ್ಸುಗಳಿಂದಲೂ, ಉಜ್ವಲವಾದ ವರ್ಣಗಳಿಂದಲೂ ಕೂಡಿದ್ದು ಯಾವುದು ನುಡಿಸಲ್ಪಡುತ್ತದೋ ಅದನ್ನು ತಜ್ಞರು 'ಯತಿ' ಎಂದು ಹೆಸರಿಸುತ್ತಾರೆ (ಶ್ಲೋ. 86, 87).ಈ ಯತಿಯು ನೃತ್ಯ ಪ್ರಬಂಧದ ಅಥವಾ ಗೀತ ಪ್ರಬಂಧದ ಅಂಗವಾಗಿದ್ದು ಅದರಲ್ಲಿ ತಜ್ಞರಾದವರು ನುಡಿಸಿದರೆ 'ಉಟ್ಟವಣ' ವೆನ್ನುತ್ತಾರೆ. 'ಯತಿ' ಯ ಈ ಲಕ್ಷಣವನ್ನು ಸಂಗೀತ ರತ್ನಾಕರದಲ್ಲಿ ಹೇಳಿ ಅಲ್ಲಿ ಯತಿಗೆ 'ಜಕ್ಕಾ' ಎಂಬ ನಾಮಾಂತರವನ್ನು ಅಧಿಕವಾಗಿ ಹೇಳಿರುವುದು ಗಮನೀಯ. ಏಕೆಂದರೆ ಜಕ್ಕಾ ಲಕ್ಷಣವು ಜಕ್ಕಡೀಗೆ ನುಡಿಸುತ್ತಿದ್ದ ವಾದ್ಯಪ್ರಬಂಧವಾದ ಗಜರದ ಲಕ್ಷಣಕ್ಕೆ ಬಹಳವಾಗಿ ಹೋಲಿಕೆ ಇದೆ. ಯತಿಯ ಪ್ರಬೇಧವಾಗಿ ಪಂಡರೀಕ ವಿಠಲನು ಹೇಳಿರುವ ಪಿಲ್ಲಮುರು, ಕೈಮುರು, ತೀವಟಿ (ತಿವಟ) ಇತ್ಯಾದಿಗಳ ಬಗ್ಗೆ ಕಥಕ್ ನೃತ್ಯ ವಿದ್ವಾಂಸರು ಅವರ ಸಂಶೋಧನೆಗಾಗಿ ಮ. ಮ. ರಾ. ಸತ್ಯನಾರಾಯಣರವರ 'ಪುಂಡರೀಕಮಾಲಾ'(ಪು. 288, 289)ಮತ್ತು 'Narthana Nirnaya' ಗ್ರಂಥಗಳಲ್ಲಿರುವ ಟಿಪ್ಪಣಿಗಳತ್ತ ಗಮನ ಹರಿಸುವುದು ಉಚಿತವೆಂದು ತೋರುತ್ತದೆ.

"ಜಕ್ಕಾ ಪ್ರಹಾರ" —ಮೃದಂಗ, ಮದ್ದಲೆ ಇತ್ಯಾದಿಗಳ ಮೇಲಿನ ಯತಿಗಳ ಪ್ರಹಾರವು ಜಕ್ಕಾ ಪ್ರಹಾರ.

ಪಂಡರೀಕ ವಿಠ್ಠಲನು ಜಕ್ಕಡೀ ನೃತ್ಯದ ಲಕ್ಷಣವನ್ನು ಹೇಳುವಾಗ ಈ ನೃತ್ಯಪ್ರಕಾರಕ್ಕೆ ಮೃದಂಗಾದಿ ಲಯವಾದ್ಯಗಳನ್ನು ಹೇಳದಿರುವುದನ್ನೂ, ಅನಿಬಂಧ ನೃತ್ಯವಾಗಿ ಹೇಳುವುದನ್ನೂ ಗಮನದಲ್ಲಿಡಬೇಕಾಗಿದೆ.

ಜಕ್ಕಡೀ ಶಬ್ದವನ್ನು ಹೋಲುವ ಇತರ ನೃತ್ಯಗಳು—

ಜಕ್ಕಡೀ ನೃತ್ಯವು ಇಂದು ಉಳಿದುಬಂದಿಲ್ಲವೊ ಗುಪ್ತಗಾಮಿನಿಯಾಗಿ ಉಳಿದುಬಂದಿದೆಯೋ ಎಂದು ಸಂಶೋಧನೆಗಳಿಂದಲೇ ತಿಳಿಯಬೇಕಾಗಿದೆಯಷ್ಟೆ. ಆದರೆ ಆ ಶಬ್ದಕ್ಕೆ ಸಮೀಪವಾದ ಆದರೆ ಪಂಡರೀಕ ವಿಠ್ಠಲನು ಹೇಳಿರುವ ಲಕ್ಷಣಗಳಿಗೆ ಸ್ವಲ್ಪವೂ ಹೋಲಿಕೆ ಇಲ್ಲದ ಕೆಲವು ಜನಪದ ನೃತ್ಯಗಳಿವೆ. ಅವುಗಳ ಕಿರು ಪರಿಚಯವನ್ನು ನೀಡಲಾಗುವುದು.

ಜಾಖಡೀ—

'ಜಾಖಡೀ' (=ರೀ - ಮರಾಠೀ, ಹಿಂದಿ ಇತ್ಯಾದಿ ಮತ್ತು ಉತ್ತರಭಾರತದ ಭಾಷೆಗಳಲ್ಲಿ 'ರ' ಮತ್ತು 'ಡ' ನಡುವಣ ಉಚ್ಚಾರವನ್ನು ಮಾಡುತ್ತಾರೆ) ಎಂಬ ಒಂದು ನೃತ್ಯ ಪ್ರಕಾರವು ಕೊಂಕಣ ಮಹಾರಾಷ್ಟ್ರದಲ್ಲಿ ಗಣೇಶೋತ್ಸವದ ಸಮಯದಲ್ಲಿ ನರ್ತಿಸಲ್ಪಡುತ್ತದೆ. 'ಬಲ್ಯ' ನೃತ್ಯ ಅಥವಾ ಝಾಕಡೀ (ರೀ) ನೃತ್ಯವು ಅಪರೂಪವಾದ ಜನಪದ ನೃತ್ಯವಾಗಿದ್ದು ಗಣಪತಿ ದೇವರ ಉತ್ಸವಕ್ಕಾಗಿಯೇ ನರ್ತಿಸಲ್ಪಡುತ್ತದೆ. ಇದು ಶಕ್ತಿಯುತ ಚಲನೆಯನ್ನು ಹೊಂದಿದ್ದು, ನರ್ತಿಸುವವರು ಸುತ್ತಲೂ ವರ್ತುಲಾಕಾರವಾಗಿ ಹರಡಿಕೊಂಡು ನರ್ತಿಸುತ್ತಾರೆ. ಜಾಕಡೀ (ರೀ) ಎಂದರೆ 'ನಿಂತ ಸ್ಥಾನ' ಎಂದು ಅರ್ಥ. ಈ ಜನಪದ ನೃತ್ಯವು ಹೆಚ್ಚು ನಿಂತು ಕುಣಿಯುವ ಹೆಜ್ಜೆಗಳನ್ನೇ ಹೊಂದಿರುವ ಕಾರಣ ಈ ಹೆಸರನ್ನು ಪಡೆದಿದೆ. ಮುಂಬೈ ನಗರದಲ್ಲಿ ಮಹಾರಾಷ್ಟ್ರದ ಅನೇಕ ಹಳ್ಳಿಗಳ ಜನರು ತಮ್ಮ ಹೊಟ್ಟೆಪಾಡಿಗಾಗಿ ಮನೆಗೆಲಸಗಳನ್ನು ಮಾಡುತ್ತ ಜೀವಿಸುತ್ತಾರೆ. ಅವರು 'ಬಲಿ' ಎಂದು ಕರೆಯುವ ಒಂದು ಆಭರಣವನ್ನು ಧರಿಸುತ್ತಾರೆ. ಅದರಿಂದಾಗಿ ಅವರು 'ಬಲ್ಯ' ಎಂದು ಕರೆಯಲ್ಪಡುತ್ತಾರೆ. ಈ ಜನಪದ ನೃತ್ಯವು ಮಹಾರಾಷ್ಟ್ರದ 'ತಮಾಷಾ' ಎಂಬ ನೃತ್ಯಪ್ರಕಾರದಿಂದ ಹುಟ್ಟಿದೆ. ಬೆನ್ನ ಹಿಂದೆ ಅಗಲವಾಗಿ ಹೊಳೆಯುವಂತಹ ವಸ್ತ್ರವನ್ನು (Cape) ಧರಿಸಿ ಕಿರೀಟದ ರೀತಿಯ ತಲೆಯ ಆಭರಣ ಕುತ್ತಿಗೆಗೂ ಕೈಗಳಿಗೂ ಆಭರಣಗಳನ್ನು ಧರಿಸಿ ಕಾಲಿಗೆ ಗೆಜ್ಜೆ ಕಟ್ಟಿ ಹುಡುಗರೂ, ಯುವಕರೂ ಎರಡು ಕೈಯಲ್ಲೂ ವಸ್ತ್ರವನ್ನು ಆಡಿಸುತ್ತ, ಮಾಡುವ ಈ ನೃತ್ಯದಲ್ಲಿ ಎರಡು ವಿಧಗಳಿವೆ. (1)ಕಲ್ಗಿವಾಲೇ (2)ತುರೇವಾಲೇ. ಈ ನೃತ್ಯದಲ್ಲಿ ದೊಡ್ಡ ದೊಡ್ಡ ಗೆಜ್ಜೆಗಳನ್ನು ಕೈಯಲ್ಲಿ ಬಡಿಯುವವರು, ಢೋಲ್ಕೀಯನ್ನು ನುಡಿಸುವವರು, ಹಾಡುವವರು, ಹಾರ್ಮೋನಿಯಂ ಇತ್ಯಾದಿ ವಾದ್ಯಗಳನ್ನು ನುಡಿಸುವವರು ಮಧ್ಯೆ ವರ್ತುಲಾಕಾರವಾಗಿ ಕುಳಿತುಕೊಳ್ಳುತ್ತಾರೆ. ಅವರನ್ನು ಹೊರಗಿನಿಂದ ಸುತ್ತುವರೆದು 8 - 10 ನರ್ತಕರು ವರ್ತುಲಾಕಾರದಲ್ಲೇ ನರ್ತಿಸುತ್ತಾರೆ. ಮುಖ್ಯವಾಗಿ ಈ ನೃತ್ಯವು ಗಣಪತಿ ಹಬ್ಬದಲ್ಲಿಯೇ ನರ್ತಿಸಲ್ಪಟ್ಟರೂ ದೀಪಾವಳಿಯವರೆಗೆ ಮುಂದುವರೆಯುವುದೂ ಉಂಟು. ಇವರು ಅನಾರಿ, ಕುಂಭಾರ್ಲೀ, ಪಿಂಪ್ಲೀ, ಟೆರೆವ್, ಕಾಮ್ಥೀ, ಸಾವ್ಡೇ ಇತ್ಯಾದಿ 'ಪಥಕ್' ಎಂದು

Copyright protected article. Infringement of copyright is punishable offence. No part of this publication is allowed for copy or reproduction of material.

Copyright protected article. Infringement of copyright is punishable offence. No part of this publication is allowed for copy or reproduction of material.
ಕರೆಯಲ್ಪಡುವ ಗುಂಪುಗಳನ್ನು ಹೊಂದಿದ್ದಾರೆ. ಈ ಜಾಖಿಡೀ ನೃತ್ಯವು ನರ್ತನನಿರ್ಣಯದಲ್ಲಿ ಹೇಳಲ್ಪಡುವ ಜಕ್ಕಡೀಗೆ ಹೋಲುವುದಿಲ್ಲವೆಂಬುದು ಸ್ಪಷ್ಟವಾಗಿಯೇ ಇದೆ.

ಝಾಕ್ರೀ—ಝಾಕ್ರೀ ಎಂದರೆ ನೇಪಾಲಿ ಭಾಷೆಯಲ್ಲಿ ಧಾರ್ಮಿಕ ವೈದ್ಯರು (shamans) ಎಂದು ಅರ್ಥ. ಈ ಆದಿವಾಸಿ ಧಾರ್ಮಿಕ (ಮಾಟಗಾರ) ವೈದ್ಯರಲ್ಲಿ ಬನ್ ಝಾಕ್ರಿ ಮತ್ತು ಬನ್ ಝಾಕ್ರಿನೀ ಎಂಬ ಅತೀಂದ್ರಿಯ ಶಕ್ತಿದೇವತಾ ದಂಪತಿಗಳನ್ನು ನೇಪಾಲದ ತಮಾಂಗ್ ಜನಾಂಗವು ಆರಾಧಿಸುತ್ತದೆ. ಬನ್ ಎಂದರೆ ಕಾಡು, ವನ ಎಂದು ಅರ್ಥ. ಬನ್ ಝಾಕ್ರಿನೀಯರನ್ನು ಲೆಮ್ ಲೆಮೇ (Lemlemay) ಎಂದೂ ಕರೆಯುತ್ತಾರೆ. ಈ ದೇವತೆಗಳು ನಮ್ಮ ಯಕ್ಷ ಯಕ್ಷಿಣಿಯರನ್ನು ಅನೇಕ ವಿಧಗಳಲ್ಲಿ ಹೋಲುತ್ತವೆ. ಈ ಅತೀಂದ್ರಿಯ ಶಕ್ತಿಗಳೇ(ಯಕ್ಷ ಯಕ್ಷಿಯರೇ) ಧಾರ್ಮಿಕ ವೈದ್ಯರುಗಳನ್ನು ಸೃಷ್ಟಿಸಿದ್ದು ಎಂಬ ನಂಬಿಕೆ ಇದೆ. ಈ ಆದಿವಾಸಿ ವೈದ್ಯರು ಬನ್ ಝಾಕ್ರಿಯನ್ನು ಗುರುವಾಗಿಯೂ ವನದೇವತೆಯಾಗಿಯೂ ಆರಾಧಿಸುತ್ತಾರೆ. ಧಾರ್ಮಿಕ ವೈದ್ಯರಾದ ಝಾಕ್ರಿಗಳು (=ಝಾಂಕ್ರೀ) ತನ್ನಲ್ಲಿ ರೋಗಮುಕ್ತರಾಗಲು ಆಶಿಸಿ ಬಂದವರಿಗೆ ಅನೇಕ ಮೂಲಿಕೆಗಳನ್ನು ಕೊಟ್ಟು ಗುಣಪಡಿಸುವುದರೊಂದಿಗೆ ಉದ್ದದ ಒಂದು ಕೈ ಹಿಡಿಯಿದ್ದ, ತಮಟೆಯನ್ನು ಬಡಿದುಕೊಂಡು ನರ್ತಿಸುವುದರ ಮೂಲಕವೂ ಖಾಯಿಲೆಯನ್ನು ಗುಣಪಡಿಸುತ್ತಾರೆ. ಈ ವೈದ್ಯರು ರೋಗವನ್ನು ಗುಣಪಡಿಸುವುದು ಮಾತ್ರವಲ್ಲದೆ ಕಥಾಕಾರರೂ , ನೃತ್ಯ ಹಾಡು, ಚಿತ್ರಕಲೆ, ಸಂಗೀತ ಇತ್ಯಾದಿಗಳಲ್ಲಿಯೂ ಬಹಳ ಚತುರರಾಗಿ ಪ್ರತಿಭಾನ್ವಿತರಾಗಿರುತ್ತಾರೆ . ಅವರಿಗೆ ಈ ಎಲ್ಲ ಯೋಗ್ಯತೆಗಳೂ ಅವರು ನಂಬುವಂತಹ, ಅವರಿಗೆ ಸಹಾಯ ಮಾಡುವಂತಹ ಅತೀಂದ್ರಿಯ ಶಕ್ತಿಗಳಿಂದ ಬರುತ್ತವೆಂದು ನಂಬಲಾಗಿದೆ. ಝಾಂಕ್ರೀ(ಝಾಕ್ರೀ) ಗಳ ಹಾಡು ಹಾಗೂ ವೇಷ, ನರ್ತನಗಳು ದಕ್ಷಿಣ ಕನ್ನಡ ಜಿಲ್ಲೆಯ ದೈವಗಳ ಪಾಡ್ದನಗಳನ್ನೂ, ಕೆಲವು ದೈವಗಳ ನೇಮಗಳನ್ನೂ ಬಹುವಾಗಿ ಹೋಲುತ್ತವೆ. ಹಾಡುವಾಗ ನರ್ತಿಸುವಾಗ ತಾವೇ ಸ್ವತಃ ಕೈಹಿಡಿ ಇರುವ ಈ ದೊಡ್ಡ ತಮಟೆಗಳನ್ನು ಕೋಲಿನಿಂದ ಬಾರಿಸುತ್ತಾರೆ. ತಲೆಗೆ ಉದ್ದದ ನವಿಲುಗರಿಗಳಿಂದ ಅಲಂಕೃತ ಟೊಪ್ಪಿಗೆಯನ್ನು (ಇದನ್ನು ಕಿರೀಟದಂತೆ) ಧರಿಸಿರುತ್ತಾರೆ. ನೇಪಾಳದಲ್ಲಿ ಕಿರಾತ ಯಕ್ಕ ಎನ್ನುವ ಪ್ರಾಚೀನ ಜನಾಂಗವೊಂದಿದ್ದು ಯಖ್ಖಾಲೆನ್ (ಯಕ್ಕ ತಾಯಿನಾಡು) ಎಂಬ ಜಾಗವು ಕಿರಾತರ ಸ್ಥಳವಾಗಿದ್ದು ಕಠ್ಮಂಡುವಿನ ಪೂರ್ವಕ್ಕಿದೆ. 'ಯಖ್ಖ' ಎನ್ನುವ ಭಾಷೆಯೂ ಒಂದಿದ್ದು ಭಾಷೆಯು ಟಿಬೆಟ್- ಬರ್ಮಾದ ಭಾಷೆಯಾಗಿದ್ದು ಬಹಳ ಬೇಗ ನಶಿಸಿ ಹೋಗುತ್ತಿದೆ. ಯಕ್ಷರಾಜ ಕುಬೇರನ ರಾಜಧಾನಿಯು ಹಿಮಾಲಯದ ಅಲಕಾ ಎಂದು ಗಮನಿಸಬಹುದು. ನೇಪಾಲರ ಯಖ್ಖರಿಗೆ ಅನೇಕ ಹೆಸರುಗಳಿವೆ. 'ಸಿಕ್ಕಿಂ' ಎಂಬುದು ಯಕ್ಷ ಜನಾಂಗದ ಒಂದು ಹೆಸರೇ ಆಗಿದೆ! ಇದು ಬಹುಶಃ ಗ್ರೀಕರ ಕಾಲದಲ್ಲಿ ಮಾರ್ಪಾಡು ಹೊಂದಿದ ಹೆಸರಾಗಿರಬಹುದು. ಏಕೆಂದರೆ ಗ್ರೀಕ್ ಭಾಷೆಯಲ್ಲಿ ಜ ಮತ್ತು ಚ ಅಕ್ಷರಗಳನ್ನು ಸ ಎಂದು ಉಚ್ಚರಿಸುವುದರಿಂದ ಬಂದಿರಲೂ ಸಾಕು. ಏಕೆಂದರೆ Chandragupta ಎನ್ನುವುದು ಗ್ರೀಕ್ ನಲ್ಲಿ Sandracottos ಅಥವಾ Andracottos ಎಂದಾಗಿದೆ. ಹಾಗಾಗಿ ಯಕ್ಷಿಣಿ ಎನ್ನುವುದು ಸಿಕ್ಕಿನ್ ಅಥವಾ ಸಿಕ್ಕಿಂ ಆಗಿರಬಹುದು. ಈ ಕುರಿತು ಭಾಷಾತಜ್ಞರು ಹೇಳಬೇಕಷ್ಟೆ.

ಜಕ್ಕಿಣಿ —

ನಟರಾಜರಾಮಕೃಷ್ಣರು ತಮ್ಮ 'ದಾಕ್ಷಿಣಾತ್ಯುಲ ನಾಟ್ಯಕಳಾಚರಿತ್ರ' ಪುಸ್ತಕದಲ್ಲಿ 'ಜಕ್ಕಿಣಿ'ಯೆಂಬ ಆಂಧ್ರದೇಶೀಯ ದೇವಾಲಯ ನೃತ್ಯವೊಂದನ್ನು ವಿವರಿಸುತ್ತ ಅದು ದೇವತಾ ಅಥವಾ ಪ್ರಭುಸ್ತುತಿಯನ್ನೊಳಗೊಂಡ, ಶಬ್ದಪ್ರಬಂಧದಂತೆ ಮೃದಂಗಜತಿಗಳಿಂದ ಕೂಡಿದ, ಮಾತಿಗಿಂತ ನೃತ್ತವು ಪ್ರಧಾನವಾಗಿರುವ, ಕರಣಗಳಲ್ಲಿ ಶಬ್ದಪ್ರಬಂಧಕ್ಕಿಂತ ಸ್ವಲ್ಪ ಭಿನ್ನವಾದ ರಚನೆ ಎಂದು ಹೇಳುತ್ತಾರೆ.

ಎಂ. ಕೃಷ್ಣಮಾಚಾರ್ಯರು ತಮ್ಮ ಎ. ಹಿಸ್ಟರಿ ಆಫ್ ಸಂಸ್ಕೃತ ಲಿಟರೇಚರ್, ಪು. 823, 824 ರಲ್ಲಿ 'ಪುರಾ ದೇವೀ ಮಹಾಕಾಲೀ ಲಾಸಿತುಂ ಶಂಭುನಾ ಸಹ|ಜನಕಂ ಪ್ರೇಕ್ಷ್ಯ ಪ್ರಪಚ್ಛ ಮತಂಗಂ ದೀಪ್ತತೇಜಸಮ್ |.................. | ಕಾಲಿಕಾಯಾ ಕೃತಂ ಪೂರ್ವಂ ಮತಂಗೇನ (ಚ) ಝಕ್ಕಿಣೀ | ಎಂದು ಉದ್ಧರಿಸಿಕೊಂಡಿದ್ದಾರೆ. ಇದು ತಂಜಾವೂರು ಸರಸ್ವತಿ ಮಹಲ್ ಹಸ್ತಪ್ರತಿ ಭಾಂಡಾಗಾರದ ಬರ್ನೆಲ್ ಹಸ್ತಪ್ರತಿ ಸಂಖ್ಯೆ 11536 ಎಂದು ಉದ್ಧರಿಸಿಕೊಂಡಿದ್ದಾರೆ.

-ಜಕ್ಕಡೀ ನೃತ್ಯದ ಬಗ್ಗೆ ಇತರರ ಉಲ್ಲೇಖಗಳು

ಪಂಡರೀಕ ವಿಠಲನ ನಂತರ ಪ್ರಾಚೀನರಲ್ಲಿ ಜಕ್ಕಡೀಯನ್ನು ಜಕ್ಕರೀ ಎಂಬ ಹೆಸರಿನಲ್ಲಿ ಅಕ್ಷರಸಾಮ್ಯದೊಂದಿಗೆ ಚತುರ ದಾಮೋದರನು ತನ್ನ ಸಂಗೀತದರ್ಪಣದಲ್ಲಿ ಉದ್ಧರಿಸಿಕೊಂಡಿದ್ದಾನೆ. ಚತುರ ದಾಮೋದರನು ಕ್ರಿ.ಶ.17ನೆಯ ಶತಮಾನದಲ್ಲಿ (1569-1627)ಜಹಂಗೀರನ ಆಸ್ಥಾನದಲ್ಲಿ ಕವಿಯಾಗಿದ್ದವನು. ದಾಮೋದರನು ಹೇಳಿದ್ದನ್ನೇ ಶೌರೀಂದ್ರ ಮೋಹನ ಠಾಕೂರರೂ ತಮ್ಮ ಸಂಗೀತಸಾರಸಂಗ್ರಹದಲ್ಲಿ ಪುನರುದ್ಧರಿಸಿಕೊಂಡಿದ್ದಾರೆ. ವೇದನ ಸಂಗೀತಮಕರಂದದಲ್ಲಿ(ಉದ್ಧೃತಿ, ಭರತಕೋಶ) ಒಂದೆರಡು ಭ್ರಷ್ಟ ಪಾಠಾಂತರಗಳನ್ನು ಬಿಟ್ಟರೆ ಇದೇ ಲಕ್ಷಣವು ಅಕ್ಷರ ಸಾಮ್ಯದೊಡನೆ ಇದೆ.

Copyright protected article. Infringement of copyright is punishable offence. No part of this publication is allowed for copy or reproduction of material.

Copyright protected article. Infringement of copyright is punishable offence. No part of this publication is allowed for copy or reproduction of material.

ಅರ್ವಾಚೀನರನೇಕರು 'ಕಥಕ್' ನೃತ್ಯದ ಮೂಲದ ಸಂಶೋಧನಾತ್ಮಕ ಲೇಖನಗಳಿಗಾಗಿ ಜಕ್ಕಡೀಯನ್ನು ಉಲ್ಲೇಖಿಸಿದ್ದಾರೆ. ಮಹಾಮಹೋಪಾಧ್ಯಾಯ ಡಾ. ರಾ. ಸತ್ಯನಾರಾಯಣರವರು ತಮ್ಮ ಪುಂಡರೀಕಮಾಲಾ ಹಾಗೂ 'ನರ್ತನನಿರ್ಣಯ'ದ ಆಂಗ್ಲ ಪುಸ್ತಕದಲ್ಲಿ ಜಕ್ಕಡೀಯ ಲಕ್ಷಣದ ವಿವರಗಳನ್ನು ಹೇಳಿರುವುದನ್ನು ಈಗಾಗಲೇ ಲಕ್ಷಣಗಳ ಸಮೇತ ಈ ಲೇಖನಕ್ಕಾಗಿ ಉದ್ಧರಿಸಿಕೊಂಡಿದೆ. M. ಬೋಸ್, ಮಾಯಾರಾವ್, P. K. ಮಿಶ್ರಾ, ಮಾರ್ಗರೇಟ್ E. ವಾಕರ್ ಇತ್ಯಾದಿ ಪ್ರಮುಖ ವಿದ್ವಾಂಸರು ಜಕ್ಕಡೀಯನ್ನು ಕಥಕ್ ನ ಕುರಿತಾದ ತಮ್ಮ ಸಂಶೋಧನಾತ್ಮಕ ಲೇಖನಗಳಿಗಾಗಿ ಉದ್ಧರಿಸಿಕೊಂಡಿದ್ದಾರೆ. ಹಲವಾರು ಸಂಶೋಧನಾಕಾರರು ಕಥಕ್ ನೃತ್ಯಪ್ರಕಾರಕ್ಕೆ ಜಕ್ಕಡಿಯು ಬಹುವಾಗಿ ಹೋಲುವುದೆಂದು ತರ್ಕಿಸಿದ್ದಾರೆ. ಅದರ ಬಗ್ಗೆಯ ವಿವೇಚನೆಯು ಈ ಲೇಖನದ ವ್ಯಾಪ್ತಿಗೆ ಮೀರಿದ್ದು. ಆದರೆ ಕಥಕ್ ನೃತ್ಯದ ಮೂಲವನ್ನು ಸಂಶೋಧನೆ ಮಾಡಲು ಬಯಸುವವರು ಖೊರಾಸಾನ್ ಅಥವಾ ಪ್ರಾಚೀನ ಆಫ್ಘಾನಿಸ್ತಾನದ ನೃತ್ಯ ಪದ್ಧತಿಗಳ ಕಡೆ ಗಮನ ಹರಿಸಿದಲ್ಲಿ ತಕ್ಕುದಾದ ಉತ್ತರವು ಸಿಗುವುದರಲ್ಲಿ ಅನುಮಾನವಿಲ್ಲ.

ಪ್ರಪಂಚದ ಹೆಚ್ಚಿನ ನೃತ್ಯ ಪದ್ಧತಿಗಳಲ್ಲಿ ಇಲ್ಲದ, ಆದರೆ ಭಾರತೀಯ ಶಾಸ್ತ್ರೀಯ ನೃತ್ಯ ಪದ್ಧತಿಗಳಲ್ಲಿ ಇರುವ ಪ್ರಮುಖ ವ್ಯತ್ಯಾಸ ಹಾಗೂ ವೈಶಿಷ್ಟ್ಯವೆಂದರೆ ಗೆಜ್ಜೆ ಧರಿಸಿ ಲಯವಾದ್ಯಗಳ ಪಾಟಾಕ್ಷರಗಳಿಗೆ ತಕ್ಕಂತೆ ನೃತ್ಯ ಅಥವಾ ನರ್ತನವನ್ನು ಮಾಡುವುದು. ವಿದ್ವಾಂಸರು ಈ ವಿಷಯದತ್ತಲೂ ಗಮನಿಸಿದರೆ ಬೇರೆ ಪದ್ಧತಿಗಳ ನೃತ್ಯಕ್ಕೂ ಭಾರತೀಯ ನೃತ್ಯಗಳಿಗೂ ವ್ಯತ್ಯಾಸ ತಿಳಿಯಲು ಅನುಕೂಲವಾದೀತು. ಆಫ್ರಿಕಾ ಖಂಡದ ಕೆಲವು ಆದಿವಾಸಿಗಳಲ್ಲಿ ಮಾತ್ರ ತಮ್ಮ ಧಾರ್ಮಿಕ ನೃತ್ಯಕ್ಕೆ ಗೆಜ್ಜೆಯನ್ನು ಧರಿಸುವುದುಂಟು.

ಪಂಡರೀಕ ವಿಠಲನು ನರ್ತನನಿರ್ಣಯದಲ್ಲಿ "ಯಾವನೀ ಭಾಷಯಾ ಯುಕ್ತಂ ಯತ್ರ ಗೀತಂ ಧೃತಾಂಚಲಮ್||" ಎಂದಿರುವುದನ್ನು ಮ. ಮಾ. ರಾ. ಸತ್ಯನಾರಾಯಣರವರು ತಮ್ಮ ಪುಂಡರೀಕಮಾಲಾ ಗ್ರಂಥದಲ್ಲಿ 'ಯವನ (ಪರ್ಶಿಯನ್) ಭಾಷೆಯಿಂದ ಕೂಡಿ, (ಸೀರೆಯ? ಉತ್ತರೀಯದ?) ಅಂಚನ್ನು ಹಿಡಿದುಕೊಂಡು ಯಾವುದನ್ನು ಹಾಡಲಾಗುತ್ತದೆಯೋ,' ಎಂದು ಅನುವಾದಿಸಿದ್ದರೆ, ಉಳಿದ ಎಲ್ಲರೂ veil ನ ಅಂಚನ್ನು ಹಿಡಿದು ನರ್ತಿಸುವುದೆಂದೂ, ಉಳಿದವನ್ನು ಮೇಲಿನಂತೆಯೇ ಅನುವಾದಿಸಿರುವುದನ್ನೂ ಗಮನಿಸಬಹುದು. ಉತ್ತರೀಯವನ್ನು ಅಥವಾ ತೆಳುವಾದ ಮೇಲುಹೊದಿಕೆಯನ್ನು ಹಿಡಿದುಕೊಂಡು ನರ್ತಿಸುವ ಗ್ರೀಕ್ ಹಾಗೂ ಪರ್ಶಿಯನ್ ನೃತ್ಯಗಳು ಪರಸ್ಪರವಾಗಿ ಬಹಳ ಹೋಲುತ್ತವೆ. ಮಹಾರಾಷ್ಟ್ರದ ತಮಾಷಾ ನೃತ್ಯವೂ ಸೆರಗಿನ ಅಂಚನ್ನು ಹಿಡಿದು ನರ್ತಿಸುವಂತಹದೇ. ಝಾಕಡೀ ನೃತ್ಯವನ್ನು ಮಾಡುವವರು ಎರಡು ಕೈಯ್ಯಲ್ಲೂ ದೊಡ್ಡ ಕರವಸ್ತ್ರದಂತಹುದನ್ನು ಹಿಡಿದುಕೊಂಡು ನರ್ತಿಸುವುದನ್ನು ಈಗಾಗಲೇ ಹೇಳಿದೆ. ಇದೇ ರೀತಿಯಾಗಿ ಖುರಾಸಾನಿನ 'ಗಜರ' ಎಂಬ ನೃತ್ಯವೊಂದು ಬಹಳ ಕುತೂಹಲಕಾರಿಯಾಗಿದೆ. ಆ ನೃತ್ಯ ಪದ್ಧತಿಯಲ್ಲಿ ಇಬ್ಬರು ಸುಂದರ ಯುವತಿಯರಲ್ಲಿ ಒಬ್ಬಳು ಎರಡು ಕೈಯಲ್ಲಿ ದೊಡ್ಡ ಕರವಸ್ತ್ರವನ್ನು ಹಿಡಿದುಕೊಂಡು ನರ್ತಿಸಿದರೆ, ಇನ್ನೊಂದು ಯುವತಿಯು ಕೈಯಲ್ಲಿ ದರ್ಪಣವನ್ನು ಹಿಡಿದು ಅಲಂಕಾರವನ್ನು ಮಾಡಿಕೊಳ್ಳುವ, ಮುಂತಾದ ಅಭಿನಯಗಳನ್ನು ಮಾಡುತ್ತ ನರ್ತಿಸುತ್ತಾಳೆ! ಇದು ನಮ್ಮ ಭಾರತೀಯ ನೃತ್ಯದ ಅನುಕರಣೆಯೇ ಇರಬಹುದು. ಬೇರಾವ ಖುರಾಸಾನಿನ (ಆಫ್ಘಾನಿಸ್ತಾನದ) ನೃತ್ಯದಲ್ಲೂ ಇದು ಕಾಣುವುದಿಲ್ಲ. ಈ 'ಗಜರ' ನೃತ್ಯವು ಪಂಡರೀಕ ವಿಠ್ಠಲನು ವರ್ಣಿಸುವ ಜಕ್ಕಡೀಯನ್ನು ಬಹುವಾಗಿ ಹೋಲುತ್ತದೆ. ಈ ಲೇಖನಾಂತ್ಯದಲ್ಲಿ ಇದನ್ನೂ ಸೇರಿ ನೀಡಲಾಗುವ ಕೆಲವು ಯೂ ಟ್ಯೂಬ್ ಲಿಂಕ್ ಗಳನ್ನು ನೋಡಿದಲ್ಲಿ ವಾಚಕರಿಗೆ ನಾನು ಹೇಳುವ ವಿಷಯಗಳ ಬಗ್ಗೆ ಹೋಲಿಸಿ ನೋಡಲು ಅನುಕೂಲವಾದೀತು. ಖುರಾಸಾನಿನ 'ಗಜರ' ಹಾಗೂ ಗ್ರೀಕ್ ಮತ್ತು ಪರ್ಶಿಯಾದ veil ನೃತ್ಯಗಳಿಗೆ ಭಾರತೀಯ ಸಂಗೀತ ಪರಿಭಾಷೆಯಲ್ಲಿರುವ' ಗಜರ' ವಾದ್ಯಪ್ರಬಂಧದ ಲಕ್ಷಣಗಳನ್ನೇ ಹೋಲುವ ಸಂಗೀತವಿರುವುದು ಗಮನೀಯ. ಆದರೆ ಇವುಗಳಲ್ಲಿ ಕೆಲವಕ್ಕೆ ಹಾಡುಗಾರಿಕೆ ಇದ್ದರೆ ಕೆಲವಕ್ಕೆ ಇಲ್ಲ. ಪಂಡರೀಕ ವಿಠ್ಠಲನು ಹೇಳುವ ಲಾವಣಿಯು ಮಹಾರಾಷ್ಟ್ರದ ಜನಪದದ ಲಾವಣಿಯೇ ಆಗಿದ್ದು, ಸೆರಗಿನಂಚನ್ನು ಹಿಡಿದು ನರ್ತಿಸಿದರೂ ಅದು ಜಕ್ಕಡೀಯಲ್ಲಿ ಹೇಳಿದ ಮೃದುವಾದ ಸಂಗೀತವನ್ನೋ, ಚೇಷ್ಟಿಮಾ ಇಲ್ಲದ ನೃತ್ಯವನ್ನೋ ಹೋಲದೆ ಬಹಳ ಶಕ್ತಿಯುತ ಆಂಗಿಕ ಚಲನೆಗಳನ್ನು ಹೊಂದಿದೆ. ಬಹುಶಃ ಜಕ್ಕಡೀ ನೃತ್ಯವು ಉಪಶಾಸ್ತ್ರೀಯ ನೃತ್ಯವಾಗಿ ದೇವಾಲಯಗಳಲ್ಲಿ ಸ್ತ್ರೀಯರು ಚಾಮರವನ್ನು ಬೀಸುವ, ಒಂದು ಕೈಯಲ್ಲಿ ಚಾಮರವನ್ನೂ ಇನ್ನೊಂದು ಕೈಯಲ್ಲಿ ಸೆರಗಿನ ಅಂಚನ್ನು ಹಿಡಿದು ನರ್ತಿಸುವ ನೃತ್ಯವಾಗಿತ್ತೆಂದು ತೋರುತ್ತದೆ.

ಯಕ್ಷ-ಯಕ್ಷಿಣಿ ಶಬ್ದಗಳ ತದ್ಭವ ರೂಪಗಳ ಬಗ್ಗೆ ಈಗಾಗಲೇ ಹೇಳಿದೆ. ಯಕ್ಷಿಣಿಯ ತದ್ಭವರೂಪವಾದ ಜಕ್ಕಿಣಿಯ ಬಗ್ಗೆ ಕೆ. ಕುಸುಮಾವತಿ ಬಾಯ್ ರವರು ತಮ್ಮ ಸಂಶೋಧನಾ ಗ್ರಂಥವಾದ Music - Dance and Musical Instruments : During the period of Nayakas (1673 - 1732)ದಲ್ಲಿ "ಬೃಹದ್ದೇಶಿಯಲ್ಲಿ ಮತಂಗನು ಜಕ್ಕಿಣಿಯು ಒಂದು ನೃತ್ಯದ ರೀತಿಯೆಂದೂ ಅದರಲ್ಲಿ ಸಾಹಿತ್ಯ ಮತ್ತು ಆಂಗಿಕವೆರಡೂ ಮುಖ್ಯವೆಂದು ಹೇಳಿದ್ದಾನೆ. 'ನಾಯಕ' ಆಡಳಿತದ ಸಮಯದ ಯಕ್ಷಗಾನಗಳಲ್ಲಿ ಜಕ್ಕಿಣಿಯು ರಾಜರ ಆಸ್ಥಾನಗಳಲ್ಲಿಯೂ ಪ್ರೋತ್ಸಾಹಿಸಲ್ಪಪಡುತ್ತಿತ್ತು. ಯಕ್ಷಿಣಿ ಎಂಬ ಮುಖ್ಯಪಾತ್ರವು ಕನ್ನಡ ಯಕ್ಷಗಾನದಲ್ಲಿ 'ಆಂದೋಲಿಕಾ' ಎಂಬ ನೃತ್ಯವನ್ನು ಮಾಡುತ್ತಿತ್ತು. ಯಕ್ಷಿಣಿಯ ಈ ನೃತ್ಯವನ್ನು ಮಾಡುತ್ತಿದ್ದರಿಂದ ಈ ನೃತ್ಯವನ್ನು ಜಕ್ಕಿಣಿ ಎನ್ನುತ್ತಾರೆ. ಬೃಹದ್ದೇಶಿಯಲ್ಲಿ ಮತಂಗಮುನಿಯಿಂದ ಈ ನೃತ್ಯ ಪ್ರಕಾರವು ಕಂಡುಹಿಡಿಯಲ್ಪಟ್ಟು ಹೇಳಿದೆ. ಇದಕ್ಕೆ 'ಜಕ್ಕಿಣಿ ಲಾಸ್ಯ' ಎಂದು

Copyright protected article. Infringement of copyright is punishable offence. No part of this publication is allowed for copy or reproduction of material.

Copyright protected article. Infringement of copyright is punishable offence. No part of this publication is allowed for copy or reproduction of material.

ಹೆಸರು" ಎಂದು ಬರೆದಿದ್ದಾರೆ. ಇದಕ್ಕೆ ಏನು ಆಧಾರವೆಂದು ತಿಳಿಯದು. ಅವರ ಗ್ರಂಥಋಣದ ಉಲ್ಲೇಖದಲ್ಲಿ 'ಬೃಹದ್ದೇಶಿ' ಯ ಉಲ್ಲೇಖವು ಕಾಣುವುದಿಲ್ಲ ಹಾಗೂ ಈ ಮಾತಿಗೆ ಉದ್ಧೃತಿಯನ್ನೂ ಕೊಟ್ಟಿರುವುದಿಲ್ಲ. ಡಾ. ರಾ. ಸತ್ಯನಾರಾಯಣರವರು ತಮ್ಮ ವಿಮರ್ಶಾತ್ಮಕ, ಸಂಶೋಧನಾ ಗ್ರಂಥವಾದ 'ಬೃಹದ್ದೇಶಿ' ಯಲ್ಲಿ "ಬೃಹದ್ದೇಶಿಯು ರಚಿತವಾದಾಗ ಅದರಲ್ಲಿ ವಾದ್ಯ, ತಾಲ, ಧ್ರುವಾ, ಕಪಾಲ ಮತ್ತು ನೃತ್ತಗಳನ್ನು ಕುರಿತ ಪ್ರತ್ಯೇಕ ಅಧ್ಯಾಯಗಳಿದ್ದು ಈಗ ಅವು ದೊರೆಯುವುದಿಲ್ಲ" ಎಂದು ಹೇಳಿ "ಉಪಲಬ್ಧ ಹಾಗೂ ಅನುಪಲಬ್ಧ ಗ್ರಂಥಾಂಶಗಳಲ್ಲಿ ಮತಂಗೋಕ್ತಿಯೆಂದು ಉಳಿದು ಬಂದಿರುವ ಕೆಲವು ಉದ್ಧೃತಿಗಳನ್ನೂ ಮತಂಗಪ್ರಣೀತವೆಂದು ಸಂಗ್ರಹಗೊಂಡು ಅಥವಾ ತಾತ್ಪರ್ಯಗೊಂಡು ಉಳಿದುಬಂದಿರುವ ಕೆಲವು ಉಲ್ಲೇಖಗಳನ್ನೂ ವಿವಿಧ ಆಕರಗಳಿಂದ ಆಯ್ದು ಕೊಟ್ಟಿದೆ" ಎಂದು ಬರೆದಿದ್ದಾರೆ.(ಪುಟ 75).ಇಂತಹ ಸಂದರ್ಭದಲ್ಲಿ ಕೆ.ಕುಸುಮಾಬಾಯಿಯವರಿಗೆ ಬೃಹದ್ದೇಶಿಯ ನೃತ್ಯಧ್ಯಾಯದ ಗ್ರಂಥ ಭಾಗವೇನಾದರೂ ದೊರಕಿದ್ದಲ್ಲಿ ಅದರಿಂದ ಸಂಶೋಧನಾಕಾರರಿಗೆ ಜಕ್ಕಿಣಿ, ಜಕ್ಕಡೀ ಇತ್ಯಾದಿಗಳ ಸಂಶೋಧನೆಗೆ ಬಹಳ ಅನುಕೂಲವಾಗುತ್ತದೆ. ಕುಸುಮಾಬಾಯಿಯವರು ತಮ್ಮ ಲೇಖನದಲ್ಲಿ ಪ್ರಾಚೀನ ಶ್ರೀಲಂಕಾದಲ್ಲಿ ಯಕ್ಷರು ಅನೇಕ ವರ್ಷಗಳು ಆಳಿದರೆಂದೂ ಈಗಲೂ 'ವೆಡ್ಡ' ಎನ್ನುವ ಜನಾಂಗವು 'ಯಕ್ಷಾರಾಧನ' ಎನ್ನುವ ಉತ್ಸವವನ್ನು ಆಚರಿಸುತ್ತಾರೆ, ಅದರಲ್ಲಿ ನೃತ್ಯವೇ ಬಹುಪಾಲು ಇರುತ್ತದೆ. ಬಲಿಚಕ್ರವರ್ತಿಯು ಸಂಪತ್ತಿನ ರಾಜನಾದ ಕುಬೇರನನ್ನು ಬಿಡುಗಡೆ ಮಾಡಿದ ದಿನವಾದದ್ದರಿಂದ ಆ ರಾತ್ರಿಯಿಡೀ ಸಂತೋಷದಿಂದ ನೃತ್ಯಾದಿಗಳಿಂದ ಕಾಲಕಳೆಯಬೇಕೆಂದೂ ಇದೆ. ಯಾವುದಾದರೊಂದು ಕಾಲದಲ್ಲಿ ಈ ಯಕ್ಷರು ಆಂಧ್ರಕ್ಕೆ ಹಾಗೂ ಕರ್ಣಾಟಕಕ್ಕೆ ವಲಸೆ ಬಂದಿರಬಹುದೆಂದೂ ಈ ಯಕ್ಷಕುಲಕ್ಕೆ ಸಂಗೀತ ಹಾಗೂ ನೃತ್ಯಗಳ ಕುರಿತು ಬಹಳ ಪ್ರೀತಿ ಇತ್ತು. ಈ ರೀತಿಯಾದ ನೃತ್ಯವು ಜಕ್ಕುಲ (ಜಕ್ಕಿಯರ) ಸ್ತ್ರೀಯರ ನೃತ್ಯವು ಜಕ್ಕಿಣಿ ನೃತ್ಯವಾಗಿದೆ" ಎಂದು ಬರೆದಿದ್ದಾರೆ. ಯಕ್ಷರು ಆಂಧ್ರಕ್ಕೆ ವಲಸೆ ಬಂದ ವಿಷಯವು ಸಂಭಾವ್ಯವಾದ್ದರಿಂದ ಈ ಬಗ್ಗೆ ವಿದ್ವಾಂಸರು ಸಂಶೋಧನೆಯನ್ನು ಮಾಡಬೇಕಾಗಿದೆ. ಏಕೆಂದರೆ ಭಂಡಾರು ಲಕ್ಷ್ಮೀನಾರಾಯಣನೂ ಆಂಧ್ರದ ಝುಂಕರಿಯನ್ನು ಹೇಳಿದ್ದಾನೆ. ಆದರೆ ಶ್ರೀಲಂಕಾದ ಈ ನೃತ್ಯವು ಈಗಲೂ ಬಹಳವಾಗಿ ಆದಿವಾಸಿಗಳ ಮಟ್ಟದಲ್ಲಿಯೇ ಇದ್ದು ಯಕ್ಷಗಾನದಷ್ಟು ಉತ್ತಮ ಮಟ್ಟದ ಶಾಸ್ತ್ರೀಯ ಕಲೆಯಾಗಿಲ್ಲ. ಆಂಧ್ರದ ಜಕ್ಕಿಣಿ ನೃತ್ಯವು ಶಾಸ್ತ್ರೀಯ ಮಟ್ಟದಲ್ಲಿದೆ. ಅವುಗಳನ್ನು ಪರಸ್ಪರವಾಗಿ ಹೋಲಿಸಲು ಸಾಧ್ಯವೇ ಇಲ್ಲ. ಶ್ರೀಲಂಕಾದ ಈ ಯಕ್ಕ ನೃತ್ಯವು ಸ್ತ್ರೀ ದೇವತೆಯ ಕುರಿತಾಗಿದೆ.

ಶ್ರೀಲಂಕಾದ ಕುರಿತು ರಾಮಾಯಣದಲ್ಲಿ ಯಕ್ಷ ರಾಜನಾದ ಕುಬೇರನಿಂದ ಶ್ರೀಲಂಕಾವು ಆಳಲ್ಪಡುತ್ತಿತ್ತೆಂದೂ ಅವನ ಮಲ ಸಹೋದರನಾದ ರಾವಣನಿಂದ ರಾಜ್ಯವು ಅಪಹರಿಸಲ್ಪಟ್ಟಿತೆಂದೂ ಇದೆ.. ಯಖ್ಖ ಎನ್ನುವ ಜನಾಂಗವು ಇನ್ನೂ ಶ್ರೀಲಂಕಾದಲ್ಲಿ ಇದ್ದಾರೆ, ಇವರು ಬೌದ್ಧರ ಕಾಲಕ್ಕೂ ಮೊದಲೇ ಬಂದವರು, ಯಖ್ಖ ಎನ್ನುವ ಈ ಶಬ್ದವು ಅವರಿಗೆ ಪಾಲಿ ಭಾಷೆಯಿಂದ ಬಂದದ್ದು ಎಂದು ಸಂಶೋಧಕರು ಹೇಳಿದ್ದಾರೆ.

ಡಾ. ರಾಘವನ್ ನಂಬಿಯಾರರು ತಮ್ಮ 'ಹಿಮ್ಮೇಳ' ಪುಸ್ತಕದಲ್ಲಿ "--'ಚಾಕ್ಯಾರ್'ಎಂಬುದಕ್ಕಿರುವ ಯಕ್ಷಗಾನದ ನಂಟನ್ನು ಗುರುತಿಸುವುದು ಕುತೂಹಲದ ವಿಷಯ. 'ಚಾಕ್ಕಿಯಾರ್' ಎಂದರೆ 'ಯಕ್ಷರ ಅವರು' ಎಂದಲ್ಲದೆ ಬೇರೆ ಅಲ್ಲ. ಯಕ್ಷ, ಜಕ್ಕ, ಚಕ್ಕ —ಇದು ಶಬ್ದವೊಂದು ಕಾಲಕ್ರಮದಲ್ಲಿ ಬಾಯಲ್ಲಿ ಬದಲುವ ರೀತಿ. ಪ್ರಾಚೀನ ಕನ್ನಡ ವಾಙ್ಮಯದಲ್ಲಿ' ಯಕ್ಷಾಂದೋಳ' ಎಂಬ ಶಬ್ದ ಸಿಕ್ಕುತ್ತದೆ. 'ಜಕ್ಕಂದೊಟ', ಚಕ್ಕಂದೊಟ' ಎಂದು ಪ್ರಯೋಗಿಸಿರುವುದೂ ಇದೆ ಎಂದು ಹೇಳಿ 'ಯಕ್ಷಾಂದೋಳ' ಎಂಬುದು ಚಾಕ್ಕಿಯಾರ್ ಕೂತ್ತ್ - ಇದು ನಂಗೆಯರ (ಕೇರಳದ ದೇವಸ್ಥಾನಗಳಲ್ಲಿತ್ಯ ಸೇವೆಗೆಂದು ಇದ್ದ ಸ್ತ್ರೀಯರು)ಆಗಿದ್ದಿರಬಹುದು. 'ಚಾಕ್ಯಾರರು' ಮತ್ತು ನಂಗೆಯರು ಕೂಡಿ ಆಡುವ' ಕೂಡಿಯಾಟ್ಟಂ' ಈಗಲೂ ಕೇರಳದ ದೇವಸ್ಥಾನಗಳಲ್ಲಿ ಇದೆ. ಇದರ ಪ್ರದರ್ಶನಕ್ಕಾಗಿಯೇ ದೇವಸ್ಥಾನದ ಆವರಣದ ಒಳಗೆ ಸಾಂಪ್ರದಾಯಿಕ ರಂಗಮಂದಿರ ಪ್ರತ್ಯೇಕವಾಗಿದೆ ಇದಕ್ಕೆ 'ಕೂತ್ತಂಬಲಂ' (ಕೂತ್ತ್ - ನೃತ್ಯ, ಅಂಬಲಂ-ಮಂದಿರ, ದೇವಸ್ಥಾನ) ಎಂದು ಹೆಸರು ಎಂದೂ, ಯಕ್ಷ ಎಂಬುದು ಜಾನಪದ ದೈವಗಳನ್ನು ಉದ್ದೇಶಿಸುವ ಶಬ್ದ. ಈ ದೈವಗಳ ಆರಾಧನೆ ಮೂರ್ತಿರೂಪದಲ್ಲಿದ್ದು ಮೂರ್ತಿಯ ಮುಂದೆ ಉತ್ಸವಾಚರಣೆಯ ಕಾಲದಲ್ಲಿ ಹಾಡು, ನೃತ್ಯಗಳನ್ನು ಸೇವಾರೂಪದಲ್ಲಿ ನಡೆಸುತ್ತಿದ್ದರು" ಎಂದು ಡಾ. ರಾಘವನ್ ರವರು ಬರೆಯುತ್ತಾರೆ. ಈ ಮಾತುಗಳು ಜನಪದ ನೃತ್ಯಗಳಾದ ಜಾಖಡೀ, ಝಾಕ್ರೀ, ಯಕ್ಕ, ಹಾಗೂ ದೇವಳ ನೃತ್ಯವಾದ ಜಕ್ಕಿಣಿ ಇತ್ಯಾದಿ ಅನೇಕ ಭಾರತೀಯ ಹಾಗೂ ಸಿಂಹಳೀಯ ನೃತ್ಯಕ್ಕೂ ಅನ್ವಯವೇ ಆಗುತ್ತದೆ. ಸಿಂಹಳೀಯ ಭೂತನೃತ್ಯವಾದ ಯಖ್ಖ ಅಥವಾ ಗರಾ ಯಕಾದಲ್ಲಿ ಮುಖವಾಡವನ್ನು ಹಾಕಿಕೊಂಡು ಹಾಸ್ಯದ ಸಂಭಾಷಣೆಗಳನ್ನು ಮಾಡಿಕೊಂಡು ಜಾನಪದ ರೀತಿಯ ಹಾಡುತ್ತಾರೆ. ಇದು ದ. ಕ. ಜಿಲ್ಲೆಯ ಕೆಲವು ಭೂತನೇಮಗಳಿಗೆ ಅನೇಕ ವಿಧದಲ್ಲಿ ಹೋಲುತ್ತದೆ. ಕೆಲವೊಮ್ಮೆ ಸೊಪ್ಪನ್ನು ಹಿಡಿದುಕೊಂಡು ಕುಣಿಯುತ್ತಾರೆ, ಮದ್ದಲೆಯನ್ನು ಬಾರಿಸುತ್ತಾರೆ. ಈ ನೃತ್ಯಕ್ಕೆ ವಿಧ ವಿಧವಾದ ಮುಖವಾಡಗಳನ್ನು ಧರಿಸುತ್ತಾರೆ. ಸಿಂಹಳೀಯರು ನಂಬುವ ಯಕ್ಷರಲ್ಲಿ 'ದೇವಲ್ಲ ಯಕ್ಸೇಯ' ವು ಒಳ್ಳೆಯ ಯಕ್ಷನೆಂದು ಆರಾಧಿಸಲ್ಪಡುತ್ತದೆ. ಶ್ರೀಲಂಕಾದಲ್ಲಿ Riddhi Yakseniyo ಗಳು ಏಳು female demon ಗಳಾದರೆ (ಇವು ಭಾರತೀಯ ಸಪ್ತ ಮಾತೃಕೆಯರೂ, ಸಪ್ತ ಕನ್ನಿಕೆಯರ ರೀತಿ ಕಂಡರೂ ಗುಣದಲ್ಲಿ ಅಷ್ಟಾಗಿ ಹೋಲುವುದಿಲ್ಲ), 'Curumbera Yekseyo, Mala Yakseyo are cruel demons. Garaa Yakaa, Dewalla Yakseya has no evil disposition. There are so many Yaka

Copyright protected article. Infringement of copyright is punishable offence. No part of this publication is allowed for copy or reproduction of material.

Copyright protected article. Infringement of copyright is punishable offence. No part of this publication is allowed for copy or reproduction of material.

spirits in Srilanka' ಎಂದು Dandris de Silva Gooneratne ಯವರು ತಮ್ಮ On Demonology and witchcraft in Ceylon ಪುಸ್ತಕದಲ್ಲಿ ಬರೆದಿರುತ್ತಾರೆ. ಯಕ್ಷ ಅನ್ನುವ ಪದವು ಅತ್ಯಂತ ಪ್ರಾಚೀನದಲ್ಲಿ ಅನೇಕ ವಿಧವಾದ ಅತಿಮಾನುಷ ಶಕ್ತಿಗಳಿಗೆ ಪ್ರಯೋಗವಾಗುತ್ತಿತ್ತೆಂದು ಶ್ರೀ ಆನಂದ ಕುಮಾರಸ್ವಾಮಿಯವರ ಪುಸ್ತಕದಿಂದ ತಿಳಿದುಬರುತ್ತದೆ.

Lady Vashti al - Azar ರವರು ತಮ್ಮ ಸಂಶೋಧನಾ ಗ್ರಂಥವಾದ '16 th Century Dance from Khorasan' ನಲ್ಲಿ "Discovering what dance was like within the Persian Empire is a complicated process. The Empire encompassed a diverse group of ethnicities and religions. Major cultural influences included Hellenistic Greece, Arabic Islam, the central Asian Steppe, and the Indian sub - Continent focusing on a narrow region, the time span within the Persian Empire allows for a more focused study of dance. A plausible recreation of dance from the eastern edge of the Persian Empire can be reached by comparing present day Afghan folk dance and music influenced by neighbouring cultures, especially in the region closest to the bordered by Iran to the Southwest and Pakistan to the Southeast. During the Persian Empire Pakistan was part of India and Afghanistan was part of the province of Khorasan in the Persian Empire. Historical evidence supports the theory of cultural exchange between the Persian Empire and India prior to the 16th century. In objects of Translation, F. B. Flood explores how raiding, gift giving and trade shifted cultural boundaries between Hindu and Muslim lands. Musical terms also evidence the influence Persia and India had on one another. For example, the Indian Sitar is related to the Persian Tar or Sehtar. The Indian singing styles of Ghazal, Tarana and Quali are based in Persian music, and the terms have Persian origins. 7/8th rhythm common in southern Afghanistan is referred as Tal - e-Moghuli. The name is an Indian reference and a similar rhythm is found in north India.

Persian dance is also referenced in Indian writings from the 16th and 17th centuries, the Narthana Nirnaya and Sangeetha Darpana. The text describe Jakkadi (Jakkari) a dance introduced to Mughal courts by female dancers from Persia. In this dance style women swayed the edges of their garments and sang Persian songs accompanied by gestures and graceful movement of the limbs. In the Shahmaneh, Ferdowsi tells how the Persian ruler, Babur, asked his Indian father - in - law to send 12,000 Indian musicians to the Persian court. While the number and specific incident may be exaggerated as legend, the general concept of musicians coming from India to Persian country is accurate. With tread and transport going between Persia and India, Afghanistan's music and dance are influenced by the cultures from both regions".

ಇದರಲ್ಲಿ ಲೇಡಿ ವಷ್ಟಿ ಅಲ್ - ಅಜ್ಸರ್ ರವರು ಉಲ್ಲೇಖಿಸಿದ ಜಕ್ಕಡೀ, ಗಜ್ಸಲ್, ತರಾನಾ, ಕವಾಲಿಗಳಲ್ಲಿ "ಗಜ್ಸಲ್"ಎನ್ನುವುದು ಪ್ರೇಮಗೀತೆ ಎಂಬ ಅರ್ಥವುಳ್ಳ ಉರ್ದೂ ಶಬ್ದ. ಇದು 16ನೆಯ ಶತಮಾನದಲ್ಲಿಯೇ ದಕ್ಷಿಣ ಭಾರತದಲ್ಲಿ, ಅದರಲ್ಲೂ ಕರ್ಣಾಟಕದ ವಿಜಯನಗರದ ಪ್ರಭು ಕೃಷ್ಣದೇವರಾಯನ ಕಾಲದಲ್ಲಿಯೇ ಬಹಳ ಪ್ರಚಲಿತವಿತ್ತು. ಇದಕ್ಕೆ ಕಾರಣ ನೆರೆಹೊರೆಯ ಮುಸ್ಲಿಂ ರಾಜ್ಯಗಳ ಅಥವಾ ವಿಜಯನಗರಕ್ಕೆ ಬರುತ್ತಿದ್ದ ತುರುಕ ಕಲಾವಿದರ ಪ್ರಭಾವವು ಕಾರಣವಿರಬಹುದು. ಸಂಸ್ಕೃತೀಕರಣಗೊಂಡು ಗರ್ಜರು ಆದ ಗಜ್ಸಲ್ ನ್ನು ಕೃಷ್ಣದೇವರಾಯನ ಆಸ್ಥಾನದ ವಿದ್ವಾಂಸನಾಗಿದ್ದ ಭಂಡಾರು ಲಕ್ಷ್ಮೀನಾರಾಯಣನು ತನ್ನ ಲಕ್ಷಣಗ್ರಂಥವಾದ ಸಂಗೀತ ಸೂರ್ಯೋದಯದಲ್ಲಿ ಪರ್ಶಿಯಾ ದೇಶದ ಖುರಸಾನ್ ಪ್ರದೇಶದ್ದೆಂದು ಸ್ಪಷ್ಟೋಕ್ತಿಯಲ್ಲಿಯೇ ಬರೆಯುತ್ತಾನೆ. "ತರಾನ" ವು ಕರ್ನಾಟಕ ಸಂಗೀತದ 'ತಿಲ್ಲಾನ' ಕ್ಕೆ ಪರಸ್ಪರವಾದುದು. ಪ್ರಾಚೀನ ಭಾರತೀಯ ಸಂಗೀತದಲ್ಲಿ ರೂಢಿಸಿದ್ದ ಕೈವಾಡ ಪ್ರಬಂಧದ ಆಧುನಿಕ ರೂಪ. ಸಂಸ್ಕೃತ ಮತ್ತಿತರ ಭಾರತೀಯ ಭಾಷೆಗಳೇ ತಿಳಿಯದಿದ್ದ ಅಮೀರ್ ಖುಸ್ರೋವು ಭಾರತೀಯ ಸಂಗೀತದ ರಾಗ, ತಾಳಗಳಲ್ಲಿ ಅರ್ಥರಹಿತವಾದ ಅಕ್ಷರ ಸಮುಚ್ಚಯಗಳನ್ನು ತುಂಬಿ ಇದನ್ನು ಸೃಷ್ಟಿಸಿದನೆಂದು ಹೇಳುವ ಖುಸ್ರೋ ಭಕ್ತರೂ ಇದ್ದಾರೆ! ತರಾನಾ

Copyright protected article. Infringement of copyright is punishable offence. No part of this publication is allowed for copy or reproduction of material.

Copyright protected article. Infringement of copyright is punishable offence. No part of this publication is allowed for copy or reproduction of material.

ಪಾಟಾಕ್ಷರ ಸಮುಚ್ಚಯಗಳಲ್ಲಿ ಅರೇಬಿಕ್, ಪರ್ಶಿಯನ್ ಭಾಷೆಗಳ ಪರಸ್ಪರ ಸಮುಚ್ಚಯಗಳ ಹರುಕು ಮುರಕುಗಳ ಅಪಭ್ರಂಶಗಳನ್ನು ತುಂಬುವ ಸಾಹಸಿಗಳೂ ಇದ್ದಾರೆ! "ಕವಾಲಿ"ಯು 13ನೆಯ ಶತಮಾನದಲ್ಲಿ ಭಕ್ತಿ ಪಂಥದ ಸೂಫಿಗಳಿಂದ ಬಂದಿದ್ದು- ಪರ್ಶಿಯನ್, ಅರೇಬಿಕ್, ಟರ್ಕ್, ಮತ್ತು ಭಾರತೀಯ ಸಂಗೀತದ ಮಿಶ್ರಣವಾಗಿದೆ. 'ಸಾಮ' ಎನ್ನುವ ಹೆಸರು ಮಧ್ಯ ಏಷ್ಯಾ ಹಾಗೂ ಟರ್ಕಿಯಲ್ಲಿ ಇದಕ್ಕೆ ಇನ್ನೂ ಪ್ರಚಲಿತವಿದೆ. ಭಾರತೀಯ ಭಜನಾ ಪದ್ಧತಿಯಂತೆ ಕವ್ವಾಲಿಯಲ್ಲಿಯೂ ಮುಖ್ಯಗಾಯಕನು ಹಾಡಿದ್ದನ್ನು ಗುಂಪಿನ ಉಳಿದವರು ಪುನರ್ ಗಾಯನ ಮಾಡುವ, ವಿವಿಧ ಲಯಗಳಲ್ಲಿ ಹಾಡುತ್ತಾ ಭಕ್ತಿಪರವಶರಾಗುವ ಪದ್ಧತಿ ಇದೆ. ಇದು ಭಾರತೀಯ ಭಕ್ತಿ ಪಂಥದವರು ಮಾಡುತ್ತಿದ್ದ ಭಜನಾ ಪದ್ಧತಿಗಳಿಂದಲೇ ಪ್ರಭಾವಿತವಾದುದು ಎಂದು ತಿಳಿದ ವಿಷಯವೇ ಆಗಿದೆ. ಲೇಡಿ ವಷ್ಟಿ-ಅಲ್ - ಅಜರ್ ರವರು ಉಲ್ಲೇಖಿಸಿದ
"ಜಕ್ಕಡೀ" ನೃತ್ಯವು ಅವರು ಊಹಿಸಿದಂತೆಯೇ ಭಾರತದ ನೃತ್ಯವೇ ಆಗಿದ್ದು ಜನಪದವಾಗಿಯೂ, ಉಪಶಾಸ್ತ್ರೀಯವಾಗಿಯೂ ನೃತ್ಯರೂಪಗಳಲ್ಲಿ ಗ್ರೀಕ್, ಪರ್ಶಿಯಾ, ಈಜಿಪ್ಟ್ ಮುಂತಾದ ದೇಶಗಳಲ್ಲಿ ವಿವಿಧ ಭಾಷೆಗಳಲ್ಲಿ, ಆಯಾ ದೇಶಾಚಾರಗಳ ಪದ್ಧತಿಯನ್ನು ಅನುಸರಿಸಿ ಭಾಷೆ, ವೇಷ, ನೃತ್ಯ ಇತ್ಯಾದಿಗಳಲ್ಲಿ ಮಾರ್ಪಾಡುಗಳನ್ನು ಹೊಂದಿ ನರ್ತಿಸಲ್ಪಟ್ಟಿತಾದರೂ ಇದು ಭಾರತದಿಂದಲೇ ಪಸರಿಸಿದ್ದೆಂಬುದು ಜಕ್ಕಡೀಯ ಹೆಸರೇ ಹೇಳುತ್ತದೆಂದು ಈ ಸಂದರ್ಭದಲ್ಲಿ ಪುನಃ ಹೇಳಬಹುದು.

ಭಂಡಾರು ಲಕ್ಷ್ಮೀನಾರಾಯಣನು ಹೇಳಿರುವ ಝುಂಕರೀ

ಹದಿನಾರನೆಯ ಶತಮಾನದ ಮೂರನೆಯ ದಶಕದಲ್ಲಿ(ಶ. 1525-30ರಲ್ಲಿ) ಸಂಗೀತಸೂರ್ಯೋದಯವನ್ನು ರಚಿಸಿದ ಭಂಡಾರು (ಭಂಡಾರಿ) ಲಕ್ಷ್ಮೀನಾರಾಯಣನು ಕೃಷ್ಣದೇವರಾಯನ ಆಸ್ಥಾನದಲ್ಲಿದ್ದವನು. ತನ್ನ ಗ್ರಂಥದಲ್ಲಿ ಅವನ ಕಾಲದಲ್ಲಿ ನಡೆದ ಎಷ್ಟೋ ರಾಜಕೀಯ ಘಟನೆಗಳನ್ನು ವರ್ಣಿಸಿದ್ದಲ್ಲದೆ, ನೃತ್ಯವನ್ನು ಮುಖ್ಯ ಉದ್ದೇಶವಾಗಿ ಇಟ್ಟುಕೊಂಡು ಅದಕ್ಕೆ ಸಂಬಂಧಿಸಿದಂತೆ ಗಾಯನ, ವಾದ್ಯ, ಪ್ರಬಂಧಗಳು ಇತ್ಯಾದಿಗಳನ್ನು ವರ್ಣಿಸಿದ್ದಾನೆ. ಸಂಗೀತಸೂರ್ಯೋದಯದ ಪ್ರಬಂಧಾಧ್ಯಾಯದಲ್ಲಿ ಹೆಚ್ಚಿನವು ಸಂಗೀತರತ್ನಾಕರದಿಂದ ಪಡೆದುಕೊಂಡು ಅಧ್ಯಾಯದ ಕೊನೆಯಲ್ಲಿ ಪ್ರಾಚೀನ ತುರುಷ್ಕ- ದೇಶೀಯ ಪ್ರಬಂಧಗಳನ್ನು ಹೆಚ್ಚಾಗಿ ಹೇಳಿದ್ದಾನೆ. ಇದರಲ್ಲಿ ಆರು ತುರುಷ್ಕ ದೇಶಗಳಾದ ಖರ್ಷಣ (=ಖುರಾಸಾನ್), ಪಾರ್ಶ್ವ(=ಪರ್ಶಿಯಾ), ಮೂಲತ್ರಾಣ (=ಮುಲ್ತಾನ್), ಲಾಟ (=ಅರ್ವಾಚೀನ ಗುಜರಾತಿನ ಕೆಲವು ಭಾಗಗಳು,), ಅವಶೀಯ ಮತ್ತು ಘನ. ತುರುಷ್ಕ ದೇಶದಿಂದ ಬಂದ ಈ ಪ್ರಬಂಧಗಳು ವಸ್ತುವಿಷಯವಾಗಿ ಮಾದಕತೆಯನ್ನೂ, ಮೋಹವನ್ನೂ, ಹೆಮ್ಮೆಯನ್ನೂ ಒಳಗೊಂಡಿದೆ ಎನ್ನುತ್ತಾನೆ. ಇದರಲ್ಲಿ ಗಜಲು (ಗಜ್ಜಲ್) ಖರ್ಷಣದಿಂದಲೂ, ಕೌಲು (ಕವ್ವಾಲಿ) ಪಾರ್ಶ್ವದಿಂದಲೂ, ಹಸಕವು ಮೂಲತ್ರಾಣದಿಂದಲೂ, ಪ್ರತಿತಾಲವು ಲಾಟದಿಂದಲೂ, ದೇಶಜ, ಅರ್ಥ, ಅನರ್ಥ ಎಂಬ ಮೂರು ಬಗೆಯ ಮಂಜರೀಗಳು ಅವಶೀಯಿಂದಲೂ, ಝುಂಕರೀಯು ಘನದಿಂದಲೂ ಬಂದಿದೆ ಎಂದು ಉಲ್ಲೇಖಿಸಿದ್ದಾನೆ. ಇವುಗಳಲ್ಲಿ ಕೆಲವು ದೇಶೀಯ ಹಾಗೂ ವಿದೇಶೀಯ ಸ್ಥಳನಾಮಗಳಾಗಿವೆ. ಝುಂಕರೀಯ ಹತ್ತು ಬಗೆಗಳಾದ ಘೊಟ, ಜಾಲ, ಆಂಧ್ರೀ, ಸಿಂಹಲ, ಗಾರು, ಸೈಂಧ್ರು, ಪ್ರಾಣೇಶೀ, ಮತ್ತು ಗೌರ್ಜರೀ ಎಂದು ಹೇಳುತ್ತಾನೆ. ಇವುಗಳು ಸಹಾ ದೇಶೀಯ ಹಾಗೂ ವಿದೇಶೀಯ ಪ್ರಾದೇಶಿಕ ಝುಂಕರೀ ವಿಧಗಳು ಎಂಬುವುದು ಇವುಗಳ ಹೆಸರುಗಳಿಂದಲೇ ತಿಳಿಯುತ್ತದೆ. ನಂತರದ ಗ್ರಂಥದ ಭಾಗವು ಶಿಥಿಲವಾದದ್ದರಿಂದ ಹತ್ತನೆಯ ಝುಂಕರೀಯ ಹೆಸರು ತಿಳಿಯುವಂತಿಲ್ಲ. ಈಗಾಗಲೇ ಝುಂಕರೀ, ಝಾಕ್ರೀ ಇತ್ಯಾದಿಗಳು ಹಿಮಾಲಯದ ತಪ್ಪಲಿನ ಯಕ್ಷರ ನೃತ್ಯವೆಂದು ಹೇಳಿದೆ. ಬೌದ್ಧರ ಹಾಗೂ ಜೈನರ ಅರಸರ ಆಳ್ವಿಕೆಯ ಕಾಲದಲ್ಲಿ ಪ್ರಾಚೀನದಲ್ಲಿಯೇ ಯಕ್ಷ ಜನಾಂಗಗಳು ಅಲ್ಲಲ್ಲಿ ವಲಸೆ ಹೋಗಿ ನೆಲೆಸಿದವು.

ಪರ್ಶಿಯಾದ ನೃತ್ಯ ಪ್ರಕಾರಗಳು ಅಲ್ಲಿಯ ರಾಯಭಾರಿಯಾಗಿದ್ದ ಅಬ್ದುರ್ ರಜಾಕನು ಪ್ರೌಢದೇವರಾಯನಿಗೆ (ಶ. 1422-1446)ಅನೇಕ ನೃತ್ಯ ಹಾಗೂ ಸಂಗೀತಗಾರರನ್ನು ಬಳುವಳಿಯಾಗಿ ಕೊಟ್ಟಿದ್ದರಿಂದ ಈ ನೃತ್ಯಪ್ರಕಾರಗಳು ಭಾರತಕ್ಕೆ ಆಗಮಿಸಿತು ಎಂದು ಹಲವು ವಿದ್ವಾಂಸರ ಅಭಿಪ್ರಾಯವಾದರೂ, ಈ ಘಟನೆಗೂ ಮೊದಲೇ ಅನೇಕ ನೃತ್ಯ ಪ್ರಬಂಧಗಳು ವಿಜಯನಗರದ ಆಸ್ಥಾನಕವಿಗಳಿಂದ ಉಲ್ಲೇಖಿಸಲ್ಪಟ್ಟಿದೆ. ಅಷ್ಟಭಾಷಾಕವಿ ಚಂದ್ರಶೇಖರನು ತನ್ನ 'ಪಂಪಾಸ್ಥಾನ ವರ್ಣನಂ'ನಲ್ಲಿ (ಶ. 1430)ಗಜಲು, ಕೌಲು, ಭೈಟು, ತೂರಿಗೆ, ಆಂದೋಲನ ಮತ್ತು ಜಕ್ಕರೀಗಳನ್ನು ಉಲ್ಲೇಖಿಸಿದ್ದಾನೆ. ವಿಜಯನಗರ ಅರಸರ ಕಾಲದ ಆಳ್ವಿಕೆಯ ಕಾಲದಲ್ಲಿ ಭೇಟಿಯಾಗಿದ್ದ ವಿದೇಶೀಯ ಪ್ರವಾಸಿ ಡೊಮಿಂಗೊ ಪಾಯಿಸನು ತನ್ನ ಪ್ರವಾಸ ಕಥನದಲ್ಲಿ ವಿಜಯನಗರದ ಅರಮನೆಯಲ್ಲಿ ಅಭೂತಪೂರ್ವ ನೃತ್ಯ ಹಜಾರ, ಅಲ್ಲಿದ್ದ ಸುಂದರ ಸರಸ್ವತೀ ದೇವಿಯ ಮೂರ್ತಿ ಮತ್ತು ಅನೇಕ ಸುಂದರ ನೃತ್ಯ ಶಿಲ್ಪಗಳಿದ್ದುದಾಗಿ ಉಲ್ಲೇಖಿಸುತ್ತಾನೆ. ಆ ಶಿಲ್ಪಗಳು ಕಿಡಿಗೇಡಿಗಳಿಂದ ಹಾನಿಗೊಳಗಾಗಿ ನಷ್ಟವಾದ್ದರಿಂದ ಆ ಕಾಲದಲ್ಲಿ ಇದ್ದಿರಬಹುದಾದ ಜಕ್ಕಡೀಯಂತಹ ಅನೇಕ ನೃತ್ಯ ಶೈಲಿಗಳ ಶಿಲ್ಪಗಳ ಭಾವಭಂಗಿಗಳು ದೊರೆಯದಂತಾದುದು ನೃತ್ಯಪ್ರಪಂಚದ ತುಂಬಲಾರದ ನಷ್ಟವೇ ಆಯಿತು.

ಯಕ್ಷಿಣಿ - ಯಕ್ಷ

Copyright protected article. Infringement of copyright is punishable offence. No part of this publication is allowed for copy or reproduction of material.

(ವಿ. ಸೂ. — ಲೇಖನದ ಈ ಭಾಗಕ್ಕೆ ಅನೇಕ ಬಾರಿ ಶ್ರೀ ಆನಂದ ಕೆಂಟಿಶ್ ಕುಮಾರಸ್ವಾಮಿಯವರ 'YAKSAS' ಪುಸ್ತಕದಿಂದ ಉದ್ಧರಿಸಿಕೊಳ್ಳುವುದಿಂದ ಅವರ ಪುಸ್ತಕದ ಉದ್ಧೃತಿಯ ಭಾಗಗಳಿಗೆ ಕಂಸಗಳಲ್ಲಿ (AKC) ಎಂದು ಸೂಚಿಸಲಾಗುತ್ತದೆ.)

ಯಕ್ಷ, ಯಕ್ಷಿಣಿ ಶಬ್ದಗಳು ವಿವಿಧ ರೀತಿಯ ಉಚ್ಚಾರಣೆಗಳಲ್ಲಿ, ತದ್ಭವಗಳ ರೂಪದಲ್ಲಿ ನಮ್ಮ ದೇಶದಲ್ಲಿರುವಂತೆ ಪ್ರಪಂಚದ ಹಲವೆಡೆಗಳಲ್ಲಿ ಯಕ್ಷ - ಯಕ್ಷಿಣಿಯರ ಅನೇಕ ಲಕ್ಷಣಗಳನ್ನು ಹೋಲುವಂತಹ ಅತಿಮಾನುಷ- ಅತೀಂದ್ರಿಯ ಶಕ್ತಿಗಳು ಇವೆಯೆಂದು ನಂಬುಗೆಗಳೂ ಆರಾಧನೆಗಳೂ ಪ್ರಚಲಿತದಲ್ಲಿವೆ. ಯಕ್ಷ ಯಕ್ಷಿಣಿಯರು ನೀರು ಹಾಗೂ ವೃಕ್ಷದೇವತೆಗಳಾಗಿದ್ದು ವೇದಗಳ ಕಾಲದಲ್ಲಿ ಅವರಿಗೆ ದೇವತೆಗಳ ಸ್ಥಾನವಿತ್ತು. ಆದಿವಾಸಿಗಳಲ್ಲಿಯೂ ಇವರ ಆರಾಧನೆ ಇತ್ತು (AKC) ಇದು ಬಹುತೇಕ ಬೃಹದ್ಭಾರತವಿದ್ದ ಕಾಲದಲ್ಲಿ ಆಗುತ್ತಿದ್ದ ಸಂಪರ್ಕಗಳಿಂದ ಈ ನಂಬುಗೆಗಳು ಪ್ರಪಂಚದ ಇತರ ಪ್ರಾಚೀನ ಸಂಸ್ಕೃತಿಗಳಿಗೂ ವಿಸ್ತರಿಸಿದವೆಂದು ತೋರುತ್ತದೆ. Strzygowski ರವರು ತಮ್ಮ 'Mazdean landscape' ಪುಸ್ತಕದಲ್ಲಿ 'a culture as we might expect to have arisen in the later stone age and amongst permanently settled agricultural communities, and already embodying all the essential elements of civilization, extended from northern India to Egypt and the Mediterranean as early as the third, fourth millennium B. C. (AKC)ಎಂದಂತೆ ಬಹು ಪ್ರಾಚೀನ ಕಾಲದಿಂದಲೇ ಭಾರತೀಯ ಸಂಸ್ಕೃತಿಯು ವಿಶ್ವದ ಅನೇಕ ಪ್ರದೇಶಗಳಲ್ಲಿ ಹರಡಿ ಜನಜೀವನದಲ್ಲಿ ಅಳವಡಿಸಿಕೊಳ್ಳಲ್ಪಟ್ಟಿತು. ಇದರಲ್ಲಿ ಜನಜೀವನಕ್ಕೆ ಅತ್ಯಗತ್ಯವಾದ ನೀರು, ಕೃಷಿ, ಸಸ್ಯ ಸಮೃದ್ಧಿಯನ್ನೂ, ಹಾಗೂ ಸಂತಾನವನ್ನು ಧಾರಾಳವಾಗಿ ನೀಡುವಂತಹ ಮಾತೃದೇವತೆಯನ್ನು ಕುರಿತಾದ ಆರಾಧನೆಯೂ ಒಂದು. ಔಷಧೀಯ ವೃಕ್ಷದ ದೇವತೆಯೆಂದು ಪರಿಗಣಿಸಲ್ಪಡುತ್ತಿದ್ದ ಯಕ್ಷಿಣಿ ಹಾಗೂ ರಕ್ಷಣಾ ಕಾರ್ಯವನ್ನು ನಿರ್ವಹಿಸುತ್ತಿದ್ದ ಯಕ್ಷರ ಶಬ್ದವನ್ನು ಹೋಲುವಂತಹ ಶಬ್ದಗಳನ್ನು ಕೆಲವು ಪ್ರದೇಶಗಳಲ್ಲಿ ಉಪಯೋಗಿಸಿದರೆ ಕೆಲವು ಪ್ರದೇಶಗಳು ಆಯಾ ದೇಶಾಚಾರಗಳಿಗೆ ತಕ್ಕಂತೆ ಭಾಷೆಗಳ ಉಚ್ಚಾರವನ್ನೂ, ಆಚರಣೆಗಳನ್ನೂ, ಹೆಸರುಗಳನ್ನೂ ಹೊಂದಿದವು. ಈ ಬದಲಾವಣೆಗಳಾದರೋ ಸಾವಿರಾರು ವರ್ಷಗಳಿಗೂ ಮಿಕ್ಕಿ ಆದಿವಾಸಿಗಳ ಕಾಲದಿಂದಲೂ ಆಯಾ ಕಾಲದ ಯುದ್ಧ, ವ್ಯಾಪಾರ, ವಲಸೆ ಇತ್ಯಾದಿ ಅನೇಕ ಕಾರಣಗಳನ್ನು ಹೊಂದಿ ಆದಂತಹ ಸಂಗತಿಗಳು.

ಯಕ್ಷ ಯಕ್ಷಿಣಿಯರು ಹಿಂದೂ, ಬೌದ್ಧ ಹಾಗೂ ಜೈನರ ಪುರಾಣಗಳಲ್ಲಿ ಹೆಚ್ಚು ಕಾಣಬರುತ್ತಾರೆ. ಬಹುಶಃ ಹೆಚ್ಚು ಕಡಿಮೆ ಒಂದೇ ಕಾಲದಲ್ಲಿ ಹುಟ್ಟಿಕೊಂಡ ಬೌದ್ಧ ಹಾಗೂ ಜೈನ ಮತಗಳೆರಡಕ್ಕೂ ಪ್ರಕೃತಿಯಾರಾಧನೆಯ ದ್ಯೋತಕವಾಗಿದ್ದ, ಮಾತೃಆರಾಧನೆಯ ಕುರಿತಾದ ಯಕ್ಷ ಯಕ್ಷಿಣಿಯರ ಆರಾಧನೆಗಳು ಭಾರತದಲ್ಲಿ ಆ ಕಾಲದಲ್ಲಿ ಬಹಳವಾಗಿ ಪ್ರಚಲಿತವಿದ್ದ ಕಾರಣ ತಮ್ಮ ಮತಗಳ ಬಗ್ಗೆ ಜನರನ್ನು ಆಕರ್ಷಿಸಲು ಯಕ್ಷ ಯಕ್ಷಿಣಿಯರನ್ನು ಅವರ ಧರ್ಮದಲ್ಲಿ ಅತೀಂದ್ರಿಯ ಶಕ್ತಿಗಳನ್ನಾಗಿ ಅಳವಡಿಸಿಕೊಂಡು ಮುಖ್ಯವಾಗಿ ಬುದ್ಧನಿಗೂ, ತೀರ್ಥಂಕರರಿಗೆ ರಕ್ಷಣಾ ಕಾರ್ಯಕ್ಕಾಗಿ ಸೇವಕರನ್ನಾಗಿ ಇಟ್ಟುಕೊಂಡರೂ, ಧರ್ಮವನ್ನು ಬದಲಾಯಿಸಿ ಜನಸಾಮಾನ್ಯರೂ, ಆದಿವಾಸಿಗಳೂ ತಮಗೆ ಬಹು ಪ್ರಾಚೀನದಿಂದಲೇ ಕೃಷಿ, ಸಂತಾನ ಇತ್ಯಾದಿಗಳಿಗೆ ಅನುಗ್ರಹ ಶಕ್ತಿಗಳೆಂದು ಮೊದಲೇ ನಂಬಲ್ಪಟ್ಟಿದ್ದ ಯಕ್ಷ ಯಕ್ಷಿಣಿಯರಿಗೂ ಬೌದ್ಧ ಹಾಗೂ ಜೈನರಲ್ಲಿ ದೇವಾಲಯಗಳನ್ನು ಕಟ್ಟಿದರೆಂದು ತೋರುತ್ತದೆ. ಹಿಂದೂಗಳಲ್ಲಿ ಯಕ್ಷರು ಸಕಲ ಲೋಕದ ಸಂಪತ್ತಿನ ಅಧಿಪತಿಯಾದ, ಯಕ್ಷರಾಜ ಕುಬೇರನ ಸೇವಕರು. ಮನುಸ್ಮೃತಿ, ಮನುಭಾಷ್ಯಗಳಲ್ಲಿ ಕೃಷ್ಣ ಯಜುರ್ವೇದ, ಮಾನವ ಗೃಹ್ಯಸೂತ್ರ, ಬೈಜವಾಸ ಗೃಹ್ಯಸೂತ್ರ, ವೀರ ಮಿತ್ರೋದಯ ಸಂಸ್ಕಾರ ಮುಂತಾದ ಧರ್ಮಶಾಸ್ತ್ರಗ್ರಂಥಗಳಲ್ಲಿ ಯಕ್ಷರ ಉಲ್ಲೇಖಗಳಿವೆ. ಸ್ಕಂದಪುರಾಣದಲ್ಲಿ ತೀರ್ಥಮಾಹಾತ್ಮ್ಯಗಳನ್ನು ಹೇಳುವ ಸಂದರ್ಭದಲ್ಲಿ ಕಾಶಿಖಂಡದಲ್ಲಿ, ವಾರಣಾಸಿಯಲ್ಲಿ 'ಯಕ್ಷ' ಎಂಬುದನ್ನು 56 ವಿನಾಯಕರಲ್ಲಿ ಹೇಳಿದೆ. ಈ ದೇವಸ್ಥಾನದಲ್ಲಿ ಯಕ್ಷವಿನಾಯಕ, ಯಕ್ಷ ಗಣೇಶ, ಯಕ್ಷವಿಘ್ನೇಶ ಇತ್ಯಾದಿ ಯಕ್ಷರು ಢುಂಡೀರಾಜ ಅಥವಾ ಢುಂಡೀ ವಿನಾಯಕನನ್ನು ಸುತ್ತುವರೆದು ಏಳು ಕೇಂದ್ರೀಕೃತ ವೃತ್ತಗಳಲ್ಲಿ ಎಂಟು ಪ್ರಧಾನ ಹಂತಗಳಲ್ಲಿ ಸ್ಥಾನವನ್ನು ಪಡೆದಿರುತ್ತಾರೆ. ಈ ಕ್ಷೇತ್ರವು ಕಾಶಿ ನಗರದ ಹೃದಯ ಭಾಗದಲ್ಲಿದ್ದು ಗಂಗಾನದಿಯ ಹತ್ತಿರದಲ್ಲಿದೆ.

ವೇದಗಳ ಕಾಲದಲ್ಲಿ ಯಕ್ಷರು ಒಂದು ರಹಸ್ಯಾತ್ಮಕ ಜನಾಂಗವಾಗಿಯೂ ಅವರುಗಳ ಮುಖ್ಯಸ್ಥನಾದ ಕುಬೇರನು ಸರ್ವಲೋಕದ ಸಂಪತ್ತನ್ನು ಕಾಯುವ ಯಕ್ಷ ರಾಜ. ಈ ಕುಬೇರನು ಹಿಮಾಲಯದ ರಾಜಧಾನಿಯಾದ 'ಅಲಕಾ' ಪಟ್ಟಣದ ಒಡೆಯ. ಯಕ್ಷರನ್ನು ಗುಹ್ಯಕ(ರಹಸ್ಯ ಜನರು) ಎಂದು ಕರೆಯುತ್ತಿದ್ದರು. ಇವರು ಹೆಚ್ಚಿನ ಪಾಲು ರಾಕ್ಷಸ ಹಾಗೂ ನಾಗರುಗಳ ಸಹಚರರಾಗಿರುತ್ತಿದ್ದರು. ಪುರಾಣಗಳಲ್ಲಿ ಯಕ್ಷ ಯಕ್ಷಿಣಿಯರು ಕೆಲವು ಬಾರಿ ಗಂಧರ್ವರೊಂದಿಗೂ ಸ್ನೇಹದಿಂದ ಇದ್ದವರೆಂದೂ ಅವರುಗಳು ಕಶ್ಯಪ ಋಷಿ ಹಾಗೂ ಕಶೆಯ ಮಕ್ಕಳೆಂದೂ ಹೇಳಿದೆ. ಅನೇಕ ಪುರಾಣಕಥೆಗಳಲ್ಲಿ ಯಕ್ಷರು ಮಾನವರಿಗೆ ತೊಂದರೆ ಕೊಡುತ್ತಿದ್ದವರಾಗಿಯೂ ರಾಕ್ಷಸರ ಸ್ನೇಹಿತರೆಂದೂ, ಅವರೊಂದಿಗೆ ಅನೇಕ ದುಷ್ಕೃತ್ಯಗಳನ್ನು ಮಾಡುತ್ತಿದ್ದರೆಂದೂ, ಯಕ್ಷರು ಮಾನವರ ವೈರಿಗಳೆಂದೂ ಅವರಿಗೆ ಅತೀಂದ್ರಿಯ ಶಕ್ತಿಗಳು ಐಂದ್ರಜಾಲಿಕ ವಿದ್ಯೆಗಳು ಇದ್ದವರೆಂದೂ ನಂಬಿಕೆ ಇದ್ದರೂ ಈ ಮಂತ್ರ ಶಕ್ತಿಗಳಿಲ್ಲದೆ ಇದ್ದ ಮಾನವರಿಂದಲೂ

Copyright protected article. Infringement of copyright is punishable offence. No part of this publication is allowed for copy or reproduction of material.

Copyright protected article. Infringement of copyright is punishable offence. No part of this publication is allowed for copy or reproduction of material.

ಯಕ್ಷರು ಸೋಲಿಸಲ್ಪಡುತ್ತಿದ್ದರು. ಹೀಗೆ, ಯಕ್ಷರಲ್ಲಿ ಮಾನವರನ್ನು ಹಿಂಸಿಸುವ ಪಂಗಡವೂ ಇತ್ತು ಹಾಗೆಯೇ ಮಾನವರಿಗೆ ಸಹಕಾರವನ್ನಿತ್ತು ಸಹಾಯ ಮಾಡುವ ಯಕ್ಷರೂ ಇದ್ದರು. ಮಹಾಭಾರತದಲ್ಲಿ ಯಕ್ಷನು ಪಾಂಡವರಿಗೆ ವನವಾಸದ ಸಂದರ್ಭದಲ್ಲಿ ಮೊದಲು ಪ್ರಶ್ನೆಗಳನ್ನು ಹಾಕಿ ಹಿಂಸಿಸಿದರೂ ಮತ್ತೆ ಅನುಗ್ರಹಿಸಿದ ವಿಷಯವೂ ಇದ್ದರೆ ಕಾಳಿದಾಸನ 'ಮೇಘದೂತ' ದಲ್ಲಿ ಶಾಪಗ್ರಸ್ತ ಯಕ್ಷನು ವಿರಹದಿಂದ ಬಸವಳಿದು ತನ್ನ ಯಕ್ಷಿಣಿಗೆ ಮೇಘನನ್ನೇ ದೂತನನ್ನಾಗಿ ಕಳುಹಿಸುವ ಸುಮನೋಹರ ಚಿತ್ರಣವೂ ಇದೆ. ಬೃಹತ್ಕಥಾ, ಕಥಾಸರಿತ್ಸಾಗರ ಇತ್ಯಾದಿಗಳಲ್ಲೂ ಯಕ್ಷ ಯಕ್ಷಿಣಿಯರು ಶಾಪದಿಂದ ಸಾಮಾನ್ಯ ಮಾನವರಾಗಿ ಬಾಳಿದ ಕಥೆಗಳಿವೆ.

ಭರತನು ತನ್ನ ನಾಟ್ಯಶಾಸ್ತ್ರದಲ್ಲಿ, ವಿಶ್ವಕರ್ಮನಿಂದ ನಾಟ್ಯಮಂಟಪವು ರಚಿತವಾದಾಗ 'ಮತ್ತವಾರಣಿ' (ವೇದಿಕೆಯ ಎರಡು ಕಡೆಗಳಲ್ಲೂ ಆಗಮನ ಹಾಗೂ ನಿರ್ಗಮನವಾಗುವ ಸ್ಥಳ) ಯನ್ನು ರಕ್ಷಿಸಲು ಬ್ರಹ್ಮನು
ಯಕ್ಷರು, ಭೂತರು, ಪಿಶಾಚರು, ಗುಹ್ಯಕರು ಮತ್ತು ಪನ್ನಗರನ್ನು ರಂಗಪೀಠದ ಕೆಳಗೆ ರಕ್ಷಣೆಗಾಗಿ ನಿಯೋಜಿಸಿದನು, ಎಂದು ಉಲ್ಲೇಖಿಸಿರುವುದಲ್ಲದೆ, ರಂಗಪೂಜೆಯಾಗುವಾಗ ಯಕ್ಷರನ್ನು ಪ್ರತಿಷ್ಠಾಪಿಸಿ ಪೂಜಿಸಬೇಕೆಂದು ಹೇಳಿದ್ದಾನೆ.

ಯಕ್ಷಿಯರು ಬಹಳ ಸುಂದರವಾದ, ಮೈ ತುಂಬಿದ ಅವಯವಗಳನ್ನುಳ್ಳವರು, ಬಲಗೈಯಲ್ಲಿ ಚೌರಿಯನ್ನು ಹಿಡಿದಿರುತ್ತಾರೆ ಎಂದು ಶಿಲ್ಪಗಳಲ್ಲಿ ಚಿತ್ರಿಸಲಾಗಿದೆ. ತಂತ್ರಶಾಸ್ತ್ರಗಳಲ್ಲಿ 36 ಯಕ್ಷಿಣಿಯರನ್ನು ಕುರಿತ ಮಂತ್ರಗಳೂ, ಧಾರ್ಮಿಕ ಆಚರಣೆಗಳನ್ನು ಆಚರಿಸುವ ವಿಧಿಗಳು ಇತ್ಯಾದಿಗಳನ್ನು ವಿವರಿಸಿದೆ. ಬೇರೆ ಬೇರೆ ತಂತ್ರಶಾಸ್ತ್ರಗಳಲ್ಲಿ ಯಕ್ಷಿಣಿಯರ ಸಂಖ್ಯೆಗಳಲ್ಲೂ, ಹೆಸರುಗಳಲ್ಲೂ ಸ್ವಲ್ಪ ಸ್ವಲ್ಪ ವ್ಯತ್ಯಾಸಗಳಲ್ಲಿ ಉಲ್ಲೇಖಿಸಲಾಗಿವೆ. ಯಕ್ಷರಂತೆಯೇ ಯಕ್ಷಿಣಿಯರಲ್ಲಿಯೂ ಪರೋಪಕಾರಿಯಾದವರೂ, ಹಾಗೆಯೇ ದುಷ್ಕೃತ್ಯ ಮಾಡುವವರೂ ಇದ್ದಾರೆಂಬ ನಂಬುಗೆಗಳು ಭಾರತೀಯ ಜನಪದರಲ್ಲಿ ಮಾತ್ರವಲ್ಲದೆ ಈಜಿಪ್ಟ್, ಪರ್ಶಿಯಾ, ಗ್ರೀಕ್, ಬೃಹದ್ಭಾರತದ ಹಲವೆಡೆಗಳು ಇತ್ಯಾದಿ ಪ್ರಾಚೀನ ಸಂಸ್ಕೃತಿಗಳು ಇದ್ದ ಭೂಭಾಗಗಳಲ್ಲೆಲ್ಲ ಈಗಲೂ ಇವೆ. ಅದೇ ರೀತಿಯಲ್ಲಿ ಯಕ್ಷಿಣಿಯರು (ಜಕ್ಕಿಣಿಯರು)ಭಾರತದಲ್ಲಿ ಪೌರಾಣಿಕ - ಸ್ತ್ರೀ ದೇವತೆಗಳಾಗಿ ಹಿಂದೂ, ಬೌದ್ಧ ಹಾಗೂ ಜೈನ ಪುರಾಣಗಳಲ್ಲಿದ್ದು ಅಶೋಕ ಹಾಗೂ ಸಾಲವೃಕ್ಷಗಳ ಜೊತೆಗೆ ಮತ್ತು ನೀರಿನೊಂದಿಗೆ ಸಂಬಂಧವನ್ನು ಹೊಂದಿರುವಂತೆಯೇ ಪ್ರಕೃತಿ ಆರಾಧಕ ದೈವಗಳಾಗಿಯೂ , ಅತಿಮಾನುಷ ಶಕ್ತಿಯನ್ನು ಹೊಂದಿದ ವೃಕ್ಷದೇವತೆಗಳಾಗಿಯೂ ಅವರನ್ನು ಆರಾಧಿಸುವ ಜನಾಂಗಗಳು ಪ್ರಪಂಚದ ಅನೇಕ ಪ್ರಾಚೀನ ಸಂಸ್ಕೃತಿಗಳಲ್ಲಿವೆ. ಈ ಅತಿಮಾನುಷ ಶಕ್ತಿಗಳಲ್ಲಿ ಹೆಚ್ಚಿನವು ಯೌವನಭರಿತ ಸ್ತ್ರೀ ರೂಪದವುಗಳಾಗಿದ್ದು, ಅವುಗಳು ಭಾರತದ ಯಕ್ಷಿಣಿಯರಂತೆಯೆ ಪ್ರಜನನಶಕ್ತಿಕಾರಕಗಳಾಗಿಯೂ, ಕಿನ್ನರಿ, ಯಕ್ಷಿಣಿ, ಭೂತಗಳು, ಅಪ್ಸರೆಯರು ಮೋಹಿನಿಯರಾಗಿಯೂ ವೃಕ್ಷದೇವತೆಗಳಾಗಿಯೂ,
ಸ್ಥಾನಮಾನಗಳನ್ನು ಹೊಂದಿ ಈ ಜನಾಂಗಗಳಲ್ಲಿ ನೀರು ಹಾಗೂ ವೃಕ್ಷದೇವತೆಗಳಾಗಿಯೂ ಮಾತೃದೇವತೆಗಳಾಗಿಯೂ ಆರಾಧಿಸಲ್ಪಡುತ್ತವೆ. ......"the importance of the Yakshas in what has often been vaguely reffed to as a life cult, to suggest that this life cult with which is also connected to the worship of the great mother, may have been the primitive religion of India, and to show that the plant style is actually nothing more or less than the iconography of the water cosmology. (A belief in the origin of life in the waters was common to many ancient culture, 'ಎಂಬ ಆನಂದ ಕುಮಾರಸ್ವಾಮಿಯವರ ಮಾತುಗಳು ಗಮನೀಯ. ಅಂತಹ ಪ್ರಾಚೀನ ನಾಗರಿಕತೆಗಳ ಅತಿಮಾನುಷ ಶಕ್ತಿಗಳಲ್ಲಿ ಕೆಲವನ್ನು ಈ ಕೆಳಗೆ ನೀಡಲಾಗಿದೆ.

1..ಗ್ರೀಕ್ ಪುರಾಣದ ಡ್ರೈಯಾಡ್ (dryad) ಹಾಗೂ ಹಮಾಡ್ರೈಯಾಡ್ (Hamadryad) ಗಳು. ಮೆಲೀ((Meliae the nymph of Fraxinus Cash tree), ಸಟೈರ್ (Satyr). ಗ್ರೀಕರಲ್ಲಿ ಸಿಕ್ಕಿನಿ ಎಂಬ ಹೆಸರಿನ ಯಕ್ಷಿಣಿ ಇದ್ದು ಇದು ನಮ್ಮ ದೇಶದ ದುಷ್ಟ ಜಕಿಣಿಯರನ್ನು ಹೆಸರಿನಲ್ಲೂ ಗುಣದಲ್ಲಿಯೂ ಹೋಲುತ್ತದೆ.
2..ಈಜಿಪ್ಟಿನ ಬೆಸ್, ಹೋರಸ್, ಹಾತೋರ್ (Hathor). ಹಾತೋರ್ ದೇವತೆಯು ಪ್ರಾಚೀನ ಈಜಿಪ್ಟಿನಲ್ಲಿ 'ಲೇಡಿ ಆಫ್ ಸೈಕಮೋರ್' ಎಂದೂ ಕರೆಯಲ್ಪಡುತ್ತಿದ್ದಳು. ಇವಲ್ಲದೆ ಈಜಿಪ್ಟಿನಲ್ಲಿ ಸಣ್ಣ ಪುಟ್ಟ ಮರಗಳಿಗೂ ದೇವತೆಗಳು ಬಹಳವಿದ್ದು ಭಾರತದ ಜನಪದ ದೇವತೆಗಳನ್ನು ನೆನಪಿಗೆ ತರುತ್ತದೆ ಹಾಗೂ ಯಕ್ಷ ಯಕ್ಷಿಣಿಯರ ಬಹು ಸಂಖ್ಯೆಗಳಿಗೂ ಹೋಲುತ್ತವೆ.
3..ಜಪಾನಿನ ಅಮೆ - ನೊ-ಉಜ್ಜುಮೆ, ಕೊಡಮ,ಇತ್ಯಾದಿಗಳೂ ಕುರುಜೋ್ಮೆಯೂ ಚೆರ್ರಿ ಹಣ್ಣು ವೃಕ್ಷದ ಭೂತವಾಗಿತ್ತು.
4..ಬಾಲ್ಟಿಕ್ ಪುರಾಣದಲ್ಲಿ ಲೌಮಾ,
5.. ಥಾಯ್ ಜನಪದದಲ್ಲಿ ನಂಗ್ - ಟಾ-ಖಿಯನ್, ನಂಗ್ ಟಾನಿ,
6..ಚೀನೀಯರ ಪುರಾಣಗಳಲ್ಲಿ ಪೈ - ಫಾಂಗ್,
7..ಮಡಗಾಸ್ಕರ್ ನಲ್ಲಿ ರಕಪಿಲಾ,
8..ಆಫ್ರಿಕಾದಲ್ಲಿ ಲ್'ರೋಕೊ (ಸಾಗುವಾನಿ ಮರ),

Copyright protected article. Infringement of copyright is punishable offence. No part of this publication is allowed for copy or reproduction of material.

Copyright protected article. Infringement of copyright is punishable offence. No part of this publication is allowed for copy or reproduction of material.

9..ಅರೇಬಿಯಾದಲ್ಲಿ ಅಲ್ - ಲಾತ್,

10.. ಸೆಲ್ಟಿಕ್ ನಲ್ಲಿ ಸಿಲ್ವನುಸ್ -ಇದು ಪುರುಷ ದೇವತೆ.

11..ನಾರ್ಡಿಕ್ ಜನಪದದಲ್ಲಿ Yggdrasil,

12..ಸುಮೇರಿಯಾದಲ್ಲಿ ಅನುನಿಟು,

13..ಜರ್ಮನಿಯಲ್ಲಿ ಹೌರಿ, ಇಸಾಕ್ಕಿ

14..ರೋಮನ್ ನಲ್ಲಿ ಡಾಫ್□ನೆ.

ಇತ್ಯಾದಿಯಾಗಿ

ಪ್ರಪಂಚದ ಭೂಭಾಗಗಳಲ್ಲೆಲ್ಲ ಈಗಲೂ ಅದೇ ರೀತಿಯ ನಂಬಿಕೆಗಳು ಇವೆ. ಭಾರತದಲ್ಲಿಯಂತೂ ಎಲ್ಲ ರಾಜ್ಯಗಳಲ್ಲಿಯೂ ಯಕ್ಷ ಯಕ್ಷಿಣಿಯರು ಆರಾಧಿಸಲ್ಪಡುತ್ತಿದ್ದಾರೆ. ದುಷ್ಕೃತ್ಯಕಾರಕ ಜಕ್ಕಿಣಿಯರು (=ಯಕ್ಷಿಣಿಯರು) ಭೂಮಿಯಡಿಯ ಸಂಪತ್ತನ್ನು ರಕ್ಷಿಸುವವರೂ ಪುರುಷರನ್ನು ಮರಳು ಮಾಡಿ ರಕ್ತ ಹೀರಿ, ಹಿಂಸಿಸಿ ಕೊಲ್ಲುವ ಅತಿಮಾನುಷಿಯರಾಗಿರುತ್ತಾರೆಂದೂ ಜನಪದರಲ್ಲಿ, ಆದಿವಾಸಿಗಳಲ್ಲಿ ನಂಬುಗೆಗಳಿವೆ.

ಭಾರತದ ಹಿಂದೂ, ಬೌದ್ಧ ಹಾಗೂ ಜೈನ ಮಾತೃದೇವತೆಗಳು—

ಹುಟ್ಟು, ಫಲವಂತಿಕೆ, ಲೈಂಗಿಕ ಕೂಟ ಮತ್ತು ಸಸ್ಯಗಳು, ಪ್ರಾಣಿ ಹಾಗೂ ಮನುಷ್ಯರ ಹುಟ್ಟು ಹಾಗೂ ಬೆಳವಣಿಗೆಯ ಇಡೀ ಸಂಕೀರ್ಣ ದೇವತೆಯೇ ಮಾತೃದೇವತೆ. ಶಿಲಾಯುಗದಲ್ಲಿದ್ದ ಏಕದೇವ ವಾದದಲ್ಲಿ ಸರ್ವ ಜೀವ ಫಲಸಮೃದ್ಧಿ ಕಾರಕಗಳಿಗೆ ದೈವತ್ವವನ್ನಿತ್ತು, ಸ್ತ್ರೀ ರೂಪದಲ್ಲಿ ನೋಡಿ, ಆಕೆಗೇ ಎಲ್ಲ ಪೂಜೆಗಳೂ ಸಲ್ಲುತ್ತಿದ್ದವೆಂದು ವಿದ್ವಾಂಸರು ಪ್ರತಿಪಾದಿಸುತ್ತಾರೆ. ಏಕೈಕ ದೇವತೆಯಾಗಿದ್ದ ಈ ಮಾತೃಪೂಜೆಯು ದುರ್ಗಾ ಆರಾಧನೆಯಾಗಿ ಮಾರ್ಪಾಡಾಗಿ, ತುಂಬಾ ಪುರಾತನವೂ ವ್ಯಾಪಕವೂ ಆಗಿ, ಜಗವ್ಯಾಪಿಯಾಗಿದೆ. ಇದನ್ನು ವೈದಿಕ ಧರ್ಮದಲ್ಲಿ ಸಮನ್ವಯಗೊಳಿಸುವ ಪ್ರಯತ್ನಗಳೂ ಬಹಳ ಪ್ರಾಚೀನದಿಂದಲೇ ನಡೆದಿದ್ದು ಯಶಸ್ವಿಯಾಗಿ ಭಾರತದಲ್ಲಿ ಇದು ಒಂದೊಂದು ಪ್ರಾಂತ್ಯದಲ್ಲಿ ಒಂದೊಂದು ರೂಪವನ್ನು ತಳೆದಿದೆ. ಈ ಪೂಜೆಗಳಲ್ಲಿ ವೈದಿಕ ಹಾಗೂ ತಾಂತ್ರಿಕ ಆಚರಣೆಗಳು ಬೆರಕೆಯಾಗಿವೆ. ವೇದವಾಙ್ಮಯದಲ್ಲಿಯೇ ಇಂತಹ ಸೂಚನೆಗಳು ಸಾಕಷ್ಟು ದೊರೆಯುತ್ತವಾದರೂ ಮಾರ್ಕಂಡೇಯ ಮತ್ತು ಬ್ರಹ್ಮಾಂಡಪುರಾಣಗಳಲ್ಲಿ ಇದರ ವ್ಯವಸ್ಥಿತವೂ ಸ್ಪಷ್ಟವೂ ಆದ ವಿಧಾನಗಳು ದೊರೆಯುತ್ತವೆ. ಮಾರ್ಕಂಡೇಯ ಪುರಾಣವು ಅತಿ ಪ್ರಾಚೀನದ್ದಾದರೂ ಬೇರೆ ಬೇರೆ ಹಂತಗಳಲ್ಲಿ 8ನೆಯ ಶತಮಾನದವರೆಗೂ ಈ ಪುರಾಣವು ವಿಷಯಗಳನ್ನು ಕೂಡಿಸಿಕೊಂಡಿದೆ. ಬ್ರಹ್ಮಾಂಡಪುರಾಣವು ಸುಮಾರು 5 ನೆಯ ಶತಮಾನದಲ್ಲಿ ರಚಿತವಾಯಿತು.

ಜನಪದರು ಮಾತೃದೇವತಾರಾಧನೆಯನ್ನು ದೇವಿಯರು ಉರಿಮಾರಿ, ಬಿಸಿಲುಮಾರಿ, ದಂಡಿಮಾರಿ, ಪ್ಲೇಗ್ ಮಾರಿ ಇತ್ಯಾದಿ ರೂಪಗಳಲ್ಲಿ ಮಾಡುತ್ತಾರೆ. ಇಂತಹ ಮಾರಿಯರ ನೆಲೆ ಊರ ಗಡಿ ಭಾಗದಲ್ಲಿರುತ್ತದೆ. ಮಾರಿಕಾಂಬೆಯನ್ನು ಶಿರಸಿಯಮ್ಮ, ಶೀನಮ್ಮ, ಚೌಡಿ, ದುರ್ಗಮ್ಮ, ಮಾರಿಯಮ್ಮ ಮುಂತಾದ ಹೆಸರುಗಳಲ್ಲಿಯೂ ಕರೆಯುತ್ತಾರೆ. ಮಾರಿಯಮ್ಮನ ವಿವಿಧ ರೂಪಗಳ ಹಾಗೂ ಹೆಸರುಗಳ ಆರಾಧನೆಯು ಭಾರತದಾದ್ಯಂತ ನಡೆಯುತ್ತವೆ. ಜೈನರಲ್ಲಿ ಜ್ವಾಲಾಮಾಲಿನೀ, ಬೌದ್ಧರಲ್ಲಿ ತಾರಾ, ಹಿಂದೂ ಮತದಲ್ಲಿ ಛಿನ್ನಮಸ್ತಾ, ವಾರಾಹೀ, ಹೇರಂಬ ಮುಂತಾದ ರೂಪಗಳಲ್ಲಿ ಹೋಗಿ ವ್ಯಾಪಿಸಿದೆ. ಪೂರ್ವಭಾರತದಲ್ಲಿ ಮಾನಸಾ, ತಾರಿಣೀ, ಕಾಲೀ; ಪಶ್ಚಿಮಭಾರತದಲ್ಲಿ ಅಂಬಾ, ವಿಂಧ್ಯವಾಸಿನೀ ; ಉತ್ತರಭಾರತದಲ್ಲಿ ಸಂತೋಷೀ, ಲಜ್ಜಾ; ದಕ್ಷಿಣಭಾರತದಲ್ಲಿ ಶಾರದಾ, ಕಾಮಾಕ್ಷೀ, ಮೀನಾಕ್ಷಿ, ಚಾಮುಂಡೀ, ಮಾರಿ ಮುಂತಾದ ಶಿಷ್ಟ - ಧರ್ಮ ರೂಪಗಳಲ್ಲಿ ಈ ಪೂಜೆಯು ಪ್ರಸಿದ್ಧವಾಗಿದೆ. ಪೌರಾಣಿಕವಾಗಿ ರೂಢಿಸಿರುವ ಅದೆಷ್ಟೋ ಬೇರೆ ಬೇರೆ ದೇವಿಯರನ್ನು

ಜನಸಾಮಾನ್ಯರು ಪೂಜಿಸುತ್ತಾರೆ. ಶ್ರೀವಿದ್ಯಾತಂತ್ರದ ಕಾದಿಮಾರ್ಗವೊಂದರಲ್ಲಿಯೇ ಭರತಖಂಡದಲ್ಲಿ ಐವತ್ತು ಶಕ್ತಿಪೀಠಗಳೂ ನೂರಾರು ದೇವೀತೀರ್ಥಕ್ಷೇತ್ರಗಳೂ ಇವೆ. ಶಾಕ್ತಾಗಮದಲ್ಲಿ ಆಪೋದೇವತೆಯೂ ಆದ ಮನಸಾಳ ಆರಾಧನೆಯು ದೇವಧ್ವನಿ ಎಂಬ ಹಬ್ಬದಲ್ಲಿ ಉಳಿದುಬಂದಿದೆ. ಇದು ಮಂಚಮ್ಮನೆಂಬ ಜಾನಪದ ದೇವತೆಯ ಶಿಷ್ಟರೂಪ. ಅದನ್ನು ಬಂಗಾಳ, ಅಸ್ಸಾಂ, ಮಿಥಿಲಾ ಇತ್ಯಾದಿ ನೈಋತ್ಯ ಪ್ರಾಂತ್ಯಗಳಲ್ಲಿ ಪೂಜಿಸುತ್ತಾರೆ. ಇದರಲ್ಲಿ ಸ್ತ್ರೀಭಕ್ತೆಯರು ದೇವಿಯ ಆವೇಶಕ್ಕೆ ಸಾಮೂಹಿಕವಾಗಿ ಒಳಗಾಗುತ್ತಾರೆ. ಆಗ ಗಂಡಸರು ಮನಸಾಮಂಗಳ (=ಚಂಡೀಮಂಗಳ, ಮಂಗಳಗೀತಿ =ನಮನಗೀತಿ) ಗಳನ್ನು ಹಾಡಿ ಪುಜಿಸುತ್ತಾರೆ. ಇವರಿಗೆ ಓಝಾಪಾಲಿಗಳೆಂದು ಹೆಸರು. ಇದು ಇಡೀ ಪೂರ್ವಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಚೆನ್ನಾಗಿ ಪ್ರಚಾರದಲ್ಲಿದೆ. ಓಝಾ ಎಂದರೆ ಮುಖಂಡರು ಎಂದೂ ಪಾಲಿಗಳೆಂದರೆ ಅವರ ಸಹಚರರೆಂದೂ ಅರ್ಥ. ಇವರು ಕಥೆಗಳನ್ನು ಹಾಡುತ್ತ, ಅದಕ್ಕೆ ತಕ್ಕ ಸಂಭಾಷಣೆಗಳನ್ನೂ ನಡೆಸುತ್ತ ನರ್ತಿಸುತ್ತಾರೆ. ಮಹಾಭಾರತ, ರಾಮಾಯಣದ ಕಥೆಗಳೊಂದಿಗೆ ಪುರಾಣ ಕಥೆಗಳನ್ನೂ ಹಾಡುತ್ತ ನರ್ತಿಸುತ್ತಾರೆ. ತಾಳವನ್ನು ಮಾತ್ರ ವಾದ್ಯವಾಗಿ ಉಪಯೋಗಿಸುವ ಓಝಾಪಾಲಿಗಳು ಕೆಲವು ಹಸ್ತಗಳನ್ನೂ, ಭ್ರಮರಿ, ಉತ್ಪ್ಲವನಗಳನ್ನೂ, ಕೆಲವು ಸ್ಥಾನಕಗಳನ್ನು

Copyright protected article. Infringement of copyright is punishable offence. No part of this publication is allowed for copy or reproduction of material.

Copyright protected article. Infringement of copyright is punishable offence. No part of this publication is allowed for copy or reproduction of material.

ಪ್ರಯೋಗದಲ್ಲಿಟ್ಟುಕೊಂಡಿದ್ದಾರೆ. ಶಾಸ್ತ್ರೀಯವೆಂದು ಕರೆಯಬಹುದಾದ ರಾಗಗಳಲ್ಲಿ ಹಾಡುಗಳನ್ನು ಹಾಡುತ್ತಾರೆ. ಬೆಳ್ಳಿಯ ಕೈಕಡಗ, ಉಂಗುರ ಹಾಗೂ ಗೆಜ್ಜೆಗಳನ್ನು ಧರಿಸುತ್ತಾರೆ. ಪಶ್ಚಿಮಭಾರತದಲ್ಲಿಯೂ ಮಾತೃದೇವತೆ (ದೇವೀ ಆರಾಧನೆ) ಯ ಅಂಗವಾಗಿ ಇಂತಹ ಸಾಮೂಹಿಕಗಾಯನಗಳನ್ನು, ಭಿಲ್ಲರ ಬುಡಕಟ್ಟುಗಳಲ್ಲಿಯೂ ಮಹಾರಾಷ್ಟ್ರದ ಅಂಬಾಭವಾನಿ ಗೊಂದಲಗಳಲ್ಲಿಯೂ ನೋಡಬಹುದು. ಗೊಂದಲ, ಗೋಂಧಳಿ, ಗೊಂದಲಿ ಇತ್ಯಾದಿ ಕರೆಯಲ್ಪಡುವ ಈ ಪಂಗಡದವರನ್ನು ಜಮದಗ್ನಿ ಹಾಗೂ ಆತನ ಪತ್ನಿ ರೇಣುಕಾದೇವಿಯರು ಸ್ಥಾಪಿಸಿದರೆಂದು ಪ್ರತೀತಿಯಿದೆ.

ಸಾಲಭಂಜಿಕೆ ಅಥವಾ ಮದನಿಕೆಯರು—

ರಾಜಾ ವಿಕ್ರಮಾದಿತ್ಯನ ಸಿಂಹಾಸನದ ಎರಡು ಬದಿಯ ಮೆಟ್ಟಿಲುಗಳಲ್ಲಿ ಸಾಲಭಂಜಿಕೆಯರ ಬೊಂಬೆಗಳಿದ್ದು ವಿಕ್ರಮಾದಿತ್ಯ ರಾಜನು ಸಿಂಹಾಸನಾರೋಹಣವನ್ನು ಮಾಡಬೇಕಾದರೆ ಸಾಲಭಂಜಿಕಾ ಬೊಂಬೆಗಳು ಹೇಳುವ ಕಥೆಗಳನ್ನು ಕೇಳಿ, ಆ ಕಥೆಗಳಲ್ಲಿ ಬರುವ ರಾಜರಷ್ಟೇ ಯೋಗ್ಯತೆಯು ತನ್ನಲ್ಲಿ ಇದೆಯೇ ಎಂದು ವಿಕ್ರಮಾದಿತ್ಯ ಮಹಾರಾಜನು ಪರೀಕ್ಷಿಸಿಕೊಳ್ಳಬೇಕಾಗಿತ್ತು - ಎಂಬ ಕಥೆಯಿಂದ ಸಾಲಭಂಜಿಕೆಯರಿಗೆ ಇದ್ದ ಪ್ರಾಮುಖ್ಯತೆಯ ಮಟ್ಟದ ಅರಿವಾಗುತ್ತದೆ.
ಬಹಳ ಪ್ರಾಚೀನಕಾಲದಿಂದಲೇ ಈ ಯಕ್ಷಿಯರ ಶಿಲ್ಪಗಳು ಭಾರತದಲ್ಲಿದ್ದು ಅವುಗಳ ನಗ್ನತೆ, ನಗುಮುಖ, ವೃಕ್ಷದ ರೆಂಬೆಯನ್ನು ಹಿಡಿದುಕೊಂಡಿರುವುದು, ಶೃಂಗಾರಭಂಗಿಯಲ್ಲಿ ಹಾಗೂ ತ್ರಿಭಂಗಿಯಲ್ಲಿ ನಿಂತ ರೀತಿಯ ಕಾರಣದಿಂದಲೂ, ಅನೇಕ ಸಂಶೋಧಕರು ವೃಕ್ಷದ ಅಡಿಯಲ್ಲಿ ನಿಂತು ಅದರ ರೆಂಬೆಯನ್ನು ಹಿಡಿದು ನಿಂತ ಈ ಸುಂದರ ಯುವ ಯಕ್ಷಿಣಿಯರನ್ನು ಪ್ರಾಚೀನದ ವೃಕ್ಷದೇವತೆಗಳೆಂದೂ ಇವುಗಳು ಸಾಲ (ಶಾಲ) ಭಂಜಿಕೆಯರೆಂದೂ ಹೇಳುತ್ತಾರೆ. ಸಾಲಭಂಜಿಕೆಯ ಶಿಲ್ಪಗಳ ಕಲ್ಪನೆಯ ಮೂಲವು ಪ್ರಾಚೀನರ ಒಂದು ಪರಿಶುದ್ಧವಾದ ಕನ್ನಿಕೆಯನ್ನು ಕುರಿತಾಗಿ ಸಾಂಕೇತಿಕತೆಯನ್ನೋ ಅಥವಾ ಅಶೋಕವೃಕ್ಷದ ಜೊತೆಗೆ ಬಂದ ಧಾರ್ಮಿಕ ಆಚರಣೆಯಾದ 'ದೋಹದ' (ವೃಕ್ಷಾಯುರ್ವೇದದಲ್ಲಿ ಹೇಳಿರುವಂತೆ ಗಿಡ ಲತೆಗಳು ಪುಷ್ಪಿತವಾಗಲು ಮಾಡುವ ಸಂಸ್ಕಾರ)ದ ಸಂಸ್ಕಾರದಲ್ಲಿ ಪರಿಶುದ್ಧವಾದ ಕನ್ನಿಕೆಯೊಬ್ಬಳ ಸ್ಪರ್ಶದಿಂದ ಸಸ್ಯಗಳೂ ವೃಕ್ಷಗಳೂ ಫಲವನ್ನು ನೀಡುತ್ತದೆ ಎಂದು ನಂಬಿ, ವಿಧಿಗಳನ್ನು ಆಚರಿಸುತ್ತಿದ್ದರು. ಬುದ್ಧನ ಕಾಲದಲ್ಲಿ ಶ್ರಾವಸ್ತಿಯಲ್ಲಿ ಸಾಲವೃಕ್ಷದ ಹೂಗಳನ್ನು ಸಾಲಭಂಜಿಕೆಯರೆಂಬ ಪವಿತ್ರ ಸ್ತ್ರೀಯರು ಮರವನ್ನು ಹತ್ತಿ ಹೂವನ್ನು ಕೊಯ್ಯುವ ಉತ್ಸವವೇ ಇತ್ತೆಂದು ಡಾ. ವೊಗೆಲ್ ರವರು ಹೇಳುತ್ತಾರೆ. 'Dr. Vogel has recently shown that the word Salabhanjika, "she who plucks Sala flowers" was or at least became, a technical term denoting representation of female types standing under trees, and was also the name of a Sala - plucking festival in which women climbed the trees and plucked flowers.... "(AKC). ಈ ವಿಧಿಗಳು ಕಾಲಕ್ರಮೇಣದಲ್ಲಿ ಈ ಸಾಲಭಂಜಿಕೆಯರು ವೃಕ್ಷದೇವತೆಗಳೂ ಪ್ರಜನನ ದೇವತೆಗಳ ಸಂಕೇತಗಳಾಗುವ ಬದಲು ಅಲಂಕಾರಿಕ ಶಿಲ್ಪಗಳಾಗಿ, ಇವುಗಳು ಸಾಮಾನ್ಯವಾಗಿ ಅನೇಕ ಹಿಂದೂ ದೇವಾಲಯಗಳಲ್ಲಿ ಗರ್ಭಗೃಹಗಳ ಸುತ್ತ ಪ್ರದಕ್ಷಿಣೆ ಬರುವಲ್ಲಿ ಇರುತ್ತವೆ. ಆನಂತರದ ಕಾಲದಲ್ಲಿ ಅನೇಕ ದೇವಾಲಯಗಳ ವಾಸ್ತುಶಿಲ್ಪದಲ್ಲಿ ಅಲಂಕಾರಿಕ ಶಿಲ್ಪಗಳಾಗಿಯೇ ಈ ಶಿಲ್ಪಗಳನ್ನು ಉಪಯೋಗಿಸಲಾರಂಭಿಸಿ ಚಾಳುಕ್ಯ ಹಾಗೂ ಹೊಯ್ಸಳ ಶಿಲ್ಪದ ಮುಖ್ಯ ಶೈಲಿಯಾಯಿತು.

ವೃಕ್ಷದ ಪ್ರಜನನ ಶಕ್ತಿಯ ಬಗ್ಗೆ ಮಹಾಭಾರತದ ಕಥೆಯೊಂದನ್ನು ನೆನಪಿಸಿಕೊಳ್ಳಬಹುದು. ತಾಯಿ ಮತ್ತು ಮಗಳು - ವೃಕ್ಷದ ವರದಿಂದ ವಿಶ್ವಾಮಿತ್ರ ಹಾಗೂ ಜಮದಗ್ನಿಯನ್ನು ಮಕ್ಕಳಾಗಿ ಪಡೆದರು ಎಂದು ಈ ಕಥೆ ಹೇಳುತ್ತದೆ. 'A story is told in the Mahabharatha of a mother and daughter become the mother of Vishvamithra and Jamadagni on tree granting offspring to women. (AKC).

ಶಾಲಭಂಜಿಕಾ ಅಥವಾ ಮದನಿಕಾ ಶಿಲ್ಪಗಳು ಕರ್ಣಾಟಕದಲ್ಲಿ 12ನೇ ಶತಮಾನದ ಬೇಲೂರು, ಹಳೇಬೀಡು, ಸೋಮನಾಥಪುರದ ಹೊಯ್ಸಳ ಶೈಲಿಯ ಶಿಲ್ಪಗಳೂ, ಚಾಲುಕ್ಯರ ಕಾಲದ ಗುಲ್ಬರ್ಗ - ಬೀದರ್ ಮುಖ್ಯಹೆದ್ದಾರಿಯಲ್ಲಿರುವ ಹುಮ್ನಾಬಾದ್ ತಾಲ್ಲೂಕಿನ ಜಲಸಾಂಗ್ವಿಯಲ್ಲಿಯೂ ಕೆತ್ತಲ್ಪಟ್ಟಿವೆ. ಭೂಪಾಲದ ಸಾಂಚಿಸ್ತೂಪದಲ್ಲಿ ಒಂದನೇ ಶತಮಾನದಿಂದ 12ನೇ ಶತಮಾನದವರೆಗೂ ಸಾಲಭಂಜಿಕೆಯ ಶಿಲ್ಪಗಳು ಕೆತ್ತಲ್ಪಟ್ಟಿವೆ. ಅತ್ಯಂತ ಪ್ರಾಚೀನವಾದ ಶಾಲಭಂಜಿಕಾ ಶಿಲ್ಪವೆಂದರೆ ಕ್ರಿ. ಪೂ. 3ನೇ ಮತ್ತು 1ನೇ ಶತಮಾನದ 'ಶುಂಗ' ಸಾಮ್ರಾಜ್ಯ ಕಾಲದ ಪಾಟಲಿಪುತ್ರದ,ಮಥುರೆಯ ಸಮೀಪದಲ್ಲಿ ನಡೆದ ಉತ್ಖನನ ಕಾಲದಲ್ಲಿ ದೊರೆತ ಸಾಲಭಂಜಿಕೆಯ ಶಿಲ್ಪಗಳು. ಅವುಗಳ ವಸ್ತ್ರಗಳ ರೀತಿಯಿಂದ ಇಂಡೋ ಗ್ರೀಕರ ಹೆಲ್ಲೆನಿಸ್ಟಿಕ್ ಶಿಲ್ಪಗಳಿಂದ ಪ್ರಭಾವಿತಗೊಂಡಿವೆ ಎಂದೂ ಸಾಲಭಂಜಿಕೆಯರ ಮೇಲು ಹೊದಿಕೆ ವಸ್ತ್ರವು ಗ್ರೀಕರಿಂದ ಬಂದಿರಬಹುದು ಹಾಗೂ ಪ್ರಪಂಚಕ್ಕೇ ಮೊಟ್ಟಮೊದಲು ಮೇಲು ಹೊದಿಕೆ

Copyright protected article. Infringement of copyright is punishable offence. No part of this publication is allowed for copy or reproduction of material.

Copyright protected article. Infringement of copyright is punishable offence. No part of this publication is allowed for copy or reproduction of material.

(veil) ಗ್ರೀಕರಿಂದ ಬಂದದ್ದು ಎಂದು ಕೆಲವು ಪಾಶ್ಚಾತ್ಯ ಸಂಶೋಧಕರು ಹೇಳಿದರೂ, ವೇದಗಳ ಕಾಲದಲ್ಲಿಯೇ ಉಪನಯನದ ಕಾಲದಲ್ಲಿ ಸೊಂಟದ ಕೆಳಗೊಂದು ವಸ್ತ್ರ ಹಾಗೆಯೇ ಮೇಲೊಂದು ಉತ್ತರೀಯವಿರಲೇ ಬೇಕೆಂಬ ನಿಯಮವಿದ್ದ ಭಾರತದ ರೀತಿಯನ್ನೇ ಈ ಶಿಲ್ಪವು ಅನುಸರಿಸಿರುವುದೇ ಸತ್ಯವಾಗಿದೆ. Mauryan-sculpture IASPOINT https:// academy.gktoday.in >ನಲ್ಲಿ 'Yaksha worship was popular before and after the advent of Buddhism and it was well assimilated in Buddhism and Jainism. Thus, the concept of religious sculpture was predominant during the Mauryan Empire.' ಎಂದು ಹೇಳಿದರೆ ಗೂಗಲ್ ಶೋಧಗಂಗಾದಲ್ಲಿ 'Influence of Foreign countries of Mauryan Empire' ಲೇಖನದಲ್ಲಿ It is well-known fact that the first three Mauryan Emperors, Chandragupta, Bindusara and Ashoka maintained friendly relations with the Hellenic West, particularly with the court of the great Seleucid Kings who may be described as successors of Alexander, the Great and the Achaemenids of Iran as well.

This may indicate the source of extraneous influence, and an adaptation of Achaemenids models has been recognized in the imperial city of Pataliputra. But the Maurya era, excellent stone sculpture comes in to full being. The popular art in Maurya period is represented by images of Yakshas and Yakshinis. Yaksha and Yakshinis are the care takers of the Natural treasures. Yaksha also refer to one of the Exotic Tribes of Ancient India. ಎಂದು ಉಲ್ಲೇಖಿಸುವಲ್ಲಿ, ಹೆಲ್ಲಿನಿಸ್ಟಿಕ್ ಹಾಗೂ ಪರ್ಶಿಯಾದಲ್ಲಿ ಆಗಲೂ ಭಾರತೀಯ ಸಂಸ್ಕೃತಿಯದೇ ಪ್ರಭಾವವಿತ್ತು ಎಂದು ಸ್ಪಷ್ಟವಾಗುತ್ತದೆ.

ಸಾಲಭಂಜಿಕೆಯರ ಶಿಲ್ಪಗಳು, ಮರದ ರೆಂಬೆಯೊಂದನ್ನು ಹಿಡಿದು ಮರದಡಿಯಲ್ಲಿ ನಿಂತಿರುವಂತಿರುತ್ತದೆ. ಶಿಲಾಬಾಲಿಕಾ, ಮದನಿಕಾ ಇತ್ಯಾದಿ ನಾಮಗಳಲ್ಲಿ ಕರೆಯಲ್ಪಡುವ ಈ ಶಿಲ್ಪಗಳು ವಿವಿಧ ನೃತ್ಯ ಭಂಗಿಗಳಲ್ಲಿದ್ದು, ವಿವಿಧ ಸಂಗೀತವಾದ್ಯಗಳನ್ನು ನುಡಿಸುವ, ಕೈಯಲ್ಲಿ ದರ್ಪಣವನ್ನು ಹಿಡಿದ , ಹಾಗೂ ಶುಕವನ್ನು ಹಿಡಿದ, ಕೈಯಲ್ಲಿ ಉತ್ತರೀಯವನ್ನೋ ಚೌರಿಯನ್ನೋ ಹಿಡಿದಂತಹ ಸಾಲಭಂಜಿಕೆಯರ ಶಿಲ್ಪಗಳೂ ಇವೆ. ಬೇಲೂರಿನಲ್ಲಿ ದೇವಳದ ಹೊರ ಮೈಯಲ್ಲಿ ಒಂದು ಇಡೀ ಸಾಲಿನಲ್ಲಿ ಯಕ್ಷ ಯಕ್ಷಿಣಿಯರು ಒಂದರಪಕ್ಕದಲ್ಲೊಂದರಂತೆ ಕೆತ್ತಲ್ಪಟ್ಟಿವೆ. ಅಂದದ ಹಾಗೂ ತುಂಬಿದ ಮೈಕಟ್ಟನ್ನು ಹೊಂದಿದ ಈ ನಗ್ನ ಸ್ತ್ರೀ ವಿಗ್ರಹಗಳು ಚಿತ್ರ ವಿಚಿತ್ರವಾದ, ಅತ್ಯಂತ ಸುಂದರವಾದ, ಅದನ್ನೇ ಯಥಾವತ್ತಾಗಿ ಅನುಸರಿಸಿ ಹೆರಳು ಹಾಕಲು ಬಹಳ ಜಾಣ್ಮೆ ಬೇಕಾಗುವಂತಹ ಕಷ್ಟಸಾಧ್ಯ ಶೈಲಿಯ ಹೆರಳಿನ ಅಲಂಕಾರಗಳಿಂದ ಕೂಡಿದ್ದು ನಗ್ನವಾಗಿದ್ದು ಬಹುವಿಧವಾದ ಸುಂದರ ಆಭರಣಗಳನ್ನೂ, ಉತ್ತರೀಯವನ್ನೂ (veil) ಧರಿಸಿರುತ್ತವೆ. ಪಾದದಡಿಯಲ್ಲಿ ಆನೆ, ಮಕರ, ಶಾರ್ದೂಲ ಇತ್ಯಾದಿ ಪ್ರಾಣಿಗಳೂ, ಕೆಲವು ವಿಗ್ರಹಗಳು ಮಕ್ಕಳನ್ನೂ, ಕೆಲವು ಅಕ್ಕಪಕ್ಕದಲ್ಲಿ ಸ್ತ್ರೀಶಿಲ್ಪಗಳನ್ನೂ(ಬಹುಶಃ ದಾಸಿಯರು?) ಹೊಂದಿರುತ್ತವೆ. ನಗ್ನತೆಯೂ, ಪ್ರಕೃತಿಯಲ್ಲಿರುವ ನೀರು, ಸಸ್ಯ, ಪ್ರಾಣಿ, ಪಕ್ಷಿ, ಮಾನವ ಶಿಶು ಇತ್ಯಾದಿ ಸೃಷ್ಟಿಯ ದ್ಯೋತಕವಾದವುಗಳಾದ ಇವುಗಳು ಮಾತೃದೇವತೆಯ ಆರಾಧನೆಯನ್ನು ಕುರಿತು ಹೇಳುತ್ತವೆ. ಸಾಲಭಂಜಿಕೆಯರ ಶಿಲ್ಪವನ್ನೇ ಹೋಲುವ, ಸಂತಾನ ಫಲವತ್ತತೆಯ ದ್ಯೋತಕವಾದ, ತಲೆಹೆರಳಿನ ಅಲಂಕಾರಗಳನ್ನು ಹೋಲುವ ಹಾಗೂ ಕಂಬಗಳಿಗೆ ಆಧಾರವಾಗುವ ಶಿಲ್ಪಗಳು ಗ್ರೀಕರಲ್ಲಿ ಇವೆ. ಇವುಗಳನ್ನು Caryatid —(Kair - ee - At - id) ಎಂದು ಕರೆಯುತ್ತಾರೆ. ನಂತರದ ಕಾಲದಲ್ಲಿ ರೋಮನ್, ಫ್ರೆಂಚ್, ಸ್ಕಾಟ್ಲೆಂಡ್, ಜರ್ಮನ್, ಇಂಗ್ಲೆಂಡ್ ಇತ್ಯಾದಿ ದೇಶಗಳಲ್ಲೂ ಈ ಶಿಲ್ಪ ಶೈಲಿಯನ್ನು ಅನುಸರಿಸಿದ್ದಾರೆ.

ಮದನಿಕೆಯರು ಆಧರಿಸಿ ನಿಂತ ಈ ಸಾಲವೃಕ್ಷ (Shorea - robusta) ಕ್ಕೂ, ಅಶೋಕವೃಕ್ಷ(Saraka - Indica)ಕ್ಕೂ ವ್ಯತ್ಯಾಸಗಳು ತಿಳಿಯದೆ ದಿಕ್ಕು ತಪ್ಪಿ, ಗೊಂದಲಕ್ಕೀಡಾಗಿ ಪ್ರಾಚೀನ ಸಾಹಿತ್ಯಗಳು ಅದಲುಬದಲು ಮಾಡಿವೆ, ಎಂದು ಹಲವು ವಿದ್ವಾಂಸರ ಅಭಿಪ್ರಾಯವಾದರೂ, ಹಾಗಲ್ಲದೆ, ಆಯಾ ಪ್ರದೇಶಗಳ ಲಭ್ಯತೆ ಹಾಗೂ ಉಪಯೋಗಗಳಿಗೆ ತಕ್ಕ ರೀತಿಯಲ್ಲಿ ಸಂಬಂಧಿಸಿದಂತೆ ಈ ಎರಡು ವೃಕ್ಷಗಳನ್ನು ಶಿಲಾಬಾಲಿಕೆಯರಿಗೆ ಅನ್ವಯಿಸಲಾಗಿದೆ ಎನ್ನಬಹುದು. ಏಕೆಂದರೆ ಸಾಲವೃಕ್ಷವೂ, ಅಶೋಕವೃಕ್ಷವೂ ಬಹುತೇಕವಾಗಿ ಏಕರೀತಿಯಾದ ಅನೇಕಾನೇಕ ರೋಗಗಳನ್ನು ಗುಣಪಡಿಸುವ ಗುಣಗಳನ್ನು ಹೊಂದಿದ್ದು, ಅದರಲ್ಲಿ ಪ್ರಮುಖವಾಗಿ ಎರಡು ವೃಕ್ಷಗಳಲ್ಲೂ ದೊರಕುವ ಎಲೆ, ಹೂ, ಹಣ್ಣು, ತೊಗಟೆ ಇತ್ಯಾದಿಗಳನ್ನು ಉಪಯೋಗಿಸಿ ಸ್ತ್ರೀಯರ ಬಂಜೆತನ, ಪ್ರದರ ರೋಗಗಳು, ಗುಹ್ಯರೋಗಗಳು, ಗರ್ಭಾಶಯದ ಅನೇಕ ಖಾಯಿಲೆಗಳನ್ನು ಹೋಗಲಾಡಿಸಿ, ರಕ್ತಶುದ್ಧಿಯನ್ನು ಮಾಡುವ ಗುಣಗಳನ್ನು ಹೊಂದಿವೆ, ಎಂದು ಇಲ್ಲಿ ಹೇಳಿದರೆ ಸಾಕು. ಬಹುವಾದ ಔಷಧೀಯ ಗುಣಗಳನ್ನು ಹೊಂದಿರುವ ಈ ವೃಕ್ಷಗಳು ಪೂಜನೀಯವೆಂದು ಭಾರತೀಯರು ಪರಿಗಣಿಸಿರುವುದರಲ್ಲಿ ಅತಿಶಯೋಕ್ತಿಯೇನೂ ಇಲ್ಲ, ಮಾತ್ರವಲ್ಲದೆ ಇನ್ನೂ ಅನೇಕ ಔಷಧೀಯ ಸಸ್ಯಗಳನ್ನೂ, ವೃಕ್ಷಗಳನ್ನೂ ಪೂಜ್ಯವೆಂದೆಣಿಸಿ ಭಾರತೀಯ ಪರಂಪರೆಯಲ್ಲಿ ಪೂಜಿಸಲಾಗುತ್ತದೆ.

Copyright protected article. Infringement of copyright is punishable offence. No part of this publication is allowed for copy or reproduction of material.

Copyright protected article. Infringement of copyright is punishable offence. No part of this publication is allowed for copy or reproduction of material.

ಶಾಕ್ಯರ ರಾಣಿ ಮಾಯಾಳು ಅಶೋಕ ವೃಕ್ಷದಡಿಯಲ್ಲಿ, ಆ ವೃಕ್ಷದ ರೆಂಬೆಯನ್ನು ಹಿಡಿದುಕೊಂಡು ತ್ರಿಭಂಗಿಯಲ್ಲಿ ಗೌತಮ ಬುದ್ಧನಿಗೆ ಜನ್ಮವಿತ್ತ ಕಾರಣ ಸಾಲಭಂಜಿಕೆಯರಿಗೆ ತ್ರಿಭಂಗಿಯ ರೂಪವು ಬಂದಿತೆಂಬ ವಿಚಾರವನ್ನು ಕೆಲವು ವಿದ್ವಾಂಸರು ಹೇಳಿದರೂ, ಇದು ಪೊಳ್ಳುವಾದವಾಗಿದ್ದು, ಈ ನಂಬಿಕೆಯು ಬೌದ್ಧರುಗಳದ್ದಾಗಿದ್ದು, ಬೌದ್ಧ ಧರ್ಮಕ್ಕೂ ಮೊದಲೇ ಅತಿ ಪ್ರಾಚೀನದಿಂದಲೇ ಭಾರತೀಯ ಸಂಸ್ಕೃತಿ ಹಾಗೂ ಪರಂಪರೆಗಳಲ್ಲಿ ನೃತ್ಯವು ಧಾರ್ಮಿಕ ಆಚರಣೆಯಾಗಿ, ಪ್ರಕೃತಿಯ ಆರಾಧನೆಯಾಗಿ, ಶಾಸ್ತ್ರೀಯವಾಗಿ, ಶಿಷ್ಟ, ಜನಪದ ಹಾಗೂ ಆದಿವಾಸಿಗಳಲ್ಲಿ ಇದ್ದು, ನೃತ್ಯದಿಂದ ಇಹ - ಪರಗಳಲ್ಲಿ ದೇವಸಂಪ್ರೀತಿಯೂ, ಮೋಕ್ಷವೂ ಲಭಿಸುತ್ತದೆಂಬ ನಂಬುಗೆ, ಆಚರಣೆಗಳು ಇದ್ದ ಕಾರಣ ಈ ಶಿಲ್ಪಗಳು ನೃತ್ಯಭಂಗಿಗಳನ್ನು ಹೊಂದಿ ಭಾರತೀಯ ಶಿಲ್ಪಗಳು ವಿಶ್ವದಲ್ಲಿಯೇ ವಿಶಿಷ್ಟವಾದ ಶೈಲಿ ಹಾಗೂ ಮಾನ್ಯತೆಗಳನ್ನು ಹೊಂದಿವೆ ಎಂದು ಹೇಳಬಹುದು. ಈ ಶಿಲ್ಪಗಳು ನೃತ್ಯವನ್ನೇ ಕುರಿತದ್ದಾಗಿದೆ ಎನ್ನುವುದಕ್ಕೆ ಶಿಲ್ಪಗಳ ಪಾದಾಭರಣಗಳೊಂದಿಗೆ ಗೆಜ್ಜೆಗಳೂ, ಅಲಂಕಾರ ಯುಕ್ತ ಆಭರಣಗಳೂ, ಅನೇಕ ನೃತ್ಯ ಭಂಗಿಗಳೂ ಸಾಕ್ಷಿಯಾಗಿವೆ. ಕೈಯಲ್ಲಿರುವ ಚೌಧರಿ, ಮಡಚಿದ ಉತ್ತರೀಯ, ದರ್ಪಣ, ಪುಷ್ಪ, ಅನೇಕ ವಾದ್ಯಗಳು, ಅಲಂಕಾರಯುತ ಹಾಗೂ ವೈವಿಧ್ಯಮಯ ಸುಂದರವಾದ ಹೆರಳಿನ ಶೈಲಿಗಳೂ ನೃತ್ಯವನ್ನು ಕುರಿತಾಗಿಯೇ ಇವೆಯೆಂದು ಹೇಳಲು ಕಾರಣಗಳಾಗಿದ್ದು, ಯಕ್ಷಿಣಿಯರಿಗೆ ಆರೋಪಿಸಿದ ಪ್ರಕೃತಿಯ ಮಾತೃದೇವತಾರಾಧನೆಗಾಗಿಯೋ ಅಥವಾ ಬೇರೆ ಬೇರೆ ದೇವತಾರಾಧನೆಗಳಿಗೆಂದೋ ಹಲವು ರೀತಿಗಳಲ್ಲಿ ಪ್ರಾಚೀನದಲ್ಲಿ ದೇವಾಲಯಗಳಲ್ಲಿ ನರ್ತಿಸುತ್ತಿದ್ದರು ಎಂದು ಹೇಳಬಹುದಾಗಿದೆ. ಕೈಯಲ್ಲಿ ನೃತ್ಯ ಭಂಗಿಯಲ್ಲಿಯೇ ಹಿಡಿಯುವ ಆಯುಧಗಳು, ಭರತಮುನಿಯು 'ಯುದ್ಧದ ಅನೇಕ ವರಸೆಗಳೂ ನೃತ್ಯಕ್ಕಾಗಿ ಉಪಯುಕ್ತವಾಗಿವೆ' ಎಂದು ನಾಟ್ಯಶಾಸ್ತ್ರದಲ್ಲಿ ಹೇಳಿರುವುದಕ್ಕೆ ಇಲ್ಲಿ ಸಾಕ್ಷಿಯಾಗಿವೆ. ಶಿಲ್ಪಗಳಲ್ಲಿ ಅಲಂಕರಿಸಿರುವ ಮಡಚಿದ ತೆಳು ಉತ್ತರೀಯಗಳೂ, ಗೆಜ್ಜೆಗಳೂ, ಕಾಲಿನ ಕಡಗಗಳೂ, ಕೈಯಲ್ಲಿನ ವಸ್ತ್ರಗಳೂ ಅನೇಕ ಉಪಶಾಸ್ತ್ರೀಯ ಹಾಗೂ ಜನಪದ ನೃತ್ಯಗಳಲ್ಲಿ ಇಂದಿಗೂ ಉಪಯೋಗಿಸಲ್ಪಡುತ್ತಿರುವಂತಹುದೇ ಎಂಬುದನ್ನು ಈ ಲೇಖನಾಂತ್ಯದಲ್ಲಿ ಯೂ- ಟ್ಯೂಬ್ ಲಿಂಕ್ ಗಳ ಮೂಲಕ ತೋರಿಸಲಾಗುವುದು.

ಯಕ್ಷಿಣಿ - ಮಾತೃದೇವತೆ

ಸ್ತ್ರೀಯರನ್ನು ಅತಿ ಪ್ರಾಚೀನದಿಂದ ಹೇಳಲಾಗಿರುವ ಸಂತಾನೋತ್ಪತ್ತಿ ಶಕ್ತಿಯ ಮಾತೃದೇವತೆಯಾಗಿ ಪರಿಗಣಿಸಿರುವುದನ್ನು ಕುರಿತು ಆದಿಮಾನವರ ಕಾಲದಿಂದಲೇ ಇರುವುದನ್ನು ವಿದ್ವಾಂಸರು ಸಂಶೋಧಿಸಿ ಹೇಳಿದ್ದಾರೆ. Zimmer Heinrich Robert ರವರು ತಮ್ಮ Myths and Symbols in Indian Art and Civilization ಪುಸ್ತಕದಲ್ಲಿ
ಯಕ್ಷಿಣಿಯರಾದ ಈ ಸಾಲಭಂಜಿಕೆಯರು ಪ್ರಜನನ ದೇವತೆಗಳ ಕಲ್ಪನೆಯಿಂದ ಉಂಟಾದ ಮಾತೃದೇವತೆಯ ಆರಾಧನೆಯನ್ನೇ ಪ್ರತಿನಿಧಿಸುತ್ತಿವೆ, ಎಂದು ಹೇಳುತ್ತಾರೆ. ಈ ವಿಷಯವನ್ನೇ ಪ್ರತಿಪಾದಿಸುವ ಆನಂದ ಕೆ. ಕುಮಾರಸ್ವಾಮಿಯವರು ಮಾತೃದೇವತೆಯನ್ನು ಕುರಿತು ಅವರ "Yakshas" ಪುಸ್ತಕದಲ್ಲಿ ವಿವಿಧ ಸಂದರ್ಭಗಳಲ್ಲಿ ಹೇಳಿದ ಕೆಲವು ಮಾತುಗಳನ್ನು ಇಲ್ಲಿ ಗಮನಿಸಬಹುದು. ಭಾರತೀಯ ಸಂಪ್ರದಾಯಗಳ, ಪರಂಪರಾಗತ ನಂಬುಗೆಗಳ ವೈಶಿಷ್ಟ್ಯವನ್ನೂ ಅದರ ಹಿಂದಿನ ಶಾಸ್ತ್ರೀಯ ವಿಧಾನವನ್ನು ತಿಳಿಯಬೇಕೆಂದು ಅಪೇಕ್ಷಿಸುವವರು ಅವರ ಪುಸ್ತಕವನ್ನೇ ಓದಿದಲ್ಲಿ ಪೂರ್ಣವಾಗಿ ಜಕ್ಕಿಯರ(ಯಕ್ಷಿಣಿಯರ) ಸ್ವರೂಪವನ್ನು ಅರಿಯಲು ಅನುಕೂಲವಾಗುತ್ತದೆ.

(1)Yakshas and Yakshis should be identified with Gandharvas and Apsaras as originally conceived that is to say as primarily connected with water and secondarily with vegetation.(ಹಿಮಾಲಯದ ಪರ್ವತ ಸಾಲಿನಲ್ಲಿ ಈಗಲೂ ಕುಬೇರನ ಅಲಕಾಪುರಿಯೆಂದು ಹೇಳುವ ಸ್ಥಳದಲ್ಲಿ ಅಲಕಾನಂದಾ ನದೀತಟದಲ್ಲಿ ವಾಸ ಮಾಡುವ ಯಕ್ಷರ ಕುಲವೂ, ಅವರಲ್ಲಿಯೇ ಅತ್ಯಂತ ಸುಂದರಿಯರಾದ ಸ್ತ್ರೀಯರೂ ವಾಸವಾಗಿರುವುದು ಗಮನೀಯ! ಈ ಮಾಹಿತಿಗಾಗಿ ನೃತ್ಯ ವಿದ್ವಾಂಸರಾದ ಸೀಮಾ ಉಪಾಧ್ಯಾಯರವರಿಗೆ ಧನ್ಯವಾದಗಳು. ಆಕೆ ತಮ್ಮ ಬದರಿಯಾತ್ರೆಯ ಸಮಯದಲ್ಲಿ ಈ ಎಲ್ಲ ಸ್ಥಳಗಳಿಗೂ ಹೋಗಿದ್ದು ಫೋಟೋಗಳನ್ನು ತೆಗೆದಿದ್ದಾರೆ).

(2) King Varuna's people are said to be Gandharvas and those of King Soma, Apsaras; these are closely associated divinities of the water and fertility, and originally of more significance than when in the later literature it became little more than the musicians and dancers of Indra's Court.

(3) life and vegetation cults and the Fairy mythology, have much in common that goes back to a late Neolithic period.

Copyright protected article. Infringement of copyright is punishable offence. No part of this publication is allowed for copy or reproduction of material.

Copyright protected article. Infringement of copyright is punishable offence. No part of this publication is allowed for copy or reproduction of material.

(4) *The feminine powers of fertility and abundance can be traced far back into prehistoric times. These powers particularly the nude goddess, the great mother, who maybe Aditi and Sri who is very closely connected with water, stand in close relation to the water cosmology, and at the same time are represented in the aspect of women. But no stylistic distinction can be made as between this use of the human form, and the use of plant or animal forms, the treatment is equally abstract and symbolic*. *In both cases there is no intention to reproduce natural appearances. A stylistic distinction, perhaps referable to diversity of ethnic preoccupation, may indeed be drawn between an expressive and an illusionistic art. But Indian art is never illusionistic. It constitutes, in fact, a unity, and all the elements of this unity, are congruous and coeval. Even to attempt to distinguish Aryan and Dravidian tendencies may represent in a false issue*.

(5) the plants (Yajurveda) born 3 generation before the gods..... the plants whose king is Soma, impel us to long life. Plants, O ye mothers, I hail you, O goddesses the fruitful, the fruitless, the flowering, the flowerless, impelled by Brhaspati, may they free us from harm falling from the sky, the plants said 'He whom we reach while in life, shall not come to hurt'..... ಎನ್ನುವ ಮಾತುಗಳು ಸಸ್ಯಗಳನ್ನು ಜನನಿ, ಮಾತೆ ಎಂದು ಪರಿಗಣಿಸಿದ್ದ, ಹಾಗೂ ಮಾತೆಯಾದವಳು ಪೋಷಣೆಯನ್ನು ಮಾಡುವ ದೇವರು ಎಂಬ ಕಲ್ಪನೆಯು ಭಾರತದಲ್ಲಿ ವೇದಗಳ ಕಾಲದಲ್ಲಿಯೇ ಇತ್ತು ಎಂದು ತಿಳಿಯುತ್ತದೆ. ಅನೇಕ ಔಷಧೀಯ ಹಾಗೂ ಆಹಾರಕ್ಕೊದಗುವ ಸಸ್ಯಗಳೂ, ವೃಕ್ಷಗಳೂ ಭಾರತದಲ್ಲಿ ಇಂದೂ ಪೂಜನೀಯವಾಗಿದೆ ಎಂಬುದು ವಿದಿತವೆ.

ಜೈನ ಪಂಥದಲ್ಲಿ ಯಕ್ಷ ಯಕ್ಷಿಣಿಯರಿಗೆ ಅನೇಕ ಲಕ್ಷಣಗಳನ್ನು ಹೇಳಿದ್ದರೂ, ಜೈನ ಹಾಗೂ ಬೌದ್ಧಧರ್ಮಗಳು ಜನ್ಮತಾಳುವ ಪೂರ್ವದಿಂದಲೇ ಇದ್ದಂತಹ ನಂಬುಗೆಗಳನ್ನು ಆರಾಧನೆಗಳನ್ನು ಅದರಲ್ಲಿಯೂ ಮುಖ್ಯವಾಗಿ ಯಕ್ಷಿಣಿಯರಿಗೆ ಇದ್ದಿತೆಂದು ನಂಬಲಾಗಿದ್ದ ಸಂತಾನ, ಫಲವತ್ತತೆ, ಹಾಗೂ ರಕ್ಷಣೆಯನ್ನು ನೀಡುವ ವಿವಿಧ ಅತಿಮಾನುಷ ಶಕ್ತಿಗಳನ್ನು ಈ ಪಂಥಗಳೂ ಆರಾಧಿಸುವುದನ್ನು ಮುಂದುವರೆಸಿದವು. ಜಿನರ, ತೀರ್ಥಂಕರರ ರಕ್ಷಣೆಗಾಗಿ ಇಂದ್ರನು ಕಳುಹಿಸಿದ ಯಕ್ಷರು ಕಾವಲಿನವರಾದರೂ, ಜರಾಮರಣಗಳು ಯಕ್ಷ ಯಕ್ಷಿಣಿಯರಿಗೆ ಇದ್ದರೂ ನಂತರದ ಕಾಲದಲ್ಲಿ, ತಮ್ಮನ್ನು ಬೇಡಿದವರಿಗೆ ಕೃಪಾಕಟಾಕ್ಷವನ್ನು ತೋರುವವರಾದ್ದರಿಂದ ಯಕ್ಷ ಯಕ್ಷಿಣಿಯರ ಆರಾಧನೆಗಾಗಿ ಆಲಯಗಳು ಕಟ್ಟಲ್ಪಟ್ಟವು. ಜೈನ ಪಂಥದ ಈ ಯಕ್ಷ ಯಕ್ಷಿಯರಿಗೆ 'ಶಾಸನ ದೇವತೆ'ಗಳೆಂಬ ಹೆಸರೂ ಉಂಟು. ಯಕ್ಷರು ರಕ್ಷಕರಾಗಿ, ಲೋಕಪಾಲಕರಾಗಿ ಬಲಶಾಲಿಗಳಾಗಿದ್ದರೆ, ಯಕ್ಷಿಣಿಯರು ಅತಿ ಸುಂದರಿಯರಾಗಿ ಅನೇಕ ಹಿಂದೂ ಸ್ತ್ರೀ ದೇವತೆಗಳ ಹೆಸರುಗಳನ್ನೇ ಹೊಂದಿದ್ದು ಕೈಯಲ್ಲಿ ಹೂ, ಕುಂಭ, ವೃಕ್ಷ, ಪ್ರಾಣಿ, ಪಕ್ಷಿಗಳನ್ನೂ ಹಿಡಿದುಕೊಂಡಿರುವುದೂ ಸಂಗೀತವಾದ್ಯಗಳನ್ನು ನುಡಿಸುವುದೂ ಪುಸ್ತಕ ಗ್ರಂಥಗಳನ್ನು ಇಟ್ಟುಕೊಂಡಿರುವುದೂ ಮಾತೃ ಆರಾಧನೆಯನ್ನು ಹೇಳುವುದರೊಂದಿಗೆ ವಿದ್ಯೆಗಳನ್ನು ನೀಡುವವರಾಗಿಯೂ ಬಿಂಬಿಸಲ್ಪಟ್ಟಿವೆ.

ಬೌದ್ಧ ಸಾಹಿತ್ಯದ ಕೆಲವು ಕವನಗಳಲ್ಲಿ ಬುದ್ಧನೇ ಯಕ್ಷನೆಂದು ಕರೆಯಲ್ಪಡುತ್ತಾನೆ! ಕೆಲವು ಸಾಹಿತ್ಯದಲ್ಲಿ ಯಕ್ಷನು ವೈದ್ಯಗುರುವಾದ ಬುದ್ಧನಿಗೆ ಕಾವಲುಗಾರನಾಗಿ ಬಿಂಬಿಸಲ್ಪಟ್ಟಿದೆ. ಥೈಲಾಂಡ್ ನ ಬೌದ್ಧರು 'ಯಕ್' ಎಂದು ಕರೆಯುವ ಈ ಯಕ್ಷರು ಗುಡ್ಡೆಕಣ್ಣು, ಕೋರೆದಾಡೆಯಂತಹ ದಂತಗಳು ಹಾಗೂ ಹಸಿರು ಬಣ್ಣದವರಾಗಿ ಬಿಂಬಿಸಲ್ಪಟ್ಟವರಾಗಿದ್ದಾರೆ. ಬೌದ್ಧರಲ್ಲಿ 'ಸಕ್ಕ' ಎಂದು ಕರೆಯಲ್ಪಡುವ ಯಕ್ಷನು ರಾಜನಾಗಿದ್ದಾನೆ. 'ಯಕ್ಕ' ರೂಪದಲ್ಲಿದ್ದ ಪದದ ಈ ರೀತಿಯಾದ 'ಸಕ್ಕ' ಉಚ್ಚಾರವು ಗ್ರೀಕರಿಂದಾಗಿ ಬಂದಿರುವ ಸಾಧ್ಯತೆ ಇದೆ. ಜಯದಿಸ್ಸ ಜಾತಕ ಕಥೆಯಲ್ಲಿ ಚಂದ್ರನನ್ನೂ ಯಖ್ಖ ಎಂದು ಕರೆಯುತ್ತಾರೆ! ಕೆಲವು ಯಖ್ಖರು ರುಕ್ಕದೇವತಾ —ವೃಕ್ಷದೇವತಾ ಎಂದೂ ಭುಮ್ಮ ದೇವತಾ —ಭೂಮಿ ದೇವತೆ ಎಂದೂ ಕರೆಸಿಕೊಳ್ಳುತ್ತವೆ. ಶ್ರೀಲಂಕಾದಲ್ಲಿ ಕ್ರಿ.ಪೂ.543 - 505ದಲ್ಲಿ ದೊರೆಯಾಗಿದ್ದ ವಿಜಯನು ತನ್ನ ಆಳ್ವಿಕೆಯ ಕಾಲದಲ್ಲಿ ಯಕ್ಷ ಜನಾಂಗದವನನ್ನೇ ಮುಖ್ಯಸ್ಥನನ್ನಾಗಿ ಇಟ್ಟುಕೊಂಡಿದ್ದನು. ಬೌದ್ಧರಾಗಿರುವ ಜಪಾನೀಯರು ಯಕ್ಷರನ್ನು 'ಯಶ', ಟಿಬೆಟ್ ನವರು ನೊಜಿನ್, ಶ್ರೀಲಂಕಾದವರು ಯಾಂಗ್ ಜಿಯಾನ್ ಎಂದೂ ಕರೆಯುತ್ತಾರೆ. ಜೈನ ಪಂಥದ ಯಕ್ಷ ಯಕ್ಷಿಣಿಯರಿಗೆ ಕಿನ್ನರ, ಕಿಂಪುರುಷ, ಗಂಧರ್ವ, ನಟಿ, ಇತ್ಯಾದಿ ಕಲೆಗೆ ಸಂಬಂಧಿಸಿದ ಪುರಾಣ ಪ್ರಸಿದ್ಧ ಜನರ ಹೆಸರೂ ಇರುವುದು ಕುತೂಹಲವನ್ನು ಮೂಡಿಸುತ್ತದೆ.

Copyright protected article. Infringement of copyright is punishable offence. No part of this publication is allowed for copy or reproduction of material.

Copyright protected article. Infringement of copyright is punishable offence. No part of this publication is allowed for copy or reproduction of material.

'ಯಕ್ಷ - ಯಕ್ಷಿಣಿ'ಯರು—ಭಾರತದಿಂದ ಗ್ರೀಕ್ ಮತ್ತು ಪರ್ಶಿಯಾಗೆ

ಭಾರತದಲ್ಲಿ ಧಾರ್ಮಿಕ ನೃತ್ಯಗಳನ್ನು ವೇದಗಳ ಕಾಲದಲ್ಲಿಯೇ ಹೇಳಲಾಗಿದೆ. ವೇದವಾಙ್ಮಯ ವಿಸ್ತಾರದಲ್ಲಿ ಹಲವಾರು ಸಂಗೀತವಾದ್ಯಗಳ, ಅವುಗಳ ವಾದನದ ಹಾಗೂ ಅವುಗಳ ಜೊತೆಗೆ ಹಾಡುವುದೂ ಯಜ್ಞಕರ್ಮಗಳ ಅನುಷ್ಠಾನದ ಅಂಗವಾಗಿ ನರ್ತಿಸುವುದರ ಉಲ್ಲೇಖಗಳು ದಟ್ಟವಾಗಿ ದೊರೆಯುತ್ತವೆ. ಇವು ವಿವಿಧ ಸಂಹಿತೆ, ಅರಣ್ಯಕ, ಬ್ರಾಹ್ಮಣ ಮತ್ತು ಶ್ರೌತಸೂತ್ರಗಳಲ್ಲಿ ಹರಡಿಹೋಗಿವೆ. ಪ್ರಾಚೀನವಾದ ಸುಮೇರಿಯ, ಮೆಸಪೊಟೋಮಿಯಾ, ಇರಾನ್ ಮತ್ತು ಈಜಿಪ್ಟ್ ಗಳ ಸಂಸ್ಕೃತಿಗಳಲ್ಲಿ ಕಂಡುಬರುವ ವಾದ್ಯ, ವಾದನ, ಗಾಯನ, ನೃತ್ಯಗಳ ಉಲ್ಲೇಖಗಳಿಗಿಂತ ಇವು ಪುರಾತನವಾಗಿದ್ದು ಬಹುಶಃ ನಾಗರಿಕಮಾನವನ ಧಾರ್ಮಿಕ ಪ್ರವೃತ್ತಿಗಾಗಿ, ಯಜ್ಞ ಯಾಗಾದಿಗಳ ಕಾಲದಲ್ಲಿ ನರ್ತಿಸುವ ಪ್ರಪ್ರಥಮ ದಾಖಲೆಗಳಾಗಿವೆ. ಚರಿತ್ರೆ ಕಾಲದ ಪೂರ್ವದಲ್ಲಿಯೇ ನೀರಿನಿಂದಲೇ ಸಕಲ ಸೃಷ್ಟಿಗಳು; ದೇವತೆಗಳಿಗಿಂತಲೂ ಸಸ್ಯಗಳೇ ಮೊದಲು ಸೃಷ್ಟಿಯಾಗಿ, ಸಸ್ಯ ಹಾಗೂ ವೃಕ್ಷಗಳ ಮತ್ತು ಸಂತಾನ ಮತ್ತು ಕೃಷಿ ಸಮೃದ್ಧಿಯ ಸಂಕೇತಗಳಾಗಿ ಈ ಅತಿಮಾನುಷ ಶಕ್ತಿಯಿದೆಯೆಂದು ಪರಿಗಣಿಸಲಾದ ಯಕ್ಷಿಣಿಯರನ್ನು ಮಾತೃದೇವತೆಗಳೆಂದು ಆರಾಧನೆ ಮಾಡುವ; ನಂತರದ ಕಾಲದಲ್ಲಿ ಇದರ ದ್ಯೋತಕವಾಗಿ, ವೃಕ್ಷದಡಿಯಿರುವ ನಗ್ನಸ್ತ್ರೀಯರ ಶಿಲ್ಪಗಳನ್ನು ಮಾತೃದೇವತೆಗಳೆಂದು ಆರಾಧಿಸುವ ಜನಾಂಗಗಳು ಭಾರತದಲ್ಲಿಯೂ ಪ್ರಾಚೀನ ಸಂಸ್ಕೃತಿಯಿರುವ ಹಲವು ರಾಷ್ಟ್ರಗಳಲ್ಲಿಯೂ ಇವೆಯೆಂದು ಈ ಮೊದಲೇ ಹೇಳಲಾಗಿದೆ. ಇವು ನಂತರದ ಕಾಲದಲ್ಲಿ ಭಾರತದಲ್ಲಿ ಶಿಷ್ಟ ಹಾಗೂ ಜನಪದದಲ್ಲಿ ಸಾಲಭಂಜಿಕೆಯರಂತೆಯೂ, ಶಿಷ್ಟ, ಜನಪದ ಹಾಗೂ ಆದಿವಾಸಿಗಳಲ್ಲಿ ಅನೇಕ ಯಕ್ಷಿಣಿಯರು ಮಾತೃದೇವತೆಗಳಾಗಿ ಮಾರ್ಪಟ್ಟು ಅನೇಕ ಸ್ತ್ರೀ ದೇವತೆಗಳ ಹೆಸರಿನಲ್ಲಿಯೂ ಪ್ರತಿನಿಧಿಸಲ್ಪಟ್ಟವು, ಇಂದೂ ಪ್ರತಿನಿಧಿಸಲ್ಪಡುತ್ತಿವೆ. ಪ್ರಾಚೀನ ಭಾರತದಲ್ಲಿ, ಸಸ್ಯರಾಶಿ, ಪ್ರಾಣಿರಾಶಿಗಳ ಅಸ್ತಿತ್ವಕ್ಕೂ, ಉಳಿವಿಗೂ, ಸಮೃದ್ಧಿಗೂ ಕಾರಣನಾದ, ನೀರಿನ ದೇವತೆಯೆಂದು ನಂಬುವ ವರುಣನನ್ನು ಸಂತೃಪ್ತಿಪಡಿಸಲು, ಯಜ್ಞ ಯಾಗಾದಿಗಳಲ್ಲಿ ಅತ್ಯಗತ್ಯವಾಗಿ ಇರಲೇ ಬೇಕಾಗಿದ್ದ , 'ಕುಂಭದಾಸಿ'ಎಂದು ಕರೆಯಲ್ಪಡುತ್ತಿದ್ದ ಒಂದು ಪಂಗಡದ ಸ್ತ್ರೀಯರು ಕುಂಭವನ್ನು ಹೊತ್ತು ಯಜ್ಞಕುಂಡಗಳ ಸುತ್ತಲೂ ನರ್ತಿಸದಿದ್ದರೆ, ಯಜ್ಞಕಾರ್ಯವು ಪೂರ್ಣವಾಗುತ್ತಿರಲಿಲ್ಲ. (ಕುಂಭವನ್ನು ಹೊತ್ತು, ಕೆಳಗೆ ಹೇಳುವಂತೆ ಕತ್ತಿಯನ್ನೂ ಹಿಡಿದು ದೇವರಿಗಾಗಿ ನರ್ತಿಸುವ ಪದ್ಧತಿಯು ಈಗಲೂ ಇದ್ದು ಅದರ ಉದಾಹರಣೆಯಾಗಿ ಲೇಖನಾಂತ್ಯದಲ್ಲಿ ನೀಡಲಾಗುವ ಆಂಧ್ರದ ಎಲ್ಲಮ್ಮ ದೇವಿಯ ಪೂಜಾರಿಣಿಯ ನೃತ್ಯವನ್ನು, ಯೂ ಟ್ಯೂಬ್ ಲಿಂಕ್ ನಲ್ಲಿ ಕಾಣಬಹುದು.)

' folk dances, in part fertility rites and rain spells (eg. the pot dance of maidens at the Mahavrata and in the Marjaaliya ceremony after the horse sacrifice) and also sword dances especially in Kuru are certainly known in India, and presently suggestive parallels with various vegetation and sword dances of Europe. Von Schroeder and Hertel have sought to interpret many vedic hymns as being the words of early vegetation dramas or mysteries, and the general Indian tendency to think of the dance as a symbol or instigation of Cosmogenic activities cannot be ignored.' (AKC)

ಭಾರತೀಯರಲ್ಲಿ ಅಶ್ವಮೇಧ ಮಾತ್ರವಲ್ಲದೆ ಅನೇಕ ಯಜ್ಞಯಾಗಾದಿಗಳಿಗೂ ಕುಂಭದಾಸಿಯರ ನೃತ್ಯವು ಅತ್ಯಗತ್ಯವಾಗಿದ್ದಿತು.

ವೇದಯುಗದಲ್ಲಿಯೇ ಶತಾರಿತ್ರ, ಶತಸ್ಥ್ಯಗಳೆಂಬ ಭಾರೀ ನೌಕೆಗಳಿದ್ದವೆಂದೂ ಈ ನೌಕೆಗಳ ಸಹಾಯದಿಂದ ಭಾರತೀಯರು ಪ್ರಪಂಚದಲ್ಲೆಲ್ಲ ವ್ಯಾಪಾರ ಮಾಡುತ್ತಿದ್ದು ದ್ವೀಪಾಂತರಗಳಲ್ಲಿ ನೆಲೆಸಿದ್ದರು. ಅನಂತರ ಹರಪ್ಪ ಸಂಸ್ಕೃತಿಯ ಕಾಲದಲ್ಲಿ ಸುಮೇರು, ಬ್ಯಾಬಿಲೋನಿಯಾ, ಅಸ್ಸಿರಿಯ, ಟ್ರಾಯ್, ಕ್ರೀಟ್, ಈಜಿಪ್ಟ್ ಮುಂತಾದ ದೇಶಗಳಲ್ಲಿ ವ್ಯಾಪಾರಗಳು ವ್ಯಾಪಿಸಿದ್ದವು. ಗ್ರೀಕರೂ ರೋಮನ್ನರೂ ಭಾರತೀಯ ವಸ್ತುಗಳಿಗೆ ಮರುಳಾಗಿ ವರ್ಷಕ್ಕೆ 10 ಲಕ್ಷ ಪೌಂಡ್ ಗಳಿಗಿಂತಲೂ ಹೆಚ್ಚಾಗಿ ಭರತಖಂಡಕ್ಕೆ ಸಲ್ಲಿಸುತ್ತಿರುವರೆಂದು ಪ್ಲಿನಿಯು ಹೇಳುತ್ತಾನೆ. ಬೌದ್ಧಜಾತಕಗಳಲ್ಲಿ ಅಶ್ಮಕ್ - ಮುಲಕನಾಡಿನ ಒಬ್ಬ ಬ್ರಾಹ್ಮಣ ಗುರುವು ತನ್ನ ಶಿಷ್ಯರೊಡನೆ ಬವೇರು (Babylon) ದೇಶಕ್ಕೆ ಹೋದನೆಂದು ಹೇಳಿದೆ. ಕ್ರಿ. ಶ. 1ನೆಯ ಶತಾಬ್ದದ "ಪೆರಿಪ್ಲೂಸ್" ಎಂಬ ಗ್ರಂಥದಿಂದಲೂ ಪ್ಲಿನಿ, ಟಾಲಮಿ, ಕಾಸ್ಮಾಸ್, ಇಂಡ್ಲಿಕೋಪ್ಲೂಸ್ಟೀಸ್ ಎಂಬುವರ ಗ್ರಂಥಗಳಿಂದ ಭಾರತದ ಅನೇಕ ರೇವು ಪಟ್ಟಣಗಳು ಪೂರ್ವ ತೀರದಲ್ಲಿ ಪ್ರಸಿದ್ಧವಾಗಿದ್ದವೆಂದು ತಿಳಿದುಬರುತ್ತದೆ. ಸಂಘ ಸಾಹಿತ್ಯವು ಯವನರ ಹಡಗುಗಳು ವಿಶೇಷವಾಗಿ ದಕ್ಷಿಣ ಭಾರತದೊಂದಿಗೆ ವ್ಯಾಪಾರವನ್ನು ಮಾಡುತ್ತಿದ್ದುದನ್ನು ಹೇಳುತ್ತದೆ. ತಮಿಳಿನ ಸಂಘಂ ಸಾಹಿತ್ಯದಲ್ಲಿಯೂ ಈ ವಾಣಿಜ್ಯ ವಿನಿಮಯಗಳ ಬಗ್ಗೆ ಅನೇಕ ಮಾಹಿತಿಗಳು ದೊರೆಯುತ್ತವೆ. ವಿಜಯನಗರ ಅರಸರ ಕಾಲವಂತೂ ಸುವರ್ಣಯುಗವಾಗಿದ್ದು ಪರ್ಶಿಯನ್ನರ ಜೊತೆಗೆ ಅನೇಕ ವಾಣಿಜ್ಯ ಹಾಗೂ ಸಾಂಸ್ಕೃತಿಕ ವಿನಿಮಯಗಳಾದವು. ಇಂತಹ ಅನೇಕ ಸಮಯ, ಸಂದರ್ಭಗಳಲ್ಲಿ ಮಾತೃದೇವತೆಯ ಆರಾಧನೆಯ ಸಂಸ್ಕೃತಿಯನ್ನು ಭಾರತದಿಂದ ಅನೇಕ ಸಂಸ್ಕೃತಿಗಳು ಸ್ವಾಗತಿಸಿ ಆಲಂಗಿಸಿಕೊಂಡವು. ಅವುಗಳಲ್ಲಿ ಗ್ರೀಕ್, ರೋಮ್, ಈಜಿಪ್ಟ್, ಬ್ಯಾಬಿಲೋನಿಯ, ಮೆಸಪೊಟೋಮಿಯಾ ಪರ್ಶಿಯಾ ಇತ್ಯಾದಿ ದೇಶಗಳು ಪ್ರಮುಖವಾದವು.

Copyright protected article. Infringement of copyright is punishable offence. No part of this publication is allowed for copy or reproduction of material.

Copyright protected article. Infringement of copyright is punishable offence. No part of this publication is allowed for copy or reproduction of material.

'Recent discoveries in the Indus valley, proving at least a trade relationship between Indian and Mesopotamian centres in the third Millennium BC point in the same direction. The early cult of a nude goddess, common to ancient India and western Asia maybe instanced (see A. K. Coomaraswamy, 'Archaic Indian terracottas in Ipek, 1928). ಪ್ರಾಚೀನ ಪರ್ಶಿಯನ್ ದೇಶವಾದ ಇರಾನ್ ದೇಶದಲ್ಲಿ' 'Iranian cosmology reserved in the Zendavesta, presents us with a body of belief and a type of gods and ginii closely related to those of the water cosmology in India. The 'immortality' ginii of plants and water, have much in common with the Yakshas, and so in another way have the privacy as self like Ginii and guardian angels the ranks of Asura and Deva in Persia and in India were reversed the change took place in India and Persia preserved what can only be inferred in India from the oldest parts of the Vedas and from survival in popular belief and art.' (AKC).

ನಂತರದ ಕಾಲಪ್ರವಾಹದ ಅವಾಂತರಗಳಲ್ಲಿ, ದೇಶ ದೇಶಗಳಲ್ಲಿ ಆದಂತಹ ದುರಾಕ್ರಮಣಗಳಿಂದ ಉಂಟಾದ ರಾಜಕೀಯ ಹಾಗೂ ಧಾರ್ಮಿಕ ಬದಲಾವಣೆಗಳೂ ಜನಜೀವನದಲ್ಲಿ ವ್ಯತ್ಯಾಸಗಳೂ, ವ್ಯಾಪಾರ ವಿನಿಮಯಗಳಿಗಾಗಿ ಪ್ರಪಂಚದ ಎಲ್ಲೆಡೆಯೂ ಹರಡಿದ ಸಂಚಾರ - ಸಂಪರ್ಕಗಳಿಂದಾಗಿಯೂ, ಪರಕೀಯರ ಆಕ್ರಮಣಗಳು, ಒಳಜಗಳಗಳು, ಯುದ್ಧಗಳು, ಬರಗಾಲ ಇತ್ಯಾದಿ ಅನೇಕ ವೈರುಧ್ಯಗಳ ಕಾರಣಗಳಿಂದಲೂ ವಿಶಾಲವಾದ ಭರತಭೂಮಿಯಲ್ಲಿ ಅಲ್ಲಲ್ಲಿ ಪ್ರಾದೇಶಿಕವಾಗಿ ಜನಜೀವನದ ಮೇಲೆಯೂ, ತನ್ಮೂಲಕ ಬಹಳವಾದ ಸಾಂಸ್ಕೃತಿಕ ಬದಲಾವಣೆಗಳೂ ಆಗಿ ಹೆಚ್ಚಿನ ಕಲೆಗಳು ತಮ್ಮ ಮೂಲರೂಪವನ್ನು ಉಳಿಸಿಕೊಳ್ಳುವುದರಲ್ಲಿ ವಿಫಲವಾದವು. ಈ ಕಾಲ ವೈರುಧ್ಯದಲ್ಲಿ ಭಾರತೀಯ ಸಂಗೀತ ನೃತ್ಯಗಳು ಪ್ರಕೃತಿಯನ್ನು ಪ್ರತಿನಿಧಿಸುವ ಮಾತೃದೇವತಾರಾಧನೆಗಾಗಿಯೂ ವೈದಿಕ ಹಾಗೂ ಅವೈದಿಕ ದೇವತೆಗಳನ್ನು ಸಂತೋಷಪಡಿಸಲೂ ಹಾಗೂ ಮೋಕ್ಷವನ್ನು ಸಾಧಿಸುವ ಉದ್ದೇಶಕ್ಕಾಗಿಯೂ ಇದ್ದಂತಹ ಮೌಲ್ಯಗಳನ್ನು ಕಳೆದುಕೊಂಡು ಅನ್ಯಮತೀಯರ ಆಕ್ರಮಣದಿಂದಾಗಿ ಭೋಗಕ್ಕಾಗಿ ಉಪಯೋಗಿಸಲಾರಂಭಿಸಲ್ಪಟ್ಟವು. ಆದರೂ ಅವುಗಳ ಶಾಸ್ತ್ರೀಯ ಹಾಗೂ ವೈಜ್ಞಾನಿಕ ಕಲಾಪ್ರೌಢಿಮೆಗಳಿಂದಾಗಿ ಇಂತಹ ಕತ್ತಲೆಯ ಯುಗದಲ್ಲಿಯೂ ಪ್ರಪಂಚದ ಅತ್ಯುತ್ತಮ ನಾಗರೀಕ ಕಲೆಗಳೆಂದೆನಿಸಿಕೊಂಡವು. ಪ್ರಪಂಚದ ಬೇರೆ ದೇಶಗಳಲ್ಲಿ ಕಲೆಗಳು ಮನೋರಂಜನೆಗಾಗಿ ಹುಟ್ಟಿ, ಬೆಳೆದು ಬದಲಾದವುಗಳಾದರೆ ಭಾರತದಲ್ಲಿ ಶಾಸ್ತ್ರೀಯ ಹಾಗೂ ಜನಪದೀಯ ಕಲೆಗಳೆಲ್ಲವೂ ಧಾರ್ಮಿಕತೆಯ ಅಂಗವಾಗಿ ಮನೋನ್ನತಿ, ಮಾನೋನ್ನತಿ ಹಾಗೂ ಆಧ್ಯಾತ್ಮಿಕವಾದ ಅರ್ಥಗಳನ್ನೇ ಬಿಂಬಿಸಿ, ಅವಲಂಬಿಸಿ ಉತ್ತಮ ಧ್ಯೇಯಗಳನ್ನು ಹೇಳುವುದಕ್ಕಾಗಿ ಹುಟ್ಟಿ ತಮ್ಮ ಮೌಲ್ಯಗಳ ಮೂಲಕ ದೇಶದಲ್ಲಿ ಎಷ್ಟೇ ರಾಜಕೀಯ, ಸಾಂಸ್ಕೃತಿಕ, ಆರ್ಥಿಕ, ಮತೀಯ ಬದಲಾವಣೆಗಳೂ ವಿಪ್ಲವಗಳೂ ಆದರೂ, ಇವುಗಳಿಂದ ಅನೇಕ ಪ್ರಾಚೀನ ಸಂಸ್ಕೃತಿಗಳೆಲ್ಲವೂ ಕುರುಹು ಸಿಗಲೂ ಕಷ್ಟವಾಗುವಂತೆ ನಾಶವಾದರೂ, ಭಾರತೀಯ ಕಲೆಗಳು ತಮ್ಮ ಪ್ರಾಚೀನ ರೂಪಗಳನ್ನು ಕಳಚಿಕೊಂಡು ಹೊಸರೂಪಗಳನ್ನು ಪಡೆದು ಯಶಸ್ವಿಯಾಗಿ ಲೋಕಪ್ರಸಿದ್ಧಿಯನ್ನೂ ಮನ್ನಣೆಯನ್ನೂ, ಜನಮಾನಸದಲ್ಲಿ ಭಕ್ತಿಯನ್ನು ಮೂಡಿಸುವಲ್ಲಿ ಯಶಸ್ವಿಯಾದವು. ಇದರಿಂದಾಗಿ ಅನೇಕ ಸಂಪ್ರದಾಯಗಳೂ ಪರಂಪರೆಗಳೂ ಸಂಸ್ಕೃತಿಗಳೂ ಉಳಿಯಲು ಕಾರಣವಾಯಿತು. ಕಾಲಕಾಲಕ್ಕೆ ಎಲ್ಲ ವಿದ್ಯೆಗಳ ಹಾಗೂ ಲಲಿತಕಲೆಗಳ ಲಕ್ಷ್ಯ - ಲಕ್ಷಣಕಾರರು ಪ್ರಾಚೀನದಿಂದ ಶಾಸ್ತ್ರಕಾರರು ಹೇಳಿದ್ದನ್ನು ಮುಂದುವರೆಸಿದ್ದು ಮಾತ್ರವಲ್ಲದೆ ತಮ್ಮ ಕಾಲದಲ್ಲಿ ಬೆಳೆದು ಬಂದದ್ದನ್ನೂ ಸಮನ್ವಯ ಮಾಡಿ ಶಾಸ್ತ್ರಗ್ರಂಥಗಳನ್ನು ರಚಿಸಿ ದಾಖಲಿಸುತ್ತ ಬಂದರು. ಇದರ ಸಂಪೂರ್ಣ ಯಶಸ್ಸು, ಕೀರ್ತಿ ಭಾರತದ ರಾಜಪರಂಪರೆಗೂ ಯತಿಪರಂಪರೆಗೂ ಸಲ್ಲಬೇಕು. ಬರೇ ಯುದ್ಧವಿದ್ಯೆಯಲ್ಲಿ ಮಾತ್ರ ಪರಿಣತರಾಗದೆ, ಎಲ್ಲ ವಿದ್ಯೆ, ಕಲೆ ಹಾಗೂ ಅವುಗಳ ಶಾಸ್ತ್ರಗಳಲ್ಲೂ ಭಾರತದ ರಾಜರಂತೆ ಪ್ರಪಂಚದ ಬೇರೆಡೆ ಎಲ್ಲೂ ವಿದ್ವಾಂಸರಾದ ವಿದ್ಯಾವಂತರಾದ ರಾಜ ಮಹಾರಾಜರುಗಳು ಕಾಣಸಿಗಲಾರರು. ಭಾರತೀಯ ರಾಜರುಗಳು ಸ್ವತಃ ಶಾಸ್ತ್ರಗ್ರಂಥಗಳನ್ನೂ ಬರೆದು ವಿದ್ವಾಂಸರಿಂದಲೂ ಬರೆಯಿಸಿ ಪಂಡಿತಮಂಡಲಿ, ವಾಗಾರ್ಥ ಸಭೆಗಳನ್ನು ಏರ್ಪಡಿಸಿ ತೀರ್ಮಾನವಾದ ಶಾಸ್ತ್ರೀಯ ಸಂಗತಿಗಳನ್ನು ದಾಖಲಿಸಿಡುತ್ತಿದ್ದರು. ರಾಜ ಮಹಾರಾಜರು ತಮ್ಮ ಆಸ್ಥಾನಗಳಲ್ಲಿ ಬರೇ ಯುದ್ಧಕ್ಕೆ ಸಂಬಂಧಿಸಿದಂತೆ, ರಾಜಕಾರಣಕ್ಕೆ ಸಂಬಂಧಪಟ್ಟವರನ್ನು ಮಾತ್ರ ಪೋಷಿಸದೆ, ಎಲ್ಲ ರೀತಿಯ ವಿದ್ವಾಂಸರನ್ನೂ, ಕಲಾಕಾರರನ್ನು ಪೋಷಿಸಿ ಬೆಳೆಸಿದರು. ದೇವಾಲಯಗಳಲ್ಲಿ, ಗುರುಕುಲಗಳಲ್ಲಿಯೂ ಇಂತಹ ವಿದ್ಯೆಗಳನ್ನು ಪೋಷಿಸಿ ಬೆಳೆಸಿದರು. ಅದಕ್ಕಾಗಿ ಅನೇಕ ದಾನಧರ್ಮಗಳು ರಾಜ, ಮಂತ್ರಿ, ಹಾಗೂ ಅನೇಕ ಧನಿಕರಿಂದಲೂ ಈ ಬಗ್ಗೆ ದಾನಧರ್ಮಗಳು ನಡೆದವು. ಯತಿಪರಂಪರೆಯೂ ಅಷ್ಟೇ, ಇದೇ ರೀತಿಯಾಗಿ ತಮ್ಮ ಮತಮಾನ್ಯಗಳ ಮೂಲಕ ಜನಸಮುದಾಯವನ್ನು ಉನ್ನತಿಯತ್ತ ಕೊಂಡೊಯ್ಯುತ್ತಿದ್ದರು.

"ಜಕ್ಕಡೀ - ಗುಪ್ತಗಾಮಿನಿ"

Copyright protected article. Infringement of copyright is punishable offence. No part of this publication is allowed for copy or reproduction of material.

Copyright protected article. Infringement of copyright is punishable offence. No part of this publication is allowed for copy or reproduction of material.

ಭಾರತದಲ್ಲಿ ಹುಟ್ಟಿದ ಜಕ್ಕಡೀ ನೃತ್ಯಪ್ರಕಾರವು ಭಾರತದಲ್ಲಿ ಮಾತ್ರವಲ್ಲದೆ, ವಿಶ್ವದಲ್ಲಿಯೂ ಅನೇಕ ದೇಶಗಳಲ್ಲಿ ಯಕ್ಷಿಣಿಯ ಸ್ವರೂಪವಾದ ಮಾತೃದೇವತೆಯ ಆರಾಧನೆಗಾಗಿ ಎಲ್ಲೆಲ್ಲಿ ಮಾತೃದೇವತೆಯ ಸಂಪ್ರೀತಿಗಾಗಿ ನೃತ್ಯವಾಗುತ್ತದೆಯೋ ಅದೆಲ್ಲವೂ ಜಕ್ಕಡೀ ನಾಮ ಹಾಗೂ ನೃತ್ಯಗಳ ರೂಪಾಂತರಗಳಾಗಿ ಹಂಚಿ ಹೋದವು, ಹಾಗೆಯೇ ಆಯಾ ದೇಶಾಚಾರಕ್ಕೆ ತಕ್ಕಂತೆ ವೇಷಭೂಷಣಗಳೂ, ಆಚರಣೆಗಳೂ ನೃತ್ಯಶೈಲಿಗಳೂ ಬದಲಾದವು. ಈ ಬದಲಾವಣೆಗಳು ಸಾವಿರಾರು ವರ್ಷಗಳ ಕಾಲ ಬೇರೆ ಬೇರೆ ಪರಿಣಾಮಗಳಿಗೆ ಒಳಪಟ್ಟು ಆದವುಗಳು ಎಂಬ ವಿಷಯವು ಇದುವರೆಗೆ ಮಾಡಿದ ಅಧ್ಯಯನದಿಂದ ಅನುಮಿತಿಯೇನೋ ಆಯಿತು. ಆದರೆ ಈಗ ನರ್ತನನಿರ್ಣಯದಲ್ಲಿ ಹೇಳಿದ ಜಕ್ಕಡೀ ನೃತ್ಯವು ಪ್ರಯೋಗದಲ್ಲಿ ಉಳಿದಿದೆಯೇ ಎಂಬ ಪ್ರಶ್ನೆಗೆ, ಪ್ರಾಮಾಣಿಕವಾಗಿ ಹೇಳಬೇಕೆಂದರೆ ಪಂಡರೀಕ ವಿಠ್ಠಲನು ಹೇಳಿದ ಲಕ್ಷಣಗಳನ್ನು ಹೊಂದಿದ ಈ ನೃತ್ಯ ಪ್ರಕಾರವು ಈಗ ಆ ಹೆಸರಿನಲ್ಲಿ ಉಳಿದಿಲ್ಲವೆಂದೇ ಹೇಳಬೇಕು. ಆದರೆ, ಇದುವರೆಗೂ ಇತಿಹಾಸ ಪೂರ್ವದಿಂದಲೇ ಮುಖ್ಯವಾಗಿ ನೀರು, ಸಸ್ಯರಾಶಿ, ಸಂತನೋತ್ಪತ್ತಿ, ಸಮೃದ್ಧಿ ಇತ್ಯಾದಿಗಳಿಗಾಗಿ ದೇವತೆಗಳು ಆರಾಧಿಸಲ್ಪಡುವ, ಅದಕ್ಕಾಗಿ ಅನೇಕ ರೂಪಗಳಲ್ಲಿ ಮುಖ್ಯವಾಗಿ ಯಕ್ಷಿಣಿಯ ಆರಾಧನೆಗಾಗಿ ನರ್ತಿಸಲ್ಪಡುತ್ತಿದ್ದ ನೃತ್ಯ ಪ್ರಕಾರಗಳು ಭಾರತದಲ್ಲಿ ಯಕ್ಷಣಿಯ ಪ್ರಾಕೃತ ನಾಮಗಳಲ್ಲಿ, ಜನಪದರಿಂದಲೂ, ಆದಿವಾಸಿಗಳಿಂದಲೂ ಪ್ರಪಂಚದಲ್ಲಿ ಅಲ್ಲಲ್ಲಿ ಪ್ರಜಜನಿಯಾದ ಮಾತೃದೇವತೆಯ ಆರಾಧನೆಯ ರೂಪದಲ್ಲಿ ಇಂದಿಗೂ ನಡೆಯುತ್ತಿವೆ. ಶಿಷ್ಟರಲ್ಲಿ ದೇವಳಗಳಲ್ಲಿ ಚೌರಿ, ಚಾಮರಗಳನ್ನು ದೇವರಿಗೆ ಬೀಸುತ್ತಾ, ಬಹಳ ಮೃದು ಮಧುರವಾಗಿ ವರ್ತುಲಾಕಾರವಾಗಿ ದೇವಸ್ಥಾನದ ರಂಗಭೋಗದ ನೃತ್ಯಾಂಗಣದಲ್ಲಿ ದೇವದಾಸಿಯರೂ, ನೃತ್ಯಗಾರ್ತಿಯರೂ ನರ್ತಿಸುತ್ತಿದ್ದರೆಂದು ತೋರುತ್ತದೆ. ಈ ಯಕ್ಷಿಣಿ, ಜಕ್ಕಿಣಿ, ಜಕ್ಕಡೀ ಇತ್ಯಾದಿ ಹೆಸರುಗಳನ್ನು ಹೊಂದಿದ ನೃತ್ಯದಲ್ಲೂ ನಾಲ್ಕು ಬಗೆಯಾಗಿತ್ತೆಂದು ತೋರುತ್ತದೆ. ಮೊದಲನೆಯದು ಈಗ ತಾನೆ ಮೇಲೆ ಹೇಳಿದಂತೆ ಮೃದುವಾದ ವಾದ್ಯವೃಂದ ಸಂಗೀತದಲ್ಲಿ ವರ್ತುಲಾಕಾರವಾಗಿ ಸುತ್ತುವರಿದು ಭ್ರಮರೀಗಳನ್ನು ಮಾಡುತ್ತ ಕೈ ಬೀಸುತ್ತಾ, ಕರವಸ್ತ್ರದಂತಹ ವಸ್ತ್ರಗಳನ್ನು ಒಂದು ಕೈಯಲ್ಲಿ ಅಥವಾ ಎರಡೂ ಕೈಗಳಲ್ಲಿ ಬೀಸುತ್ತಲೋ, ಅಥವಾ ಉದ್ದವಾದ ತೆಳು ಉತ್ತರೀಯವನ್ನು ಬಿಡಿಸಿ ಎರಡು ಕೈಗಳಲ್ಲೂ ಹಿಡಿದು ತಾವೇ ಗತಿ ಲಯಗಳನ್ನು, ಹೆಜ್ಜೆಯನ್ನೂ ಬದಲಿಸುತ್ತ ಬಳಕುತ್ತ ನರ್ತಿಸುತ್ತಲೋ ಅಥವಾ ಒಂದು ಕೈಯಲ್ಲಿ ಚಾಮರ ಹಾಗೂ ಇನ್ನೊಂದು ಕೈಯಲ್ಲಿ ತಮ್ಮ ಉಡುಗೆಯ ಅಂಚನ್ನು ಹಿಡಿದು ನರ್ತಿಸುತ್ತಿದ್ದರೆಂದು ತೋರುತ್ತದೆ. ಅನೇಕ ದೇವಸ್ಥಾನಗಳಲ್ಲಿ ದೇವದಾಸಿಯರು ಗರ್ಭಗುಡಿಯ ಒಳಗೇ ಹೋಗಿ ದೇವರನ್ನು ಮುಟ್ಟಿ ನಗ್ನರಾಗಿ ನರ್ತಿಸುತ್ತಿದ್ದರೆಂದೂ, ಆ ಸಮಯದಲ್ಲಿ ದೇವರ ಬಳಿ ಹೋಗಲು ಅರ್ಚಕರಿಗೂ ಸಾಧ್ಯವಿರಲಿಲ್ಲವೆಂಬ ನಿಯಮಗಳಿತ್ತು. ಇಂತಹ ದೇವದಾಸಿಯರು ದೇವರಿಗೆ ಸೇವೆ ಮಾಡಲು ಬೇರೆ ಬೇರೆ ರಾಜ್ಯಗಳಲ್ಲಿ ಆಯಾ ರಾಜ್ಯದ ನಂಬಿಕೆಗಳೂ,ಪೂಜಾ ಪರಂಪರೆಗಳಿಗೂ ತಕ್ಕಂತೆ ಶಾಸ್ತ್ರೀಯ ನೃತ್ಯವನ್ನು ಕಲಿತು ನರ್ತಿಸುತ್ತಿದ್ದರು. ರಾಜ ನರ್ತಕಿಯರು ರಾಜನ ಆಸ್ಥಾನದಲ್ಲಿ ಅಲ್ಲಿ ಕವಿಗಳಿಂದ ರಚಿತವಾದ ಅನೇಕ ರೀತಿಯ ನಿಬದ್ಧ ಹಾಗೂ ಅನಿಬದ್ಧ ಪ್ರಬಂಧಗಳಿಗೆ ಶಾಸ್ತ್ರೀಯವಾಗಿ ನರ್ತಿಸುತ್ತಿದ್ದರು. ಇದನ್ನು ಅನೇಕ ಕಾವ್ಯಗಳಲ್ಲಿ ನೋಡಬಹುದು. ಇಂತಹವು ದೇವಾಲಯಗಳಲ್ಲೂ ನರ್ತಿಸಲ್ಪಡುತ್ತಿದ್ದವು. ಇಂತಹ ಶಾಸ್ತ್ರೀಯ ನೃತ್ಯಕ್ಕೆ ಆಂಧ್ರದ ಜಕ್ಕಿಣಿ ನೃತ್ಯವು ಒಂದು ಉತ್ತಮ ಉದಾಹರಣೆ. ಎರಡನೇ ಸ್ತರದಲ್ಲಿ ತಮ್ಮನ್ನು ದೇವದಾಸಿಯರೆಂದು ಕರೆದುಕೊಂಡ ಪಂಗಡವು (ಇವರಿಗೆ ಮಾತಂಗಿ, ಬಸವಿ ಇತ್ಯಾದಿ ಅನೇಕ ಹೆಸರುಗಳು ಆಯಾ ದೇಶಾಚಾರಗಳನ್ನು ಹೊಂದಿ ಇವೆ) ಅನೇಕ ರೀತಿಯ, ದೇವ ದೇವಿಯರಾಗಿ ಮಾರ್ಪಾಡುಗೊಂಡ ಯಕ್ಷಿಣಿಯರನ್ನು ಬೇವಿನ ಸೊಪ್ಪನ್ನೋ ಅಥವಾ ಬೇರೆ ಔಷಧೀಯ ಸೊಪ್ಪಿನ ಕಂತೆಯನ್ನೋ ಎರಡು ಕೈಯಲ್ಲೋ, ಒಂದೇ ಕೈಯಲ್ಲೋ ಬೀಸುತ್ತ, ತಲೆಯ ಮೇಲೆ ನೀರಿನ ಕುಂಭಗಳನ್ನಿಟ್ಟು, ಕೈಯಲ್ಲಿ ಕತ್ತಿ ಇತ್ಯಾದಿ ಆಯುಧಗಳನ್ನು ಹಿಡಿದುಕೊಂಡು, ಲಯವಾದ್ಯಗಳ ಲಯಕ್ಕೆ ನರ್ತಿಸಿ ಮಾತೃದೇವತೆಯನ್ನು, ನಾಗದೇವತೆಗಳನ್ನೂ ಆರಾಧಿಸಿದರು, ಇಂದಿಗೂ ಆರಾಧಿಸುತ್ತಿದ್ದಾರೆ. ಈ ನರ್ತನದಲ್ಲಿ ಶಾಸ್ತ್ರೀಯ ನೃತ್ಯವು ಹೇಳುವ ಯಾವುದೇ ಆಂಗಿಕ, ವಾಚಿಕ, ಸಾತ್ವಿಕಾಭಿನಯಗಳೋ ಅಡವುಗಳೋ ಇರುವುದಿಲ್ಲ. ಆದರೆ ಈ ಸ್ತರದ ಜನಪದರಲ್ಲಿಯೂ ಈ ರೀತಿಯಾಗಿ ದೇವರ ಸೇವೆ ಮಾಡುವ ಹೆಣ್ಣು ಮಕ್ಕಳಿಗೆ ಬಹುವಾದ ಅಭ್ಯಾಸವೂ, ಶಕ್ತಿಯೂ, ತರಬೇತಿಯೂ ಬೇಕೇ ಬೇಕು. ಇದನ್ನು ತಪಸ್ಸಿನಂತೆ ಮಾಡುತ್ತಾರೆ. ಇಂತಹ ಸ್ತ್ರೀಯರಿಗೆ ಅಪಾರವಾದ ಗೌರವ, ಮರ್ಯಾದೆಗಳಿವೆ. ಇಂತಹ ಅನೇಕ ಪುಜಾರಿಣಿಯರಲ್ಲಿ ಬಹಳ ಶ್ರದ್ಧೆಯೂ ಭಕ್ತಿಯೂ ಇರುತ್ತವೆ. ಜಕ್ಕಿಣಿ ನೃತ್ಯವು ಜನಪದರಲ್ಲಿ ಈ ರೀತಿಯಾಗಿ ದೇವತಾರಾಧನೆಯಲ್ಲಿ ನರ್ತಿಸಲ್ಪಡುತ್ತವೆ.

ಮೂರನೇ ಸ್ತರದಲ್ಲಿ, ಆದಿವಾಸಿಗಳ ತರಹದ ಜನರಲ್ಲಿಯೂ ಯಕ್ಷಿಣಿಯರ ಆರಾಧನೆಯಲ್ಲಿ ಔಷಧೀಯ ವೃಕ್ಷದ ಸೊಪ್ಪನ್ನು ಹಿಡಿದು ಬಹಳ ಕಠಿಣವಾದ ದೇಹಕ್ಕೆ ಶಿಕ್ಷೆಯನ್ನು ಮಾಡಿಕೊಳ್ಳುವಂತಹ ಆರಾಧನೆಗಳಿರುತ್ತವೆ. ಇವರೂ ಲಯವಾದ್ಯಗಳಿಗೆ ನರ್ತಿಸುತ್ತಾರೆ. ಆದರದು ಶಾಸ್ತ್ರೀಯ ಅಥವಾ ಉಪಶಾಸ್ತ್ರೀಯ ನೃತ್ಯಕ್ಕೆ ಸಂಬಂಧಿಸಿದ್ದಲ್ಲ. ಇಂದು ಅನೇಕಾನೇಕ ಜನಪದದಲ್ಲಿರುವ, ಆದಿವಾಸಿಗಳಲ್ಲಿರುವ ಈ ಯಕ್ಷಿಣಿ ನೃತ್ಯಗಳು ಉಳಿದುಕೊಂಡಿವೆ. ಆದರೆ ಶಿಷ್ಟವಾಗಿ, ಶಾಸ್ತ್ರೀಯವಾಗಿ, ದೇವಸ್ಥಾನಗಳಲ್ಲಿ ಶುದ್ಧ ನೃತ್ಯ ಸೇವೆಯನ್ನು ಮಾಡುತ್ತಿದ್ದ ನೃತ್ಯಗಳೂ, ರಾಜರ ಆಸ್ಥಾನಗಳಲ್ಲಿ ನರ್ತಿಸುತ್ತಿದ್ದ ನರ್ತಕಿಯರೂ, ದೇವಾಲಯಗಳೂ ನಾಶವಾಗಿ, ಅವರನ್ನು ಪೋಷಿಸುತ್ತಿದ್ದ ರಾಜಾಶ್ರಯವೂ ಇಲ್ಲವಾಗಿ, ಹೊಟ್ಟೆ ಪಾಡಿಗಾಗಿಯೋ, ಅಥವಾ ತಮ್ಮನ್ನು ತಾವು ರಕ್ಷಿಸಿಕೊಳ್ಳಲೆಂದೋ 'ನಾಚ್' ಗಳಾಗಿ ಬದಲಾಗಬೇಕಾಗಿ ಬಂದದ್ದು ದೇಶದ ನಾಟ್ಯಪರಂಪರೆಗೇ ದುರಂತವಾಗಿ ಪರಿಣಮಿಸಿತು.

Copyright protected article. Infringement of copyright is punishable offence. No part of this publication is allowed for copy or reproduction of material.

Copyright protected article. Infringement of copyright is punishable offence. No part of this publication allowed for copy or reproduction of material.

ಇಸ್ಲಾಂ ಹಾಗೂ ಕ್ರಿಶ್ಚಿಯಾನಿಟಿಯು ಆಕ್ರಮಿಸಿಕೊಂಡ ಎಲ್ಲ ದೇಶಗಳೂ ತಮ್ಮ ಪ್ರಾಚೀನವಾದ ಪಾರಂಪರಿಕ, ಸಾಂಪ್ರದಾಯಿಕ ಆಚರಣೆಗಳನ್ನೂ, ಸಂಸ್ಕೃತಿಗಳನ್ನೂ, ಕಲೆಗಳ ಜೊತೆಗೆ ಮಾತೃದೇವತಾರಾಧನೆಯ (ಯಕ್ಷಿಣಿ) ಸಂಸ್ಕೃತಿಯನ್ನೂ ಬಹುತೇಕವಾಗಿ ಕಳೆದುಕೊಂಡವು. ಇಂತಹ ದೇಶಗಳಲ್ಲಿ ಗ್ರೀಸ್, ಪರ್ಶಿಯಾ ಪೂರ್ಣವಾಗಿ ಮತ್ತು ಭಾರತವು ಆಂಶಿಕವಾಗಿ ಸೇರಿದೆ ಎಂದು ಹೇಳಲೇ ಬೇಕಾಗಿದೆ. ಸಂಗೀತವು ತನ್ನ ಶಾಸ್ತ್ರೀಯ ಸ್ವರೂಪವನ್ನೇನೋ ಕಾಲ ದೇಶಗಳಿಗೆ ತಕ್ಕಂತೆ ಬದಲಿಸಿಕೊಂಡು ಉಳಿದುಕೊಂಡಿತು ನಿಜ. ಆದರೆ ನೃತ್ಯ ಪ್ರಪಂಚಕ್ಕೆ ತುಂಬಲಾರದ ನಷ್ಟವು ಉಂಟಾದದ್ದು ದೇವದಾಸಿಗಳ ನಾಶದಿಂದ ಎಂದು ಹೇಳಲೇ ಬೇಕಾಗಿದೆ.
ಹೀಗೇಕೆ? ದೇವದಾಸಿಯರ ಪ್ರಾಶಸ್ತ್ಯವೇನು?..... ಎಂಬ ಯಕ್ಷಪ್ರಶ್ನೆಗೆ ಕೆಳಕಂಡಂತೆ ಚಿಂತನೆ ನಡೆಸಿ ಉತ್ತರವನ್ನು ಹುಡುಕಬಹುದು.

"ದೇವದಾಸಿ ಪದ್ಧತಿಯ ಬಗ್ಗೆ ಒಂದು ಅವಲೋಕನ"

ದೇವದಾಸಿ ಎಂದರೆ ಹೆಸರೇ ಹೇಳುವಂತೆ ದೈವದ ದಾಸಿ , ದೇವರ ಸೇವಕಿ. ಇದು ನಮ್ಮ ದೇಶದಲ್ಲಿ ಕೆಲವು ಪಂಗಡಗಳಲ್ಲಿ ಕಂಡು ಬರುವ ಬ್ರಹ್ಮಚಾರಿಣಿಯರಂತೆ, ಯೋಗಿನಿಯರಂತೆ ಬಾಳಿ ದೇವಸ್ಥಾನಗಳಲ್ಲಿ ನೃತ್ಯಸೇವೆ ಮಾಡಿ ಬದುಕುತ್ತಿದ್ದ ಒಂದು ಸ್ತ್ರೀ ಪಂಗಡ. ವೇದಗಳ ಕಾಲದಲ್ಲಿ ಕುಂಭದಾಸಿಯರು ಯಾಗಭೂಮಿಯಲ್ಲಿ ನರ್ತಿಸದಿದ್ದರೆ ಯಜ್ಞಗಳು ಪೂರ್ಣವಾಗುತ್ತಿರಲಿಲ್ಲ. ಇದು ವೇದಾಗಮಗಳ ಪ್ರೇರಿತವಾಗಿ ಹುಟ್ಟಿಕೊಂಡ ಪದ್ಧತಿಯೆಂದು ಹಲವರು ಅಭಿಪ್ರಾಯಪಡುತ್ತಾರೆ. ಈ ಪದ್ದತಿಗಳು ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ವ್ಯತ್ಯಾಸಗಳಾದವು. ಕರ್ನಾಟಕ ರಾಜ್ಯದಲ್ಲಿ ಜೋಗತಿ ಎಂದು ಕರೆಯುತ್ತಾರೆ (ಸವದತ್ತಿ ಎಲ್ಲಮ್ಮ ಕ್ಷೇತ್ರದಲ್ಲಿ), ಇವರಲ್ಲಿ ಗರತಿ, ಬಸವಿ, ಹಾಗೂ ಜೋಗತಿಯೆಂಬ ಮುತ್ತು ಧರಿಸಿ ದೀಕ್ಷೆಯನ್ನು ವಹಿಸುವ ಮೂರು ವಿಧಗಳಿದ್ದಾರೆ. ಗರತಿ ಮುತ್ತು ಧರಿಸುವವರು ಮದುವೆಯಾಗಬಹುದು. ಇದಕ್ಕೆ ಯಾವುದೇ ಜಾತಿ, ವರ್ಗಗಳ ನಿರ್ಬಂಧನೆಗಳಿಲ್ಲ. ಸೂಳೆ ಮುತ್ತುಗಳನ್ನು ಧರಿಸುವವರು ಕೆಂಪು ಮುತ್ತುಗಳನ್ನು ಧರಿಸಿ ಬಸವಿಯರಾಗುತ್ತಾರೆ. ಮಂಗಳಾರತಿ ಜೋಗತಿಯರು ದೇವಾಲಯದ ನಿರ್ವಹಣೆ, ಮಂಗಳಾರತಿಯನ್ನು ಹಿಡಿಯುವುದು ಇತ್ಯಾದಿಗಳನ್ನು ನಿರ್ವಹಣೆ ಮಾಡುತ್ತ ದೇವಾಲಯಗಳಲ್ಲಿಯೇ ಇರುತ್ತಾರೆ. ಆಂಧ್ರದವರು ಮತ್ತು ಮಹಾರಾಷ್ಟ್ರದವರು ಇದನ್ನು ಮಾತಂಗಿ ದೀಕ್ಷೆ ಎನ್ನುತ್ತಾರೆ, ಕರ್ನಾಟಕರಾಜ್ಯದ ಕೆಲವೆಡೆಗಳಲ್ಲಿಯೂ ಮಾತಂಗಿ ದೀಕ್ಷೆ ಎನ್ನುತ್ತಾರೆ. ಗೋವಾ, ಕೇರಳ ಹಾಗೂ ಆಂಧ್ರದ ಹಲವೆಡೆಗಳಲ್ಲಿ ಕಲಾವಂಥಿನ್, ನೇಪಾಳದಲ್ಲಿ ಪರಮೇಶ್ವರಾಯಿನಿ ಹಾಗೂ ಡ್ಯೂಕಿ, ಒರಿಸ್ಸಾದಲ್ಲಿ ಮಾಹರಿ ಎಂದು ಹಲವೆಡೆ ಹಲವು ರೀತಿಯಾದ ಹೆಸರುಗಳು ಇವೆ. ಇದರಲ್ಲಿ ಮಾಹರಿಯರು ನುರಿತ ನೃತ್ಯ ಕಲಾಕಾರರಾಗಿದ್ದವರು. ಡ್ಯೂಕಿಗಳ ಬಗ್ಗೆ ರೊಬೈನ್ನ್ ಎ. ಲಾಕ್ಕೆ(Robynne A. Locke) ಯವರು ಹೀಗೆ ಹೇಳುತ್ತಾರೆ--
In the past, teenage girls dedicated to temples occupied a high status in society. Elaborate public ceremonies and feasting occurred to legitimate their dedication to the temple and marriage to God, and their role as a caretaker of temple was valued and respected. For their service, women were granted a parcel of temple property and accumulated wealth through donations to God.

ವೇದ, ಶಾಕ್ತ, ಆಗಮಗಳ ನಿಯಮಗಳಲ್ಲಿ ದೇವರನ್ನು ತೃಪ್ತಿಪಡಿಸುವ ವಿಧಾನಗಳಲ್ಲಿ ಸಂಗೀತ ಮತ್ತು ನೃತ್ಯ ಎರಡು ಪ್ರಮುಖವಾಗಿವೆ . ಈ ಕಾರಣಗಳಿಂದ ದೇವಾಲಯದಲ್ಲಿ ನರ್ತಕಿಯರಿಗೆ ಸ್ಥಾನವನ್ನು ನೀಡಿದ್ದು, ನಿತ್ಯ ನೈಮಿತ್ತಿಕ, ಹಬ್ಬ ಹರಿದಿನಗಳಲ್ಲಿ ನರ್ತನ ಮಾಡುತ್ತಿದ್ದುದರಿಂದ ಅಂದು ದೇವದಾಸಿಯರು ನರ್ತಕಿಯರೂ ಸಹ ಆಗಿದ್ದರು. ಕರ್ನಾಟಕ, ಆಂಧ್ರ, ಕೇರಳ, ತಮಿಳುನಾಡುಗಳ ದೇವಾಲಯಗಳಲ್ಲಿ ದೇವದಾಸಿಯರು ನೃತ್ಯ ಮಾಡಲು ದೇವಾಲಯದ ಹೊರ ಹಾಗೂ ಒಳಅಂಗಣಗಳಲ್ಲಿ ನೃತ್ಯವೇದಿಕೆಗಳು ಕಾಣಸಿಗುತ್ತವೆ. ದೇವದಾಸಿಯಾಗುವ ಕನ್ಯೆಯು ಹಲವಾರು ಪರೀಕ್ಷೆಗಳನ್ನು ಎದುರಿಸಿ ದೀಕ್ಷೆ ತೆಗೆದುಕೊಳ್ಳಬೇಕಿರುತ್ತಿತ್ತು. ತಲೆಯ ಮೇಲೆ ಹಲವು ಕೊಡ / ಬಿಂದಿಗೆಗಳನ್ನು ಜೋಡಿಸಿಟ್ಟುಕೊಂಡು ನಡೆಯುವುದು. ಕೆಂಡದ ಮೇಲೆ ವೇಗವಾಗಿ ನಡೆಯುವುದು , ಅಲ್ಲದೆ ಆಕೆಯ ದೈಹಿಕ ಸಾಮರ್ಥ್ಯ ಪರೀಕ್ಷೆಗಾಗಿ ಬಣವೆ ಮೆದೆಯನ್ನು ಹಾರಿ ಹೋಗುವುದು , ನಾಗ ಬೆತ್ತ ಹಿಡಿದು ಹಾರುವುದು, ಉದ್ದನೆಯ ಬಿದಿರಿನ ಕೋಲು ಹಿಡಿದು ಜಿಗಿಯುವುದು (ಗಣೆ) ಈ ರೀತಿಯಾದ ಪರೀಕ್ಷೆಗಳನ್ನೊಡ್ಡಿದ ನಂತರ ಅದರಲ್ಲಿ ಯಾರು ಸೂಕ್ತವೆನಿಸುವರೋ ಅವರನ್ನು ಮಾತ್ರ ಆಯ್ಕೆ ಮಾಡುತ್ತಿದ್ದರು ಅಥವಾ ಸಣ್ಣ ವಯಸ್ಸಿನಲ್ಲೇ ಅವರನ್ನು ಆಯ್ಕೆ ಮಾಡಿ ಹಿರಿಯ ದೇವದಾಸಿಯರು ಶಿಕ್ಷಣವನ್ನು ನೀಡುತ್ತಿದ್ದರು. ನಂತರ ಮುತ್ತು ಕಟ್ಟಿ / ಮಣಿಗಳ ಸರವನ್ನು ಹಾಕಿ ಮುಖ್ಯ ಗುರುವಿನಿಂದ ಮಂತ್ರೋಪದೇಶ , ಮಂಡಲ ಹಾಕುವ ವಿದ್ಯೆ , ಮೋಡಿ ಎದುರಿಸುವುದು ಮುಂತಾದ ವಿದ್ಯೆಗಳ ಉಪದೇಶಗಳನ್ನೂ ದೇವದಾಸಿಯರು ಸೂಕ್ತ ಗುರುಗಳಿಂದ ಪಡೆದುಕೊಳ್ಳುತ್ತಿದ್ದರು.

Copyright protected article. Infringement of copyright is punishable offence. No part of this publication is allowed fo reproduction of material.

Copyright protected article. Infringement of copyright is punishable of

ಮಾಜಿ ಅಥವಾ ವಯಸ್ಸಾಗಿರುವ ದೇವದಾಸಿಯ ಸೇವೆ ಮಾಡುವುದೂ ಸಹ ಇನ್ನು ಮುಂಬರುವ ದೇವದಾಸಿಯ ಜವಾಬ್ದಾರಿಯಾಗಿತ್ತು. ಹಿರಿಯ ಪ್ರಾಯದ ದೇವದಾಸಿಯರು ನೃತ್ಯ ಪ್ರಕಾರವನ್ನು ಹೊಸದಾಗಿ ಬಂದಿದ್ದ ದೇವದಾಸಿಗೆ ಬೋಧಿಸಿ ನರ್ತನವನ್ನೂ, ದೇವಾಲಯದ ವಿಧಿವಿಧಾನಗಳನ್ನೂ ಕಲಿಸುತ್ತಿದ್ದರು. ಹೀಗೆ ಆಯ್ಕೆಯಾದ ದೇವದಾಸಿ ಕೊನೆಯವರೆಗೂ ಕನ್ಯೆಯಾಗಿಯೇ ಉಳಿಯಬೇಕಿತ್ತು .
ದೇವದಾಸಿಗೆ ಎಷ್ಟು ಮಹತ್ವವಿತ್ತೆಂದರೆ ಅರ್ಚಕ ಹಾಗೂ ಪುರೋಹಿತನಿಗಿಂತಲೂ ಮಿಗಿಲಾದ ಆಕೆಯನ್ನು ಯೋಗಿನಿ ಎಂದು ಭಾವಿಸಿ ಜನರು ಗುರು ಸ್ವರೂಪದಲ್ಲಿ ನೋಡುತ್ತಿದ್ದರು. ಯಾರಾದರೂ ವಾಮಾಚಾರದಂತಹ ತೊಂದರೆಗೀಡಾಗಿದ್ದರೆ ಅದನ್ನು ಪರಿಹರಿಸಿಕೊಳ್ಳಲು ದೇವದಾಸಿಯರೆಡೆ ಬರುತ್ತಿದ್ದರು. ವಯಸ್ಸಾದ ದೇವದಾಸಿಯರನ್ನು ಕಿರಿಯ ದೇವದಾಸಿಯರು ಜವಾಬ್ದಾರಿಯುತವಾಗಿ ಶುಶ್ರೂಶೆ ಮಾಡಬೇಕಾಗಿತ್ತು.

ತಮಿಳುನಾಡಿನಲ್ಲಿ 7 ರಿಂದ 13 ನೆಯ ಶತಮಾನದವರೆಗೂ ಪಲ್ಲವ, ಚೋಳ, ಪಾಂಡ್ಯರ ಕಾಲದಲ್ಲಿ ದೊಡ್ಡ ದೇವಾಲಯಗಳಲ್ಲಿ ದೇವದಾಸಿಯರೂ, ತಂಜಾವೂರಿನ ರಾಜರ ಆಸ್ಥಾನಗಳಲ್ಲಿ ರಾಜದಾಸಿಯರೂ ಇದ್ದರು. ತಮಿಳುನಾಡಿನ ದೇವದಾಸಿಯರು ದೇವರಿಗೆ ರಥೋತ್ಸವದ ಕಾಲದಲ್ಲಿ ಚಾಮರಗಳನ್ನು ಬೀಸುತ್ತ ನರ್ತಿಸುತ್ತಿದ್ದರು. ಇದು ಮರಾಠ ರಾಜರ ಆಳ್ವಿಕೆಯಲ್ಲಿಯೂ ಮುಂದುವರೆಯಿತು. ನಂತರ ಬ್ರಿಟಿಷರ ಕಾಲದಲ್ಲಿ ತಮ್ಮ ರಾಜ್ಯಭಾರವನ್ನು ಮಾಡುವ ಅಧಿಕಾರವನ್ನು ಕಳೆದುಕೊಂಡ ತಂಜಾವೂರು, ಮೈಸೂರು ಅರಸರಂತಹವರು ಕಲಾಪೋಷಣೆಯತ್ತ ತಮ್ಮ ಗಮನವನ್ನು ಇನ್ನಷ್ಟು ಹೆಚ್ಚಿಸಿದರು.

ಆದರೆ ಮುಘಲರ, ಬ್ರಿಟಿಷರ ಆಡಳಿತದ ದಿನಗಳಲ್ಲಿ ಈ ಆಡಳಿತಗಾರರಿಗಾಗಿ ದೇವದಾಸಿಯರು ಕೇವಲ ಮನೋರಂಜನೆಗಾಗಿ ಹಾಗೂ ದೈಹಿಕ ಆಮಿಷಗಳಿಗೆ ಮಾತ್ರ ನೃತ್ಯ ಮಾಡಲು ಮಾತ್ರ ಸೀಮಿತವಾಗಿದ್ದಲ್ಲದೆ, ಜನಕ್ಕೆ ಬಡತನವು ಹೆಚ್ಚಿ ಹೆಣ್ಣುಮಕ್ಕಳನ್ನು ರಕ್ಷಿಸಲಾಗದೆ, ದೇವರಿಗೆ ಬಸವಿ ದೀಕ್ಷೆಗೆ ಹರಕೆ ಬಿಡುವವರೂ ಹೆಚ್ಚಿ, ಕಲೆಯನ್ನು ಪೋಷಿಸುವವರು ಇಲ್ಲದೆ ದೇವದಾಸಿಯರು ಕನ್ಯತ್ವವನ್ನು ಮುರಿದು ನಿಯೋಗ ಪದ್ದತಿಯ ರೀತಿಯಲ್ಲಿ ವಾದ್ಯಕಾರರ, ಪುರೋಹಿತರ ಅರ್ಚಕರ ಸಖ್ಯ ಬೆಳೆಸಿ ಮಕ್ಕಳನ್ನು ಪಡೆದು ಅವರಿಗೆ ಮುತ್ತು ಕಟ್ಟಿ ಪರಂಪರೆಯನ್ನು ಮುಂದುವರಿಸುವ ಕ್ರಮವನ್ನು ಆರಂಭಿಸಿಕೊಂಡರು. ಕಾಲಕ್ರಮೇಣ ಇದು ಅನೇಕರು ವೇಶ್ಯಾವಾಟಿಕೆಗೆ ತಿರುಗಿ ದೇವದಾಸಿಯರೆಂದರೆ ಹಲವು ಗಂಡಂದಿರನ್ನು ಹೊಂದಿದವರು ಎಂಬ ಅನಿಷ್ಟ ಅಪಖ್ಯಾತಿಯನ್ನು ಪಡೆಯಿತು. ಒಂದು ಕಾಲದಲ್ಲಿ ಶ್ರೇಷ್ಠ ದೇವತಾ ಕಾರ್ಯಕ್ಕಾಗಿಯೇ ಮೀಸಲಾಗಿದ್ದ ನೃತ್ಯಪರಂಪರೆಯು ಕಾಲವೈರುಧ್ಯದಿಂದ ಹಾದಿ ತಪ್ಪಿ ಇಂದು ಕೆಲವೆಡೆ ಅನಿಷ್ಠ ರೀತಿಯಾಗಿ ಆಚರಿಸುವಂತಾಯಿತು. ಆಂಧ್ರದ ಕೆಲವು ಪಂಗಡಗಳೂ ಮತ್ತು ನೇಪಾಳದ ಕೆಲವೆಡೆಗಳಲ್ಲಿ ಮಾತ್ರ ದೇವದಾಸಿಯು ಯೋಗಿನಿಯಾಗಿ, ಪೂಜನೀಯವಾಗಿ ಉಳಿದಿದ್ದಾಳೆ. ಹೆಚ್ಚಿನ, ನಿಜವಾದ ಹಾನಿಯುಂಟಾದುದು ಮುಸ್ಲಿಂ, ಬ್ರಿಟಿಷ್ ಆಡಳಿತಗಾರರಿಂದ ಹಾಗೂ ಚರ್ಚ್ ಹಾಗೂ ಇಸ್ಲಾಂ ಮತೀಯ ಆಕ್ರಮಣ ಮತ್ತು ಮತಾಂತರಗಳಿಂದ ಎಂಬ ಸತ್ಯವನ್ನು ಹೇಳಲೇಬೇಕಾಗಿದೆ.

ಭಾರತದಲ್ಲಿ ಚರಿತ್ರೆ ಪೂರ್ವದಿಂದಲೇ ಇದ್ದ ಆಯಾ ಜನಾಂಗಗಳ ನಂಬಿಕೆಯ ಆಚರಣೆಗಳಿಗೆ ಒಳಪಟ್ಟ ಮಾತೃದೇವತಾರಾಧನೆಯ ಪ್ರತೀಕವಾದ ಪ್ರಕೃತಿ ಆರಾಧನೆಗಳೂ, ಈ ಆರಾಧನೆಗೆ ಅವಶ್ಯವಾದ ಏಕಾಗ್ರತೆಯನ್ನು ನೀಡಲೂ, ಮನಃಸಂತೋಷಕ್ಕೂ, ರೋಗನಿವಾರಕಗಳಾಗಿಯೂ, ನಂತರ ವಿದ್ಯೆಗಾಗಿಯೂ, ಪ್ರತಿಭಾ ವಿನಿಮಯಕ್ಕಾಗಿಯೂ ಹುಟ್ಟಿಕೊಂಡ ಕಲೆಗಳು ವೇದಗಳ ಕಾಲದಲ್ಲಿ ವೈದಿಕ ಹಾಗೂ ಲೌಕಿಕ ಕಲೆಗಳಾಗಿ ಉನ್ನತಿಯನ್ನು ಹೊಂದಿದವು. ಅನೇಕ ಆಕ್ರಮಣಗಳು, ಸಂಪರ್ಕಗಳೂ ದೇಶ ಕಾಲಗಳಲ್ಲಿ ತಾತ್ಕಾಲಿಕ ಅಡೆತಡೆಗಳು ನಡೆದಿದ್ದರೂ, ಭಾರತೀಯ ರಾಜರಲ್ಲಿ ವೈಷಮ್ಯಗಳು ಇದ್ದರೂ, ಯುದ್ಧಗಳೇ ನಡೆದರೂ ಬೌದ್ಧ, ಜೈನ, ಶಾಕ್ತ, ಶೈವ, ವೈಷ್ಣವ, ಮಾಧ್ವ ಇತ್ಯಾದಿ ಅನೇಕ ಪಂಥಗಳೇ ದೇಶಗಳಲ್ಲಿ ಹುಟ್ಟಿದರೂ ಸಂಸ್ಕೃತಕ್ಕಾಗಲೀ, ಕಲೆಗಳಿಗಾಗಲೀ, ಇನ್ನಿತರ ವಿದ್ಯೆಗಳಿಗಾಗಲೀ ತೊಂದರೆಯುಂಟಾಗದೆ, ಪರಸ್ಪರವಾಗಿ ಕಲೆಗಳ ಹಾಗೂ, ವಿದ್ಯೆಗಳ ವಿನಿಮಯಗಳಿಂದಲೂ ದೊರೆಯುವ ರಾಜಾಶ್ರಯಗಳಿಂದಲೂ ಮೂಲರೂಪಗಳಲ್ಲಿ ಬದಲಾದರೂ, ಪರಸ್ಪರ ಸಮೃದ್ಧವಾದವು. ಆದರೆ 13ನೇ ಶತಮಾನದ ನಂತರದ ತುರುಕರ ಆಕ್ರಮಣದ ನಂತರ ಭಾರತದೇಶದಲ್ಲಿ ಕಲೆಗಳ ಹಾಗೂ ಶಾಸ್ತ್ರಗಳ ಕತ್ತಲೆಯುಗವೆಂತಲೇ ಹೇಳಬೇಕು. ತುರುಕರ ಆಕ್ರಮಣದಿಂದ ಕಲಾಪೋಷಕ ರಾಜರ ಆಳ್ವಿಕೆಗೆ, ಅನೇಕ ಸಾಂಸ್ಕೃತಿಕ ಕೇಂದ್ರಗಳಿಗೆ ಹಾನಿಯುಂಟಾಯಿತು. ಪೋಷಕಸ್ಥಾನಗಳಾದ ರಾಜರ ಆಸ್ಥಾನಗಳಲ್ಲಿ ಆಸ್ಥಾನನರ್ತಕಿಯರಿಗೂ, ದೇವಸ್ಥಾನಗಳ ನಾಶದಿಂದ ದೇವಸ್ಥಾನಗಳಲ್ಲಿ ಕಲೆಗಾಗಿ, ದೇವತಾರಾಧನೆಗಾಗಿ ಜೀವನವನ್ನೇ ಮುಡುಪಾಗಿಟ್ಟಿದ್ದ ದೇವದಾಸಿಯರಿಗೂ ಉನ್ನತ ಮಟ್ಟದ, ಗೌರವಯುಕ್ತ ಜೀವನಕ್ಕೆ ಧಕ್ಕೆಯೊದಗಿತು. ಈ ಕಲಾವಂತ ಸ್ತ್ರೀಯರು ಅನ್ಯಮತೀಯರ ದೈಹಿಕ ಭೋಗಕ್ಕಾಗಿ ಸಾಮೂಹಿಕವಾಗಿ ಬಲಾತ್ಕಾರದಿಂದ ಅನ್ಯಥಾ ವಿಧಿಯಿಲ್ಲದೆ ಬಲಿಯಾಗಿ ಮಾನವನ್ನೂ, ಗೌರವವನ್ನೂ, ಮೂಲವಿದ್ಯೆಯನ್ನೂ ಕಳೆದುಕೊಳ್ಳಬೇಕಾಯಿತು.

Copyright protected article. Infringement of copyright is punishable of

Copyright protected article. Infringement of copyright is punishable of

ವಿಜಯನಗರದಂತಹ ಸಾಮ್ರಾಜ್ಯಗಳು ಒಮ್ಮೆ ಎಲ್ಲ ರೀತಿಯ ಏಳ್ಗೆಗಳನ್ನು ತಂದರೂ ಅಂತಹ ಸಾಮ್ರಾಜ್ಯಗಳ ಅವನತಿಯಿಂದ ಪುನಃ ಇಂತಹುದೇ ದುಃಸ್ಥಿತಿಗೆ ರಾಜ್ಯಗಳು ಮರಳುತ್ತಿದ್ದವು. ಇಂತಹ ಸಮಯಗಳಲ್ಲಿ ವಿದ್ವಾಂಸರಾದ, ಪಂಡಿತರು ಮತಾಂತರವಾಗಿಯೋ ಅಥವಾ ತಲೆತಪ್ಪಿಸಿ ವಲಸೆಯೋ ಹೋಗಬೇಕಾದ ಪರಿಸ್ಥಿತಿಗಳು ಆಗಾಗ್ಗ ಬಂದೊದಗಿದವು. ಹೀನ ಪರಿಸ್ಥಿತಿಗಳು ಏರ್ಪಟ್ಟಂತಹ ಇಂತಹ ಕಾಲದಲ್ಲಿ ಅನೇಕಾನೇಕ ಶಾಸ್ತ್ರಗ್ರಂಥಗಳು ಆಕ್ರಮಣಕಾರರಿಂದ ನಾಶಗೊಂಡವು. ಉಳಿದ ಗ್ರಂಥಗಳು ಪುನಃ ಅದನ್ನು ಪ್ರತಿ ಮಾಡಿಸುವ ಆಶ್ರಯದಾತರಿಲ್ಲದೆ ನಾಶಗೊಂಡವು. ಅಳಿದುಳಿದದ್ದು ಜನರ ಮೌಢ್ಯದಿಂದಲೂ ಹಾನಿಗೊಳಪಟ್ಟವು. ರಾಜಗ್ರಂಥಭಂಡಾರಗಳಲ್ಲಿದ್ದ ಅನೇಕ ಗ್ರಂಥಗಳ ಮೂಲ ಪ್ರತಿಗಳನ್ನು ಅನೇಕ ವಿದೇಶಿಯರು ತಮ್ಮ ತಮ್ಮ ದೇಶಗಳಿಗೆ ಸಾಗಿಸಿ, ಇಂದು ನಮ್ಮ ದೇಶದ ಗ್ರಂಥಗಳನ್ನು ಇತರರ ದೇಶಗಳಲ್ಲಿ ಹುಡುಕುವ ಪರಿಸ್ಥಿತಿಯುಂಟಾಗಿದೆ! ಅನೇಕ ಶಿಲ್ಪಗಳಿಗೂ ಇದೇ ಪರಿಸ್ಥಿತಿಯುಂಟಾಗಿದೆ! ಇಂತಹ ಕಠಿಣತಮ ಕಾಲಗಳಲ್ಲಿ ಭಾರತೀಯರ ಎಲ್ಲ ಶೈಲಿಗಳ ಆಯಾ ಪ್ರಾದೇಶಿಕ ನೃತ್ಯಗಳನ್ನೂ ಶಾಸ್ತ್ರೀಯ ನೃತ್ಯಗಳನ್ನೂ ಅರಿತು, ದೇವಸ್ಥಾನಗಳಲ್ಲಿ ಪ್ರತಿನಿತ್ಯವೂ ರಂಗಭೋಗಗಳಾಗಿ ದೇವದಾಸಿಯರಿಂದ ನರ್ತಿಸಲ್ಪಡುತ್ತಿದ್ದ ನೃತ್ಯಪ್ರಕಾರಗಳಲ್ಲಿಯೂ, ಅವರ ಜೀವನ ಕ್ರಮಗಳಲ್ಲಿಯೂ ಬಹಳ ವ್ಯತ್ಯಯ, ವ್ಯತ್ಯಾಸಗಳುಂಟಾದವು.

ದೇವದಾಸಿಯರಲ್ಲಿ ಬಹು ವಿಧಗಳಿವೆ. ಅವರ ಹಳೆಯ ಫೋಟೋಗಳನ್ನು ಗಮನಿಸಿದಲ್ಲಿ ಅವರ ಆಭರಣಗಳೂ, ಮುಖ್ಯವಾಗಿ ಕಾಲ್ಗಡಗಗಳೂ ಶಿಲಾಬಾಲಿಕೆಯರ ಶಿಲ್ಪಗಳಿಗೆ ಬಹುವಾಗಿ ಹೋಲುವುದನ್ನು ಗಮನಿಸಬಹುದು. ಈಗಲೂ ಆಂಧ್ರದ ಯಲ್ಲಮ್ಮ ದೇವತೆಯನ್ನು ಪೂಜಿಸುವಂತಹ ಸಮಯದಲ್ಲಿ ಸ್ತ್ರೀ ಪುಜಾರಿಣಿಯರು ಇದೇ ರೀತಿಯ ಗೆಜ್ಜೆ, ಕಾಲ್ಗಡಗಗಳನ್ನು ಧರಿಸುತ್ತಾರೆ. ಲೇಖನಾಂತ್ಯದಲ್ಲಿ ನೀಡುವ ಈ ಎಲ್ಲಮ್ಮ ಪೂಜಾರಿಣಿಯ ಯೂ ಟ್ಯೂಬ್ ಲಿಂಕ್ ನ್ನು ನೋಡಿದಾಗ ನಿಜವಾದ ದೇವದಾಸಿಯರ ಸ್ಥಿತಿಗತಿಗಳೂ, ನಿಜವಾದ ಮಧ್ಯತಮ ದೇವದಾಸಿಯರ ಕಠಿಣ ಶಿಸ್ತಿನ, ಸಾಧನೆಗಳ ಜೀವನ ಕ್ರಮವು ಹೇಗಿದ್ದಿರಬಹುದೆಂಬ ಅರಿವು ಉಂಟಾಗುತ್ತದೆ. ಮೇಲ್ಕಟ್ಟದ ದೇವಸ್ಥಾನದ ದೇವದಾಸಿಯರು ಹಾಗೂ ರಾಜನರ್ತಕಿಯರು ಅತ್ಯಂತ ಕಠಿಣ ಪರಿಶ್ರಮ, ಸಾಧನೆಗಳೊಂದಿಗೆ ಸಂಸ್ಕೃತ, ಕಾವ್ಯ, ವ್ಯಾಕರಣ. ನಾಟ್ಯಶಾಸ್ತ್ರಗಳಲ್ಲಿಯೂ ಪ್ರವೀಣರಾಗಿರಬೇಕಾಗಿತ್ತು. ಪ್ರಾಚೀನದಲ್ಲಿ ದೇವರ ಯೋಗಿನಿಯರಂತಿದ್ದು ಪೂಜಾರಿಣಿಯರಾಗುತ್ತಿದ್ದ, ಸಮಾಜದಲ್ಲಿ ಬಹಳವಾದ ಗೌರವ ಹಾಗೂ ಉನ್ನತ ಸ್ಥಾನಗಳಿದ್ದ ಇವರು ಮುಸ್ಲಿಮರ ದಾಳಿಯ ಸ್ವಲ್ಪ ನಂತರದ ಕಾಲದಲ್ಲಿ ಒಬ್ಬ ಶ್ರೀಮಂತನನ್ನು ಮದುವೆಯಾಗಿ, ತಮ್ಮನ್ನು ವಿದ್ಯೆಯ ಸಾಧನೆಯಲ್ಲಿಯೇ ತೊಡಗಿಸಿಕೊಂಡು ಶ್ರೀಮಂತರಲ್ಲಿ ಹುಟ್ಟಿದ ತಮ್ಮ ಮಕ್ಕಳಿಗೂ ತಮ್ಮ ಸಂಗೀತ, ನೃತ್ಯ ಇತ್ಯಾದಿ ವಿದ್ಯೆಗಳನ್ನು ಹೇಳಿಕೊಡುತ್ತಿದ್ದರು. ಇಂತಹ ದೇವದಾಸಿಯರ ಪೋಷಕರು ಮನೆಯ ಸಂಸಾರವನ್ನು ನಡೆಸಲು ಬೇರೆ ಮದುವೆಯನ್ನು ಮಾಡಿಕೊಳ್ಳುವ ಪದ್ಧತಿ ಇತ್ತು.
ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಆರಂಭವಾದ ಮೇಲಂತೂ ದೇಶದ ನಾಟ್ಯ ಪದ್ಧತಿಗಳು ಸಮೂಲವಾಗಿಯೇ ನಾಶವಾಗಲ್ಪಡತೊಡಗಿದವು. ಭಾರತೀಯ ದೊರೆಗಳೆಲ್ಲ ತಮ್ಮ ಅಧಿಕಾರವನ್ನು ಕಳೆದುಕೊಂಡು ಬ್ರಿಟಿಷರ ಅಧೀನವಾದ ನಂತರ ದೇವಸ್ಥಾನಗಳೂ ತಮ್ಮ ಅಧಿಕಾರಗಳನ್ನೂ ಸಂಪತ್ತನ್ನೂ, ಪೋಷಕರನ್ನೂ ಕಳೆದುಕೊಂಡು ನಿಜವಾದ ದೇವದಾಸಿಯರು ಪಾರಂಪರಿಕವಾಗಿ ಅವರಿಗೆ ಸಲ್ಲುತ್ತಿದ್ದ ಆದಾಯಗಳನ್ನೂ ಆಶ್ರಯವನ್ನೂ ಕಳೆದುಕೊಂಡು ಹೀನಾಯವಾಗಿ ಕಷ್ಟಕ್ಕೀಡಾಗಬೇಕಾಯಿತು.

ಬ್ರಿಟಿಷರ ವಸಾಹತುಶಾಹಿ ಪಾಳಯದ ಸಮಯದಲ್ಲಿ ಸುಧಾರಣಾವಾದಿಗಳನೇಕರು ದೇವದಾಸಿಯರನ್ನು ವ್ಯಭಿಚಾರಿಗಳೆಂದು ಬಿಂಬಿಸಿ, ವೇಶ್ಯೆಯರೆಂದು ಪರಿಗಣಿಸಿ ದೇವದಾಸಿ ಪದ್ಧತಿಯನ್ನೇ ಕಾನೂನು ಬಾಹಿರವಾಗಿಸಲು ಯತ್ನಿಸಿದರು. ದೇವದಾಸಿಯರ ಕುರಿತು ಅವರು ನಡೆಸಿದ ವಿಚಾರ ಸರಣಿಗಳು ವಿದೇಶೀ ಸಂಸ್ಥೆಗಳಿಂದ ಆಯೋಜಿಸಲ್ಪಟ್ಟ ಸಂಘಟನೆಗಳಿಂದ ನಡೆದವು. ಬ್ರಿಟಿಷರಿಗೆ, ವೇಶ್ಯಾವಾಟಿಕೆಗಳು ಬೀದಿಯಲ್ಲಿ ನಡೆಸುತ್ತಿದ್ದ ನೃತ್ಯಗಳಿಗೂ ದೇವರ ಸೇವೆಗೆಂದೇ ತಮ್ಮ ಜೀವನವನ್ನು ಮುಡಿಪಾಗಿಟ್ಟ ದೇವದಾಸಿಯರಿಗೂ ವ್ಯತ್ಯಾಸವು ತಿಳಿಯದೆ ಹೋಯಿತು. ಬ್ರಿಟಿಷರೇ ಅವರ ಸೈನಿಕರಿಗಾಗಿ ದೇಶವ್ಯಾಪಿಯಾಗಿ ಕಾನೂನು ರೀತ್ಯವೇ ನಡೆಸುತ್ತಿದ್ದ ವೈಶ್ಯಾವಾಟಿಕೆಗಳಲ್ಲಿ ಈ ಬೀದಿ ನರ್ತಕಿಯರೂ ಸೇರಲ್ಪಟ್ಟರು. ಇಂತಹ ವೈಶ್ಯಾವಾಟಿಕೆಯಲ್ಲಿ ಗುಹ್ಯರೋಗಗಳೇ ಎಲ್ಲೆಲ್ಲೂ ವಿಜೃಂಭಿಸಲಾರತೊಡಗಿದ್ದವು. ಇಂತಹ ಕಾಲದಲ್ಲಿ ದೇವದಾಸಿಯರು ವೈಶ್ಯೆಯರಿಗೆ ಸಮೀಕರಿಸಲ್ಪಟ್ಟರು!

ಹೀಗೆ, ಮುಸ್ಲಿಮರ ದಾಳಿಗಳಿಂದ ಅನೇಕ ದೇವಾಲಯಗಳು ಮೊದಲು ಉತ್ತರ ಭಾರತ, ನಂತರ ದಕ್ಷಿಣ ಭಾರತಗಳಲ್ಲಿ ಕೆಡವಲ್ಪಟ್ಟು ನಾಶವಾಗಿ ದೇವದಾಸಿಯರ ಆರ್ಥಿಕ ಹಾಗೂ ಸಾಮಾಜಿಕ ಜೀವನದ ಸ್ಥಾನಮಾನಗಳು ಕುಸಿದು ನಾಶವಾದರೆ, ಬ್ರಿಟಿಷರ ಧಾರ್ಷ್ಟ್ಯ ಹಾಗೂ ಪೊಳ್ಳು ಕರುಣೆಗಳಿಂದಾಗಿ ಕೀಳುಸ್ತರದ, ನಿಜವಾಗಿಯೂ ಹೀನಾಯ ಸ್ಥಿತಿಯಲ್ಲಿದ್ದ ಹೆಣ್ಣುಮಕ್ಕಳ ಉದ್ಧಾರವಾಗುವುದರ ಬದಲು ವೈಶ್ಯೆಯರು ಉಳಿದು, ಭಾರತೀಯ ಸಕಲ ನೃತ್ಯ ಶೈಲಿ ಪರಂಪರೆಗಳ ಸಾಮ್ರಾಜ್ಯವೇ ಅಧೀನದಲ್ಲಿದ್ದ ದೇವದಾಸಿಯರ ಅಂತ್ಯವಾಗತೊಡಗಿದವು. ಇದರಿಂದಾಗಿ ಆಚರಣೆಯಲ್ಲಿದ್ದ ಆಯಾ ಪ್ರಾಂತ್ಯಗಳ ಶಾಸ್ತ್ರೀಯ ನೃತ್ಯಪ್ರಕಾರಗಳು ಹೇಳ ಹೆಸರಿಲ್ಲದೆ ಕಣ್ಮರೆಯಾದವು.

Copyright protected article. Infringement of copyright is punishable of

Copyright protected article. Infringement of copyright is punishable of

ಅನೇಕ ಸಂಪ್ರದಾಯಸ್ಥರು ದೇವಸಂಪ್ರೀತಿಗೆಂದು ಝಾಕಡೀ, ಗೋತಿ ಪುವಾ ಮುಂತಾದ ನೃತ್ಯ ಪದ್ಧತಿಗಳನ್ನು ದೇವಾಲಯಗಳಲ್ಲಿ ಉಳಿಸಲು ಬಾಲಕರಿಗೆ ಸ್ತ್ರೀವೇಷಗಳನ್ನು ಹಾಕಿ ದೇವಾಲಯಗಳಲ್ಲಿ ಈ ನರ್ತನ ಪದ್ಧತಿಗಳನ್ನು ಊರ್ಜಿತದಲ್ಲಿಡಲು ಯತ್ನಿಸಿದರು. ಇನ್ನೊಂದು ದೇವದಾಸಿಯರಿಗೆ ಮುಖ್ಯವಾಗಿ ಕುತ್ತು ತಂದ ವಿಷಯವೆಂದರೆ, ಕೆಳಸ್ತರದ ಜನರು ಮೂಢನಂಬಿಕೆಯಿಂದ ಬಸವಿ ಬಿಡುವ, ಹೆಣ್ಣು ಮಕ್ಕಳನ್ನು ಹಿಂಸಿಸುವ ಪ್ರವೃತ್ತಿಯಿಂದಾಗಿ, ಇಂತಹ ಶೋಷಣೆಯಿಂದ ತೊಂದರೆಗೀಡಾದ ಹೆಣ್ಣು ಮಕ್ಕಳು ಅವರಿಗೆ ಸಮಾಜದಲ್ಲಿ ಸ್ಥಾನಮಾನಗಳು ದೊರಕಲೆಂದು ತಮ್ಮನ್ನು ದೇವದಾಸಿಯರೆಂದು ಕರೆದುಕೊಂಡದ್ದು! (ಲೇಖನಾಂತ್ಯದಲ್ಲಿ ಕೆಲವು ದೇವದಾಸಿಯರ ಭಾವಚಿತ್ರಗಳ ಗೂಗಲ್ ಹಾಗೂ ಪಿಂಟರೆಸ್ಟ್ ಫೋಟೋಗಳ ಲಿಂಕ್ ಗಳನ್ನು ನೀಡಲಾಗಿದೆ. ಇದರಿಂದಾಗಿ ಬಸವಿ ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುತ್ತಿದ್ದ ಹೆಣ್ಣು ಮಕ್ಕಳಿಗೂ ದೇವದಾಸಿಯರ ಮಟ್ಟದಲ್ಲಿಯೂ ಇದ್ದ ವ್ಯತ್ಯಾಸವು ತಿಳಿಯುತ್ತದೆ.)
ಇಂತಹ ಅನೇಕ ಕಾರಣಗಳಿಂದ ಕಾಲಕ್ರಮೇಣದಲ್ಲಿ ನಿಜವಾದ ದೇವದಾಸಿಯರಿಗೂ ಇಂತಹವರಿಗೂ ವ್ಯತ್ಯಾಸವು ತಿಳಿಯದೆ ಹೋಯಿತು. ದೇವದಾಸಿಯರು ತೀರಿಹೋದರೆ ಅವರು ಸೇವೆ ಮಾಡುತ್ತಿದ್ದ ದೇವಸ್ಥಾನದಲ್ಲಿ, ದೇವರ ವಸ್ತ್ರವನ್ನು ಹೊದಿಸಿಯೇ ಅಂತಿಮ ಸಂಸ್ಕಾರದ ಕೆಲಸಗಳನ್ನು ಮುಂದುವರೆಸುತ್ತಿದ್ದರು! ಅವರ ಅಂತಿಮ ಸಂಸ್ಕಾರಗಳೆಲ್ಲ ಮುಗಿಯುವವರೆಗೆ, ಆ ದೇವಸ್ಥಾನದಲ್ಲಿ ದೇವರ ಪೂಜೆಯನ್ನೇ ಮಾಡುತ್ತಿರಲಿಲ್ಲ!(ತ್ಯಾಗರಾಜರ ಸಮಾಧಿಗಾಗಿ ತನ್ನ ಸರ್ವಸ್ವವನ್ನೂ ತ್ಯಾಗ ಮಾಡಿದ ಮಹಾನ್ ಗಾಯಕಿ ನಾಗರತ್ನಮ್ಮನವರು ತೀರಿಹೋದಾಗ ಅವರಿಗೆ ಇದೇ ರೀತಿಯ ಗೌರವ ಸಂದದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಕಾವ್ಯಋಷಿಗಳಾಗಿದ್ದ ಡಿ. ವಿ. ಜಿ. ಯವರು ಆಕೆಯನ್ನು 'ತ್ಯಾಗರತ್ನ' ಎಂದು ಕೊಂಡಾಡಿದ್ದಾರೆ.)

ಆದರೆ ಆ ಕಾಲದ ಅನೇಕ ಸಮಾಜ ಸುಧಾರಣಾಕಾರರೂ, ದೇವದಾಸಿ ಪದ್ಧತಿಯನ್ನು ನಿರ್ಮೂಲ ಮಾಡಲು ಹೊರಟವರೂ ಇಂತಹ ವಿಷಯಗಳ ಬಗ್ಗೆ ಅಧ್ಯಯನವನ್ನು ನಡೆಸದೆ ದೇವದಾಸಿಯರನ್ನು ವೇಶ್ಯೆಯರೆಂದೇ ಪರಿಗಣಿಸಿ ಕ್ರಿ. ಶ. 1882 ರಲ್ಲಿ ನೃತ್ಯ ವಿರೋಧಿ ಆಂದೋಲನವನ್ನೂ (anti - nautch movement), ದೇವ ಸಮರ್ಪಣೆ ವಿರೋಧಿ ಆಂದೋಲನವನ್ನೂ (anti - dedication movement) ಆರಂಭಿಸಿದರು. ಈ ಆಂದೋಲನಾಕಾರರ ಮುಖ್ಯ ಉದ್ದೇಶವು ಬ್ರಿಟಿಷ್ ಕಾಲೊನಿಗಳು ಕಾನೂನು ರೀತಿಯಲ್ಲಿಯೇ ಭಾರತವಿಡೀ ನಡೆಸುತ್ತಿದ್ದ ವೇಶ್ಯಾವಾಟಿಕೆಯನ್ನು ನಿಲ್ಲಿಸುವುದೇ ಆಗಿತ್ತು. ಬ್ರಿಟಿಷರು ತಮ್ಮ ಚಕ್ರಾಧಿಪತ್ಯದಡಿಯಲ್ಲಿ ನಾಗರೀಕತೆಯ ಸೋಗಿನಲ್ಲಿ ನಡೆಸುತ್ತಿದ್ದ ನಡೆಸುತ್ತಿದ್ದ ಸಮಾರಂಭಗಳಲ್ಲಿಯೂ , ಅವರ ಆಡಳಿತಗಳಲ್ಲಿಯೂ ಅನೇಕರು ಸಮಾಜ ಸುಧಾರಣಾಕಾರರೆಂದು ಸೋಗುಹಾಕಿಕೊಂಡರು. ಬ್ರಿಟಿಷರ ಪರವಾಗಿ ಒಳಗೊಳಗೇ ಕೆಲಸ ಮಾಡುತ್ತಿದ್ದ ಆಂದೋಲನಕಾರರಿಗೆ ಉತ್ತಮ ಸ್ಥಾನಮಾನಗಳು ದೊರಕಿದವು!

ದೇವದಾಸಿಯರನ್ನು ವೇಶ್ಯೆಯರೆಂದೇ ಪರಿಗಣಿಸಿದ್ದರಿಂದ ಅವರು ವೇಶ್ಯಾವಾಟಿಕೆಯಿಂದ ಹರಡುತ್ತಿದ್ದ ಗುಹ್ಯರೋಗಗಳಿಗೂ ಕಾರಣವಿಲ್ಲದೆ ಆರೋಪಿಗಳಾಗಿ ಕೆಟ್ಟ ಹೆಸರು ಗಳಿಸುವ ಸಂದರ್ಭಗಳುಂಟಾದವು. ಈ ಕಾಲದಲ್ಲಿ ಅನೇಕ ಬ್ರಿಟಿಷ್ ಸೈನಿಕರಿಗೆ ಅವರ ಅಧೀನದ ಅನೇಕಾನೇಕ ವೇಶ್ಯಾವಾಟಿಕೆಗಳಿಂದಲೇ ಗುಹ್ಯರೋಗಗಳು ಹರಡಿದ್ದರೂ ದೇವದಾಸಿಯರ ಹೆಸರೂ ಇಂತಹುದರೊಂದಿಗೆ ಸೇರಿಸಲ್ಪಟ್ಟು ಅವರನ್ನು ಕೀಳುಮಟ್ಟದಲ್ಲಿ ನೋಡುವಂತಾಯಿತು. ಅನೇಕ ವೇಶ್ಯೆಯರನ್ನು ರೋಗ ತಪಾಸಣೆಗೆಂದು ಕರೆದುಕೊಂಡು ಹೋಗುವಾಗ ಇವು ಯಾವುದಕ್ಕೂ ಸಂಬಂಧವೇ ಇಲ್ಲದ ದೇವದಾಸಿಯರನ್ನೂ ಬಲವಂತವಾಗಿ ವೈದ್ಯಕೀಯ ತಪಾಸಣೆಗೆಂದು ಎಳೆದುಕೊಂಡು ಹೋಗಲಾಯಿತು. ಹೀಗೆ ವೈದ್ಯಕೀಯ ತಪಾಸಣೆಗೆಂದು ಹೋದವರು ಮತ್ತೆ ಮರಳಿ ಬರಲೇ ಇಲ್ಲ, ಎಲ್ಲಿ ಹೋದರೆಂದು ತಿಳಿಯಲೂ ಇಲ್ಲ. ಇಂತಹ ಸಂದರ್ಭದಲ್ಲಿ ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ದೇವದಾಸಿಯರ ರಕ್ಷಣೆಗೆಂದೇ ಈ ಪದ್ಧತಿಯನ್ನು ಕಾನೂನು ಬದ್ಧವಾಗಿ ನಿಲ್ಲಿಸಿ,ಆಗಲೇ ತಮಗೆ ಖರ್ಚಿಗೆಂದು ನೀಡುತ್ತಿದ್ದ ಹಣವನ್ನು ಬ್ರಿಟಿಷರು ಕಡಿಮೆ ಮಾಡಿದ್ದರೂ ತಮ್ಮ ಎಲ್ಲ ಖರ್ಚುಗಳನ್ನೂ ಬಹಳಷ್ಟು ಕಡಿತಗೊಳಿಸಿ ಮೈಸೂರು ಸಂಸ್ಥಾನದ ದೇವದಾಸಿಯರ ಜೀವನೋಪಾಯವಾಗಿ ಅವರಿಗೆ ಸಿಗುತ್ತಿದ್ದ ಸಂಬಳಗಳನ್ನು ಇನ್ನೂ ಹೆಚ್ಚು ಮಾಡಿ ಅವರನ್ನು ಸಂರಕ್ಷಿಸಿದರು. ಅವರ ನಂತರ ಜಯಚಾಮರಾಜೇಂದ್ರ ಒಡೆಯರೂ ಹೀಗೆಯೇ ಮಾಡಿದರು. ಆದರೆ ಅವರ ಕಾಲಾನಂತರದಲ್ಲಿ, ದೇಶದ ಸ್ವಾತಂತ್ರ್ಯವು ಸಿಕ್ಕಿದ ಮೇಲೆ ಮೈಸೂರು ದೊರೆಗಳೂ ದೇಶದ ಅನೇಕ ರಾಜ ವಂಶಗಳೂ ಆರ್ಥಿಕವಾಗಿಯೂ, ಮಾನಸಂಮಾನಗಳಲ್ಲಿಯೂ ತೊಂದರೆಗೀಡಾದರು. ಹೀಗೆ ದೇವದಾಸಿಯರ ನೃತ್ಯದ ಪದ್ಧತಿ ಕೊನೆಗೊಂಡು ಅವರಿಗಾಗಲೇ ಸಾಮಾಜಿಕ ಸ್ಥಾನಮಾನಗಳೂ ಕಡಿಮೆಯಾದ್ದರಿಂದ ಪಾರಂಪರಿಕವಾಗಿ ಬಂದಿದ್ದ ಸಂಪ್ರದಾಯದಂತೆ ದೇವರಿಗೆ ಸಮರ್ಪಣೆಯಾಗದ ಈ ನೃತ್ಯಕಲೆಯನ್ನು ಶಿಷ್ಯರಿಗೆ ಹೇಳಿಕೊಡಲಾಗದೆ, ಶಿಷ್ಯಸಂಕುಲವೂ ಬೆಳೆಯದೆ, ತಮ್ಮ ಮಕ್ಕಳಲ್ಲೂ ಮುಂದುವರೆಸಲಾಗದೆ, ಭಾರತೀಯ ಅನೇಕ ನೃತ್ಯ ಪದ್ಧತಿಗಳಿಗೆ ಎಂದೂ ಬಿಡಲಾರದ ಗ್ರಹಣವು ಹಿಡಿಯಿತು.

ಯಕ್ಷಿಯೊಂದೆ ನಾಮ ಹಲವು

Copyright protected article. Infringement of copyright is punishable of

Copyright protected article. Infringement of copyright is punishable of

ಯಕ್ಷ - ಯಕ್ಷಿಣಿಯರ ಹೆಸರುಗಳೂ ಅವರ ರೂಪಗಳೂ ಹಲವಿವೆ. ಆದರೆ ಆರಾಧನಾ ಉದ್ದೇಶದ ಮೂಲ ಒಂದೇ. ಜಕಣಿ, ಜಕ್ಕಿಣಿ, ಜಕಡಿ,ಜಕಟಿ, ಜಖಡಿ, ಜಕ್, ಜಕ್ಕಳಿ, ಜಖರ್, ಜಾಖಡಿ, ಜಾಖಡೀ, ಜಕ್ಕಲಿ, ಜಕ್ಕಣ, ಜಕಟಿ, ಜಕ್ಕ, ಜಕ್ಕವ್ವ, ಜಕ್ಕಬ್ಬೆ, ಜಕ್ಕಡ, ಜಕ್ಕರಿ, ಜತ್ತಕ, ಜತ್ತಕ್ಕ ಇತ್ಯಾದಿ ಹಲವು ನಾಮ ರೂಪಾಂತರಗಳಲ್ಲಿ ಅನೇಕ ಕುಟುಂಬಗಳು ಉತ್ತರ ಕರ್ನಾಟಕದ ರಾಯಚೂರು, ಅದರಲ್ಲೂ ಗದಗದ ಆಸುಪಾಸಿನಲ್ಲಿಯೂ, ಕೊಂಕಣ ಮಹಾರಾಷ್ಟ್ರ, ಆಂಧ್ರಗಳಲ್ಲಿಯೂ ಈಗಲೂ ಇದ್ದು, ಯಕ್ಷಿಣಿ - ಯಕ್ಷರ ಪ್ರಾಕೃತ ರೂಪದ ಹೆಸರುಗಳನ್ನು ತಮ್ಮ ಹೆಸರಿನೊಂದಿಗೆ ಸೇರಿಸಿ ಉಪಯೋಗಿಸಿಕೊಳ್ಳುತ್ತಿವೆ. ಜಕಣಿ, ಜಕ್ಕಿಣಿ, ಜಕ್ಕಡ ಎಂಬುವ ಶಬ್ದಗಳು ಬಹಳವಾಗಿ ಮುಸಲ್ಮಾನರ ಹೆಸರಿನೊಂದಿಗೂ ಉಪನಾಮವಾಗಿ ಸೇರಿದೆ! ಮತಾಂತರವಾದ ಹಿಂದೂಗಳು ಬಹುಶಃ ತಮ್ಮ ಮನೆತನದ ಹೆಸರಗಳನ್ನು ಮತಾಂತರದ ಸಮಯದಲ್ಲಿ ತಮ್ಮ ಹೆಸರುಗಳನ್ನು ಬದಲಿಸುವ ಸಂದರ್ಭದಲ್ಲಿ ತಮ್ಮ ಹೆಸರಿನೊಂದಿಗೆ ಸುಲಭ ಪರಿಚಯಕ್ಕಾಗಿ ಉಪಯೋಗದಲ್ಲಿ ಇಟ್ಟುಕೊಂಡರೆಂದು ತೋರುತ್ತದೆ. ಈ ನಾಮಗಳೆಲ್ಲವೂ ಉತ್ತರ ಕರ್ನಾಟಕದ ಜೊತೆಗೆ ಕೊಂಕಣ ಮಹಾರಾಷ್ಟ್ರದ ರತ್ನಗಿರಿ, ಹಾಗೂ ಆಂಧ್ರಪ್ರದೇಶದ ಈಗಿನ ತೆಲಂಗಾಣದಲ್ಲಿಯೇ ಹೆಚ್ಚು ಕಂಡುಬರುವುದು ಗಮನೀಯ. ಜಕ್ಕಲಿ,ಜಕ್ಕಳಿ, ಜಕ್ಕಳ, ಜಕಡಿ, ಜಕ್ಕಳದಿನ್ನಿ (ದಿನ್ನೆ ಎನ್ನುವುದು ದಿನ್ನಿಯಾಯಿತೆಂದು ತೋರುತ್ತದೆ) ಇತ್ಯಾದಿ ನಾಮಗಳಲ್ಲಿ ಅನೇಕ ಊರು, ಗ್ರಾಮ, ತಾಲ್ಲೂಕು ಹಾಗೂ ಸ್ಥಳಗಳಿವೆ. ಇವೆಲ್ಲವೂ ಉತ್ತರ ಕರ್ನಾಟಕದ ಪ್ರದೇಶದಲ್ಲಿಯೇ ಹೆಚ್ಚಿವೆ.

ಜಕಣಿ ಅಥವಾ ಜಕ್ಣಿ ಎಂಬ ಜನಪದ ಆಚರಣೆಯೊಂದು ಕುಂದನಾಡಿನಲ್ಲಿ (ಕುಂದಾಪುರ) ಪ್ರಕೃತಿಯ ಹಾಗೂ ತೀರಿಹೋದ ತಮ್ಮ ಪಿತೃಗಳ ಆರಾಧನೆಯಾಗಿ ಪ್ರಚಲಿತದಲ್ಲಿದೆ. ಅನೇಕ ದೇವ, ದೈವ ಸ್ಥಾನಗಳಲ್ಲಿ ಜಕ್ಕಿಣಿಯ ಆರಾಧನೆಯು ಜಕ್ಕಿಣಿ, ಜಕ್ಕಮ್ಮ, ಜಕ್ಕವ್ವ, ಜಕ್ಕಣ, ಯಕ್ಷಿಣಿ, ಯಕ್ಷ ಇತ್ಯಾದಿ ನಾಮಗಳಲ್ಲಿ ಇರುವುದರೊಂದಿಗೆ, ಜಕಿಣಿಯೆಂದರೆ ಗಂಡಸರನ್ನು ಅದರಲ್ಲಿಯೂ ಮದುವೆಯಾಗದವರನ್ನು ಪೀಡಿಸುವ ಕೆಟ್ಟ ಅತೀಂದ್ರಿಯ ಶಕ್ತಿಯೆಂಬ ರೀತಿಯಲ್ಲಿ ಬಿಂಬಿಸುವ ಕಥೆಗಳೂ ಇವೆ. ಜನಪದರು ಬಹಳವಾಗಿ ಆರಾಧಿಸುವ ಎಲ್ಲಮ್ಮ ದೇವತೆಯ ಜೈನ ಹೆಸರು ಜತ್ತಕ. ಜತ್ತಕ ಶಬ್ದವು ಯಕ್ಷಿಣಿ —>ಜಕ್ಕಿಣಿ —>ಜತ್ತಕ್ಕ —>ಜತ್ತಕ ಎಂದಾಗಿದೆ ಎಂದು ವಿದ್ವಾಂಸರ ಅಭಿಪ್ರಾಯ. ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ಜಕ್ಕಳಮ್ಮ ಎನ್ನುವ ಸ್ತ್ರೀಯು ತನ್ನ ಅವಳಿ ಮಕ್ಕಳೊಂದಿಗೆ ಕೆರೆಗೆ ಹಾರಿದವಳು ಮರುಜನ್ಮದಲ್ಲಿ ಕೂಷ್ಮಾಂಡಿನೀ ಯಕ್ಷಿಯಾಗಿ ಜನ್ಮತಾಳಿದಳು ಎಂದು ಐತಿಹ್ಯವಿದೆ. ಇಂತಹ ದೇವತೆಗಳ ಆರಾಧನೆಯ ಸಮಯದಲ್ಲಿ ಲಯವಾದ್ಯಗಳನ್ನು ಬಾರಿಸುವಾಗ ಹೇಳುವ 'ಜಖ್ಖ ಹೊಡೆತ' ಎನ್ನುವ ಪರಿಭಾಷೆಯು ಶಾರ್ಙ್ಗದೇವ ಸೂರಿಯು ತನ್ನ ಸಂಗೀತರತ್ನಾಕರದಲ್ಲಿ ಉಲ್ಲೇಖಿಸಿದ 'ಜಕ್ಕಾ ಪ್ರಹಾರ' ವೆಂಬ ಪರಿಭಾಷೆಯನ್ನು ನೆನಪಿಗೆ ತರುತ್ತದೆ. ತಜ್ಞ ಸಂಶೋಧಕರು ಈ ನಿಟ್ಟಿನಲ್ಲಿ ಅಧ್ಯಯನವನ್ನು ಮಾಡಿದರೆ ಇನ್ನಷ್ಟು ಮಾಹಿತಿಗಳು ಸಿಕ್ಕೀತು.

ಅನೇಕ ಶಾಸನಗಳಲ್ಲಿ ಜಕ್ಕವ್ವೆ, ಜಕ್ಕಬ್ಬೆ, ಜಕ್ಕವ್ವ ದೇವಿ ಇತ್ಯಾದಿ ನಾಮಗಳಿರುವ ಅನೇಕ ಜೈನ ಹಾಗೂ ಶೈವ ರಾಜ ಸ್ತ್ರೀಯರ ಉಲ್ಲೇಖಗಳು ಕರ್ನಾಟಕದಲ್ಲಿಯೂ ಆಂಧ್ರದಲ್ಲಿಯೂ ಇವೆ. ಉದಾಹರಣೆಗೆ, ಬಮ್ಮಹನ ಪುತ್ರಿಯಾದ ಜಕ್ಕವ್ವೆಯು ಸತ್ಯಾಶ್ರಯ ಹಾಗೂ ದಶವರ್ಮನ ತಾಯಿ. ಸತ್ಯಾಶ್ರಯನು ಕವಿರಾಜ ರನ್ನನನ್ನು ತನ್ನ ಆಸ್ಥಾನದ ವಿದ್ವಾಂಸನನ್ನಾಗಿ ಇಟ್ಟುಕೊಂಡು ಪೋಷಿಸುತ್ತಿದ್ದನು. ಇನ್ನೊಬ್ಬ ಜಕ್ಕಬ್ಬೆ ಎನ್ನುವ ಸ್ತ್ರೀಯು ಹೊಯ್ಸಳ ದೊರೆ ವಿಷ್ಣುವರ್ಧನನ ಅತ್ತೆ, ಆತನ ಪತ್ನಿಯಾಗಿದ್ದ ಚಿಕ್ಕ ಶಾಂತಲೆಯ ತಾಯಿ. ಇನ್ನೊಬ್ಬ ಜಕ್ಕಬ್ಬೆಯು ಪ್ರಸಿದ್ಧ ಅತ್ತಿಮಬ್ಬೆಯ ಸಹೋದರಿ, ಜಕ್ಕಣಾರ್ಯನು ಕ್ರಿ. ಶ. 1430 ರಲ್ಲಿ ಇದ್ದ ವೀರಶೈವ ಕವಿ. ಈತನಿಗೆ ಜಕ್ಕಣ್ಣ, ಜಕ್ಕಪ್ಪ ಎಂಬ ಹೆಸರುಗಳೂ ಇದ್ದವು. ಜಕ್ಕಣಾರ್ಯನು ವಿಜಯನಗರದ ಪ್ರೌಢರಾಯನ ಮಂತ್ರಿಯಾಗಿದ್ದನು. ಹೀಗೆ ಅನೇಕ ರಾಜವಂಶಸ್ಥರೂ, ಜನ ಸಾಮಾನ್ಯರ ಹೆಸರುಗಳೂ. ಜಕ್ಕಿಣಿಯ(ಯಕ್ಷಿಣಿಯ) ಆರಾಧಕರೆಂಬುದನ್ನು ಸೂಚಿಸುತ್ತದೆ.

ಭಾರತದಲ್ಲಿ ಮಾತ್ರವಲ್ಲದೆ, ಜಪಾನ್, ಸೆರ್ಬಿಯಾ, ರಷ್ಯಾ, ಫ್ರಾನ್ಸ್, ಇಸ್ರೇಲ್, ಫಿನ್ನಿಶ್ ಮುಂತಾದ ಪ್ರಪಂಚದ ಅನೇಕ ದೇಶಗಳ ಜನರು ಅವರ ಕುಟುಂಬದ ಉಪನಾಮವಾಗಿ ಜಕಾಡೀ, ಜಕಡೀ, ಜಕ್ಕ ಇತ್ಯಾದಿಗಳನ್ನು ತಮ್ಮ ಹೆಸರಿನೊಂದಿಗೆ ಉಪನಾಮವಾಗಿ ಅಥವಾ ಅದನ್ನೇ ಹೆಸರಾಗಿ, ಈ ಪದಗಳ ಅರ್ಥವೂ ಮೂಲವೂ ತಿಳಿಯದಿದ್ದರೂ ಇಟ್ಟುಕೊಂಡಿದ್ದಾರೆ! ಬಹುಶಃ ಅತ್ಯಂತ ಪ್ರಾಚೀನ ಕಾಲದಿಂದಲೂ ಭಾರತದಿಂದಲೇ ಹೋಗಿ ನೆಲೆಸಿರಬಹುದಾದ ಈ ಕುಟುಂಬಗಳ ಉಪನಾಮಗಳು ಮುಂದುವರೆದಿದ್ದು ಚರ್ಚ್ ಅಥವಾ ಇಸ್ಲಾಂ ಧರ್ಮಗಳ ಆಕ್ರಮಣದಿಂದ ಕಾಲಾಂತರದಲ್ಲಿ ಈ ಹೆಸರುಗಳ ಉದ್ದೇಶವೂ, ಅರ್ಥವೂ ಗುರುತು ಸಿಗಲಾರದಷ್ಟು ಕರಗಿಹೋಗಿರಬೇಕು.

ಜಕ್ಕಡೀ - ಅನುಮಿತಿ

Copyright protected article. Infringement of copyright is punishable of

Copyright protected article. Infringement of copyright is punishable of

ದಕ್ಷಿಣ ಭಾರತೀಯ ಶಾಸ್ತ್ರೀಯ ನೃತ್ಯ ಪದ್ಧತಿಯಲ್ಲಿ ಜಕ್ಕಿಣಿ ಪದಂ, ಜಕ್ಕಿಣಿ ಲಾಸ್ಯಂ, ಜಕ್ಕಿಣಿ ದರು, ಇತ್ಯಾದಿ ರಚನೆಗಳಿವೆ. ಸಂಗೀತ ರಚನೆಗಳಲ್ಲಿ ಅನ್ನಮಾಚಾರ್ಯರ ಕೃತಿಯಾದ 'ದೇವ ವಾಸುದೇವ' ಕೃತಿಯು ಜಕ್ಕಿಣಿ ಬೌಳಿರಾಗದಲ್ಲಿ ರಚಿಸಲಾಗಿದೆ. ವಿದ್ವಾಂಸ ರಾಜನಾಗಿದ್ದ ಸೋದೆ ಸದಾಶಿವರಾಯನು ನವರಸ ಜಕ್ಕಿಣಿ ಎಂಬ ನೃತ್ಯಪ್ರಬಂಧವನ್ನು ರಚಿಸಿದ್ದಾನೆ. ತಂಜಾವೂರಿನ ನಾಯಕ ದೊರೆಗಳ ಆಸ್ಥಾನದಲ್ಲಿ ಜಕ್ಕಿಣಿ ನೃತ್ಯವು ಬಹಳವಾಗಿ ನರ್ತಿಸಲ್ಪಡುತ್ತಿತ್ತು. ಆದರೆ, ಇವು ಯಕ್ಷಿಣಿ ನಾಮಸೂಚಿತ ನೃತ್ಯಗಳೇ ಆದರೂ, ದೇವಾಲಯಗಳಲ್ಲಿ ನರ್ತಿಸಲ್ಪಡುತ್ತಿದ್ದರೂ, ಇವುಗಳೆಲ್ಲವೂ ಗೀತ, ವಾದ್ಯ, ನೃತ್ಯಗಳಲ್ಲಿ ನಿಬಂಧ ನೃತ್ಯಗಳೇ ಆಗಿವೆ. ಇವುಗಳಲ್ಲಿ ಯಾವುದೂ ಪಂಡರೀಕ ವಿಠ್ಠಲನು ಹೇಳುವ ಅನಿಬಂಧ 'ಜಕ್ಕಡೀ' ನೃತ್ಯ ಲಕ್ಷಣವನ್ನು ಹೋಲುವುದಿಲ್ಲ. ಯಕ್ಷಿಣಿಮಾತೃದೇವತೆಯ ದ್ಯೋತಕವಾದ ಸಾಲಭಂಜಿಕೆಯರ ಕೆಲವು ಶಿಲ್ಪಗಳಲ್ಲಿ(ಇವುಗಳ ಫೋಟೋ ಇರುವ ಗೂಗಲ್ ಲಿಂಕ್ ಗಳನ್ನು ಲೇಖನಾಂತ್ಯದಲ್ಲಿ ನೀಡಲಾಗಿದೆ.) ಇರುವಂತೆ ಕೈಯಲ್ಲಿ ವಸ್ತ್ರವನ್ನು ಹಿಡಿದು ನರ್ತಿಸುವ ನೃತ್ಯದಲ್ಲಿ 'ಜಾಖಡೀ' ಯೂ ಒಂದು. ಜನಪದರೂ ಮಾಡುತ್ತಿದ್ದ ಅನಿಬಂಧ ನೃತ್ಯವದು.

ಜಕ್ಕಡೀ ಎನ್ನುವುದು ಯಕ್ಷಿಣಿ ಪದದ ಪ್ರಾಕೃತ ರೂಪವೇ ಎಂದು ಸಿದ್ಧವಾದ ವಿಷಯವೇ. ಯಕ್ಷಿಯನ್ನೇ ಕುರಿತ ಪದವಾದರೂ ಜಕ್ಕಡಿ ಶಬ್ದವು ಹೆಚ್ಚು ಉಪಯೋಗದಲ್ಲಿ, ಜೀವಂತವಾಗಿ ಜನತೆಯಲ್ಲಿ ಇರುವುದು ಉತ್ತರ ಕರ್ನಾಟಕ, ಪಶ್ಚಿಮ ಕೊಂಕಣ ಮಹಾರಾಷ್ಟ್ರ, ಹಾಗೂ ಆಂಧ್ರಪ್ರದೇಶದ ಈಗಿನ ತೆಲಂಗಾಣದಲ್ಲಿಯೇ. ದೇಶದ ಭೂಪಟವನ್ನು ನೋಡಿದರೆ ಇವು ಒಂದೇ ಸಾಲಿನಲ್ಲಿ ಕಾಣುವುದಲ್ಲದೆ, ಇವು ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿತ್ತು. ಕರ್ಣಾಟಕದವನೇ ಆದ,
ಅದೇ ಕಾಲದಲ್ಲಿದ್ದ ಪಂಡರೀಕ ವಿಠ್ಠಲನು ಈ ಪ್ರದೇಶಗಳಲ್ಲಿ ಜನಪದೀಯ ಶೈಲಿಯಲ್ಲಿಯೂ, ವಿಜಯನಗರ ಸಾಮ್ರಾಜ್ಯದ ದೇವಸ್ಥಾನಗಳಲ್ಲಿ ಶಿಷ್ಟ ರೀತಿಯಲ್ಲಿಯೂ ನಡೆಯುತ್ತಿದ್ದ ಈ ನೃತ್ಯ ಪದ್ಧತಿಗಳ ಪರಸ್ಪರ ಹಲವು ಹೋಲಿಕೆಗಳನ್ನು ನೋಡಿ ಪೂರ್ವದಿಂದಲೂ ಭಾರತೀಯ ಸಂಸ್ಕೃತಿಯಲ್ಲಿ ಆಚರಣೆಗಳನ್ನೂ ಕಲೆಗಳನ್ನೂ ಅನುಸರಿಸಿ ತಮ್ಮದೇ ರೀತಿಯಲ್ಲಿ ಮಾರ್ಪಡಿಸಿಕೊಂಡಿದ್ದ, ಆಗಿನ ಕಾಲದಲ್ಲಿ ಬಹುಶಃ ಜಕ್ಕಡೀ ಎಂಬ ಹೆಸರಿನಲ್ಲಿಯೇ ಪ್ರಚಲಿತವಿದ್ದ ಯಕ್ಷಿಣಿ ಶೈಲಿಯ ಈ ನೃತ್ಯವನ್ನು 'ಜಕ್ಕಡೀ' ಎಂದು ಹೇಳಿದ್ದಾನೆ ಎಂಬ ಅನುಮಿತಿಯನ್ನು ಹೊರಡಿಸಬಹುದು. ಲೇಖನಾಂತ್ಯದಲ್ಲಿ, ಯೂ ಟ್ಯೂಬ್ ಲಿಂಕ್ ನಲ್ಲಿ ನೀಡಲಾದ ಪರ್ಶಿಯನ್ನರ 'ಗಜರ' ನೃತ್ಯವನ್ನು ಗಮನಿಸಿದಾಗ ಸುಲಭವಾದ ಪಾದ ಚಲನೆಗಳೂ, ಬಾಹು - ಹಸ್ತಗಳ ಚಲನೆಯೂ, ಕೈಗಳಲ್ಲಿ ಕರವಸ್ತ್ರವನ್ನು ಬೀಸಿ ಮಾಡುವ ರೀತಿಯೂ, ಸ್ವಲ್ಪವಾಗಿ ಪ್ರಯೋಗವಾಗುವ ಭ್ರಮರಿಯೂ ಮಹಾರಾಷ್ಟ್ರದ 'ಜಾಖಡೀ' ಯನ್ನೇ ಹೋಲುತ್ತದೆ. 'ಗಜರ' ವಾದ್ಯಪ್ರಬಂಧದಂತೆ ಮೃದುವಾದ ಸಂಗೀತವನ್ನು ಅಳವಡಿಸಿಕೊಂಡದ್ದರಿಂದಲೂ ಆ ಭಾಷೆಗೆ ಈ ಪದವು ಹೊಂದುವುದರಿಂದಲೂ 'ಗಜರ' ವೆಂಬ ಹೆಸರು ಅದಕ್ಕೆ ಪರ್ಯಾಯವಾಗಿ ಕರೆದಿರುವ ಸಾಧ್ಯತೆ ಇದೆ. ಆಗಿನ ನೃತ್ಯ ರೀತಿಗೂ ಈಗಿನ ನೃತ್ಯ ರೀತಿಗೂ ಅನೇಕ ವ್ಯತ್ಯಾಸಗಳು ಕಾಲಕಾಲಕ್ಕೆ ತಕ್ಕಂತೆ ಆಗಿರುವುದೇ ಕಾಲದ ಹಾಗೂ ಕಲೆಯ ವೈಶಿಷ್ಟ್ಯವಾದರೂ ಪಂಡರೀಕ ವಿಠ್ಠಲನು ಹೇಳುವ ಜಕ್ಕಡೀಗೆ ಸ್ವಲ್ಪವಾದರೂ ಪರಸ್ಪರವಾಗಿ ಹೋಲಿಸಿ ಆಧಾರಗಳನ್ನು ನೀಡಿ ಹೇಳಬಹುದಾದ ನೃತ್ಯವು 'ಗಜರ' ಎಂದು ಹೇಳಲಡ್ಡಿಯಿಲ್ಲ. ಮಾತೃದೇವತೆಯ ಆರಾಧನೆಗಾಗಿ ಹುಟ್ಟಿಕೊಂಡ ಜಕ್ಕಡೀ ನೃತ್ಯಬಂಧವು ಯವನರಿಗೂ, ಪಾರಸಿಕರಿಗೂ ಬಹಳ ಪ್ರಿಯವಾದದ್ದೇ ಆದರೂ ಇದು ಭಾರತದ್ದೇ ಎನ್ನುವುದರಲ್ಲಿ ಎರಡು ಮಾತಿಲ್ಲ. ಹಾಗೆಂದೇ ಪಂಡರೀಕ ವಿಠ್ಠಲನು "ನಾನಾ ದೇಶಗಳ ನಾನಾ ಜನಗಳನ್ನು ಆಶ್ರಯಿಸಿ ಪ್ರಸಿದ್ಧವಾಗಿರುವ ದೇಶೀ ನೃತ್ಯಗಳು ಕೊನೆಯಿಲ್ಲದಷ್ಟಿವೆ, ಅವುಗಳನ್ನು ಹೇಗೆ ಮಾಡಿದರೆ ಸುಂದರವಾಗಿ ರುಚಿಸುತ್ತವೋ ಹಾಗೆಯೇ ನೃತ್ಯವಿದ್ಯಾವಿಶಾರದರು ಮಾಡಬೇಕು' ಎಂದು ಹೇಳಿ, 'ಚಾರಿಗಳು ನೆಲೆಸಿರುವ ಸೌಂದರ್ಯದ ಅಧಿಷ್ಠಾನವಿರುವ ನೃತ್ಯವೇ ನೃತ್ಯ, ಉಳಿದದ್ದು ಅದರ ಅಣಕ'ವೆಂದು (ನ.ನಿ.ಶ್ಲೋ. 906) ಫಾರಸೀಗಳೂ, ಯವನರೂ ಮೆಚ್ಚುತ್ತಿದ್ದ ಈ ನೃತ್ಯ ಪ್ರಕಾರವನ್ನು ಕುರಿತು ಸೂಚ್ಯವಾಗಿ ಹೇಳಿದ್ದಾನೆ.

ಜನನೀ ಜನ್ಮಭೂಮಿ

"ಭರತವರ್ಷದಲ್ಲಿ ಅತಿ ಪ್ರಾಚೀನದಿಂದಲೂ ಭೂಮಿಯನ್ನೇ ಸಕಲ ಚರಾಚರಗಳಿಗೂ ಮಾತೆಯೆಂದು ಭಾವಿಸಿ ಶಿಷ್ಟರೂ, ಜನಪದರೂ, ಆದಿವಾಸಿಗಳೂ ಪೂಜಿಸುತ್ತಾರೆ. ಆದಿಯಲ್ಲಿಯೂ ತನ್ನ ತೆಕ್ಕೆಯಲ್ಲಿಯೇ ಜನ್ಮವನ್ನು ನೀಡುವ, ಅಂತ್ಯದಲ್ಲಿಯೂ ತನ್ನ ಮಡಿಲಲ್ಲಿಯೇ ಸೇರಿಸಿಕೊಳ್ಳುವ, ಸಕಲ ಚರಾಚರಗಳಿಗೂ ಬದುಕನ್ನು ನೀಡುವ ಆಕೆಯೇ ನಿಜವಾದ ಮಾತೃದೇವತೆ. ಅವಳಿಗಾಗಿಯೇ ಮಾತೃದೇವತೆಯ ಆರಾಧನೆಯೇ ಆರಂಭವಾಯಿತು. ಆಕೆಯೇ ಅದಿತಿ. ಆಕೆಯೇ "ಶ್ರೀ". ಆಕೆಯ ಆರಾಧನೆಗಾಗಿಯೇ ಎಲ್ಲ ಕಲೆಗಳೂ ಜನ್ಮತಾಳಿವೆ. ಹಾಗಾಗಿ ಭಾರತದ ನೃತ್ಯಭರತರು ದುಷ್ಟಶಕ್ತಿಗಳನ್ನು ಓಡಿಸುವಂತಹ ಶಕ್ತಿಯಿದೆಯೆಂದು ನಂಬುವ, ಮಂಗಳಕರವಾದ ಗೆಜ್ಜೆಗಳನ್ನು ಪೂಜಿಸಿ, ಕಟ್ಟಿ, ತಮ್ಮ ನೃತ್ಯದ ಆದ್ಯಂತಗಳಲ್ಲಿ ಭೂಮಾತೆಯನ್ನು ನಮಸ್ಕರಿಸಿ, ಕಲೆಯ ಮೂಲಕವೇ ಸೇವೆಯನ್ನು ಮಾಡಿ ಧನ್ಯರಾಗುತ್ತಾರೆ.

Copyright protected article. Infringement of copyright is punishable offence.

°°°

"ಲೇಖನಕ್ಕೆ ಸಂಬಂಧಿಸಿದಂತೆ ಅನೇಕ ಗೂಗಲ್ ಲಿಂಕ್ ಗಳು"—

ಜಕಡೀ, ಜಾಕಡೀ, ಝಾಕಡೀ (ಡೀ ಮತ್ತು ರೀ ನಡುವಿನ ಉಚ್ಚಾರ) ನೃತ್ಯದ ಯೂ ಟ್ಯೂಬ್ ಲಿಂಕ್ ಗಳು——

https://youtu.be/UqJQNtU1mCU

https://youtu.be/5DCRIkzqFAc

https://youtu.be/4auIUkWiNEU

https://youtu.be/04eKWXI9FwA

https://youtu.be/Z5JOZ8OL1CU

https://youtu.be/uAyExrNVvL0

https://youtu.be/8YSvG2JpIHQ

https://youtu.be/nUrIRqo-icA

https://youtu.be/NeOtMuuhBNo

https://youtu.be/h4A2z5zVpAM

*****

ಮೊಘಲರ ಕಾಲದ ಗಜರ = ಭಾರತೀಯ ಜಕ್ಕಡೀ

°°°°°°°°°°°°°°°°°°°°°°°°

https://goo.gl/images/cCu17o

https://goo.gl/images/pfbM3U

https://goo.gl/images/X5f8Tv

https://goo.gl/images/xzE8k6

http://ultadin.com/2015/10/10/jakkadi-is-a-dance-style-performed-by-persian-women-as-documented-in-sanskrit-treatises/

https://goo.gl/images/vtvUKS

https://upload.wikimedia.org/wikipedia/commons/c/c4/Mehmoonifinal2.jpg

"ಇದರಲ್ಲಿರುವ ಚಿತ್ರಗಳು ಮುಖ್ಯ".
https://youtu.be/i9PHnYSGCy8
*****

Jhakari of Nepal
°°°°°°°°°°°°°°°°°°°°°°

ಇದರಲ್ಲಿ ಯಾವುದೂ ಕಿಂಚಿತ್ತೂ ಜಕ್ಕಡೀಗೆ ಹೋಲುವುದಿಲ್ಲ. ಆದರಿದು ಯಕ್ಷರ ಆರಾಧನೆಯನ್ನು ಹೇಳುತ್ತದೆ. ಮತ್ತು ಭಂಡಾರು ಲಕ್ಷ್ಮೀನಾರಾಯಣನು ಇದೇ ಶಬ್ದವನ್ನು ತನ್ನ ಸಂಗೀತಸೂರ್ಯೋದಯದಲ್ಲಿ ಪ್ರಯೋಗಿಸಿದ್ದಾನೆ).

https://goo.gl/images/bsfh5s

https://youtu.be/cW1XiN2eAXw

[https://youtu.be/aii18bjpsm4

https://youtu.be/eFzTwMho-7I

https://youtu.be/bDKQzPJiCVE

https://youtu.be/3f-DGYQdo1g

https://youtu.be/gBD1zosozmQ

https://youtu.be/oWoxAFhyZXg

https://youtu.be/i9PHnYSGCy8
*****

ಜಕ್ಕಡೀಯ ಲಕ್ಷಣವನ್ನು ಸ್ವಲ್ಪವಾಗಿ ಹೋಲುವ, ಆದರೆ ಅದರ ಹೆಸರೇ ಅಲ್ಲದ ಪರ್ಶಿಯನ್ನರ ಹಾಗೂ ಆಫ್ಘಾನಿಸ್ತಾನಿಯರ ಕೆಲವು ನೃತ್ಯ ಪ್ರಕಾರಗಳು
°°°°°°°°°°°°°°°°°°°°°°°°

https://youtu.be/paM9pjUYN6Q

https://youtu.be/PMJYdJr0cYA

https://youtu.be/9z2ScDPZPgk

https://youtu.be/UtpN1H-bsTk

https://youtu.be/ObSl6s8MDsA

https://youtu.be/EaKJjFhbZ08

https://youtu.be/yYuHZL2GnIE

https://youtu.be/NsJ4CG2q-MA

https://youtu.be/gLflrGStfaY
*****

ಸಂಶೋಧಕರು ಊಹಿಸಿರಬಹುದಾದ ಜಕ್ಕಡೀಯನ್ನು ಹೋಲುವ ಮೇಲು ಹೊದಿಕೆ (veil, ಉತ್ತರೀಯ, ಪರದೆ) ನೃತ್ಯಗಳು
°°°°°°°°°°°°°°°°°°°°°°°°

Veil dance - Greek Dance forms.
https://youtu.be/UNfvTeZ4U2c

Persian dance with veil https://youtu.be/zF5-fYSP0xI

Ghazal dance- Indian/Persian /Tajikistan.
https://youtu.be/N074KJk9cyo

Afghanistan cultural veil dance.
https://youtu.be/R_MyNJlFyFc
*****

"ಖುರಸಾನರ ಗಜರ"
°°°°°°°°°°°°°°°°°°°°°°°°

ಈ ಯೂ ಟ್ಯೂಬ್ ಲಿಂಕ್
ಪಂಡರೀಕ ವಿಠ್ಠಲನು ಹೇಳಿದ ಜಕ್ಕಡೀ ನೃತ್ಯದ ಲಕ್ಷಣಕ್ಕೆ ಬಹಳವಾಗಿ ಹೋಲುತ್ತದೆ. 'ಉದ್ಗ್ರಾಹವು ಸಣ್ಣದಾಗಿದ್ದು, ಅದೇ ಪುನರಾವರ್ತನೆಯಾಗುತ್ತಿದ್ದು ; ಸುಂದರ ಸ್ತ್ರೀಯರು, ತಮ್ಮ ಕೈಗಳನ್ನು ಹೆಚ್ಚು ಉಪಯೋಗಿಸಿ, ವಸ್ತ್ರದ ಅಂಚನ್ನು ಹಿಡಿದು, ಯಾವ ಚೇಷ್ಟೆಗಳೂ ಇಲ್ಲದ - ಅತಿ ಸುಲಭವಾದ, ಮೂರು ಲಯಗಳಲ್ಲಿ ಮಾಡುವ ; ಧ್ರುವ ಶಂಪಾದಿಗಳಂತೆ ಎರಡು ಕೈಗಳನ್ನು ಬೀಸುತ್ತ, ಭ್ರಮರೀಯನ್ನು ಕೂಡಿದ, ಪರ್ಶಿಯನ್ ರಾಗದ, ಯವನರಿಗೂ, ಫಾರಸಿಗಳಿಗೂ ಪ್ರಿಯವಾದ ಅನಿಬಂಧ ನೃತ್ಯ. ಇದು ಭಾರತೀಯ ಝಾಕಡೀ(ಜಾಖಡೀ-ರೀ) ನೃತ್ಯವನ್ನು ಕೆಲವು ಅಂಶಗಳಲ್ಲಿ ಹೋಲುತ್ತದೆ.
https://youtu.be/paM9pjUYN6Q
*****

ಮೊಘಲರ ಕಾಲದ ಗಜರ = ಭಾರತೀಯ ಜಕ್ಕಡೀ?
https://goo.gl/images/cCu17o

https://goo.gl/images/pfbM3U

https://goo.gl/images/X5f8Tv

https://goo.gl/images/xzE8k6

http://ultadin.com/2015/10/10/jakkadi-is-a-dance-style-performed-by-persian-women-as-documented-in-sanskrit-treatises/

https://goo.gl/images/vtvUKS

https://upload.wikimedia.org/wikipedia/commons/c/c4/Mehmoonifinal2.jpg

ಇದರಲ್ಲಿರುವ ಚಿತ್ರಗಳು ಮುಖ್ಯ.
*****

ವಸ್ತ್ರದ ಅಂಚನ್ನು ಹಿಡಿದು ನೃತ್ಯವನ್ನು ಮಾಡುವ ಸಾಲಭಂಜಿಕೆಯರ ಶಿಲ್ಪಗಳ ಚಿತ್ರಗಳ ಲಿಂಕ್ ಗಳು
°°°°°°°°°°°°°°°°°°°°°°°°

https://pin.it/72xqart3k67pwf

https://goo.gl/images/2RWT6c

https://goo.gl/images/ZYmivW

https://goo.gl/images/rgc2hG

https://goo.gl/images/M5puwA

https://goo.gl/images/rzCwFi

https://goo.gl/images/pXkpXg
******

ಕೆಲವು ದೇವದಾಸಿಯರ ಭಾವಚಿತ್ರ ಹಾಗೂ ವರ್ಣ ಚಿತ್ರಗಳ ಗೂಗಲ್ ಲಿಂಕ್ ಗಳು
°°°°°°°°°°°°°°°°°°°°°°°°

(ಮೊದಲನೆಯ ಲಿಂಕ್ ನ ದೇವದಾಸಿಯರ ಕಾಲ್ಗೆಜ್ಜೆಗಳು ಶಿಲಾಬಾಲಿಕೆಯರ ಶಿಲ್ಪದಲ್ಲಿರುವಂತಿದೆ.)

https://goo.gl/images/EGQ2Rd

https://goo.gl/images/BUVM1q

https://goo.gl/images/RtwHEd

https://pin.it/nrcpaaqxat3aoz

https://pin.it/6sfxgvd
jymndwk

https://pin.it/25o2hz
fxxkt7gr

https://pin.it/2f3kz6223xz2c2

https://pin.it/swppxeb6mcjqnw

https://3.imimg.com/data3/OI/RQ/MY-7061460/product_images-bc-small-dir_4-101798-devadasi-statue-186890-250x250.jpg
*****

ಆಕರ ಋಣ
----

*ಪುಂಡರೀಕಮಾಲಾ —ಪದ್ಮಶ್ರೀ ಮ. ಮ. ರಾ. ಸತ್ಯನಾರಾಯಣ

*Narthana Nirnaya — Dr. R. Sathyanarayana

*ಬೃಹದ್ದೇಶೀ —ಪದ್ಮಶ್ರೀ ಮ. ಮ. ರಾ. ಸತ್ಯನಾರಾಯಣ

*ಕರ್ನಾಟಕ ಸಂಗೀತವಾಹಿನಿ —ರಾ. ಸತ್ಯನಾರಾಯಣ.

* ಕರ್ನಾಟಕದ ಕಲೆಗಳು - ಸಂಗೀತ — ಮ. ಮ. ರಾ. ಸತ್ಯನಾರಾಯಣ
*SangItasUryOdaya of BhandAru Lakshminarayana - by Padmashri Mahamahopadhyaya Dr. R. Sathyanarayana

*Music - Dance and Musical instruments during the Period of Nayakas (1673 - 1732)- K. Kusuma Bai.

*Evolution of Classical Indian Literature - Mandakrantha Bose.

*Studies in Hindu and Buddhist Art - edited by P. K. Mishra.

*Kathak Dance - A Critical Study - Margaret E. Walker.

* ಹಿಮ್ಮೇಳ —Dr. ಕೆ. ಎಂ. ರಾಘವ ನಂಬಿಯಾರ್.

*ಭಾರತೀಯ ಸಂಸ್ಕೃತಿ —ಡಾ. ಶ್ರೀಕಂಠ ಶಾಸ್ತ್ರಿ

*16 th Century Dance from Khorasan - Lady Vashti - al - Azar.

* Mauryan Sculptures —IASPOINT https;//academy. gktoday.in>mo...

* YAKSAS —Ananda Kentish Coomaraswamy.

* Indian Witchcraft - Rajaram Narayan Salatore.

*On Demonology and Witchcraft in Ceylon - Dandris de Silva Gooneratne

* P. S//www.wisdomlib.org.-yaksa aka:yaksa;15 definitions.

* Myths and Symbols in Indian Art and Civilization — Zimmerman Heinrich Robert.

* ಅನೇಕ ಗೂಗಲ್ ಶೋಧಗಂಗಾ ಲೇಖನಗಳು

.

* ಅನೇಕ ವಿಕಿಪೀಡಿಯಗಳು ಮತ್ತು Pinterest ಫೋಟೋಗಳು, ಮತ್ತು ಯೂ ಟ್ಯೂಬ್ ಗಳು.